# ಉಚಿತ ಆರೋಗ್ಯ ಹಾಗೂ ಕಣ್ಣು ತಪಾಸಣೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

79ನೇ ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ರಾಯರ ಕಿರಣ ತಂಡ ಸಾಗರ್ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ಹಾಗೂ ಕಣ್ಣು ತಪಾಸಣೆ ಶಿಬಿರವನ್ನು 15-8-26ರ ಶನಿವಾರ ಚನ್ನಪಟ್ಟಣ ತಾಲ್ಲೂಕು ಕನ್ನಮಂಗಲ ಗ್ರಾಮದ ಶಾಲಾ ಆವರಣದಲ್ಲಿ ಬೆಳಿಗ್ಗೆ 9-00ರಿಂದ ಮದ್ಯಾಹ್ನ 2-00ರವರೆಗೆ ಆಯೋಜಿಸಲಾಗಿದೆ.

ಶಿಬಿರದಲ್ಲಿ ಜನರಲ್ ಫಿಸಿಶಿಯನ್, ಸ್ತ್ರೀರೋಗ ತಜ್ಞರು, ಕೀಲು ನೋವು,ಕಣ್ಣಿನ ಪರೀಕ್ಷೆ, ಹಾಗೂ ರಕ್ತ ದಾನ ಶಿಬಿರವನ್ನು ನುರಿತ ವೈದ್ಯರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಡಾ, ಕಿರಣ್ ಎಸ್ ಮೂರ್ತಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇದೇ ಸಮಯದಲ್ಲಿ 1500ಮೊತ್ತದ ಬಿಎಂಡಿ ಪರೀಕ್ಷೆಯನ್ನು ಉಚಿತವಾಗಿ ಸೀಮಿತ ಜನರಿಗೆ ಮಾಡಲಾಗುವುದು ಎಂದು ತಿಳಿಸಿದರು. ಹೆಚ್ಚಿನ ಮಾಹಿತಿಗಾಗಿ 8904863457 ನ್ನು ಸಂಪರ್ಕಿಸಿ,

# ರಾಯಣ್ಣ ಪುತ್ಥಳಿಗೆ ಇಂದು ಮಾಲಾರ್ಪಣೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಷ್ಠಾನವತಿಯಿಂದ ಕರ್ನಾಟಕದ ಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನವರ 229ನೇ ಜಯಂತ್ಯೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 11 ಗಂಟೆಗೆ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದ ಎದುರು ಇರುವ ರಾಯಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್, ಸಚಿವ ಕೃಷ್ಣಬೈರೇಗೌಡ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ.ರೇವಣ್ಣ ಅವರುಗಳು ರಾಯಣ್ಣನವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಿದ್ದು, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರರಾವ್ ಎಂ. ಅವರು ಉಪಸ್ಥಿತರಿರಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾಜಿ ಸಚಿವ, ಶಾಸಕ ದಿನೇಶ್ ಗುಂಡೂರಾವ್ ರವರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರವೇ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ, ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ, ಮಾಜಿ ಮೇಯರ್ ಜಿ. ಪದ್ಮಾವತಿ, ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ಅಧ್ಯಕ್ಷ ಎಂ. ಶಿವರಾಜು, ಬೆಂ. ಕೇಂದ್ರ ನಗರ ಪಾಲಿಕೆ ಆಯುಕ್ತ ಜಗದೀಶ್ ಜಿ., ಅಪರ ಆಯುಕ್ತ ಹೇಮಂತ್ ಶರಣ್ ಅವರುಗಳು ಆಗಮಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ ಸಂಗೊಳ್ಳಿ ರಾಯಣ್ಣನವರ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಪ್ರತಿಷ್ಠಾನದ ಗೌರವಾಧ್ಯಕ್ಷ ಜಿ.ಎಲ್. ನಾರಾಯಣಸ್ವಾಮಿ, ಅಧ್ಯಕ್ಷ ಸಂಗೊಳ್ಳಿ ಕೃಷ್ಣಮೂರ್ತಿ, ಉಪಾಧ್ಯಕ್ಷ ಆರ್.ಜಿ. ಶಂಕರ್ ಮತ್ತು ಪದಾಧಿಕಾರಿಗಳು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಮಗಳ ವರ್ತನೆಗೆ ಬಿಜೆಪಿ ಶಾಸಕ ಸುರೇಶ್ ಗೌಡ ಕ್ಷಮೆಯಾಚನೆ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ತವ್ಯದಲ್ಲಿದ್ದ ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗೆ (ಪಿಎಸ್‌ಐ) ತಮ್ಮ ಪುತ್ರಿ ಐಶ್ವರ್ಯಾ ಕಪಾಳಮೋಕ್ಷ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಿ. ಸುರೇಶ್ ಗೌಡ ಸಾರ್ವಜನಿಕವಾಗಿ ಕ್ಷಮೆಯಾಚಿಸಿದ್ದಾರೆ.

ವಿಧಾನಸೌಧದ ಆವರಣದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಸುರೇಶ್ ಗೌಡ ಅವರು, ಮಗಳು ಆ ಕ್ಷಣದಲ್ಲಿ ತಾಳ್ಮೆ ಕಳೆದುಕೊಂಡಿರಬಹುದು. ಆದರೆ, ಸಾರ್ವಜನಿಕ ಜೀವನದಲ್ಲಿರುವವರು ಇಂತಹ ವರ್ತನೆ ತೋರಬಾರದು ಎಂದು ಹೇಳಿದ್ದಾರೆ. ಭೀಮನ ಅಮಾವಾಸ್ಯೆ ಹಿನ್ನೆಲೆಯಲ್ಲಿ ತಮ್ಮ ಮಗಳು ಇಬ್ಬರು ಚಿಕ್ಕ ಮಕ್ಕಳೊಂದಿಗೆ ಶ್ರೀರಂಗಪಟ್ಟಣ ತಾಲ್ಲೂಕಿನ ಆರತಿ ಉಕ್ಕಡ ದೇವಸ್ಥಾನಕ್ಕೆ ತೆರಳಿದ್ದರು. ದೇವಸ್ಥಾನದಲ್ಲಿ ಭಾರಿ ಸಂಖ್ಯೆಯಲ್ಲಿ ಭಕ್ತರು ಸೇರಿದ್ದ ಸಂದರ್ಭದಲ್ಲಿ ಪಿಎಸ್‌ಐ ಅವರನ್ನು ಒಳಗೆ ಬಿಡಲಿಲ್ಲ. ಆದರೆ, ವಿಐಪಿ ಸಾಲಿನಲ್ಲಿ ನಿಂತಿದ್ದ ಕೆಲವರನ್ನು ಒಳಗೆ ಕಳುಹಿಸಲಾಗುತ್ತಿತ್ತು ಎಂಬ ಕಾರಣಕ್ಕೆ ಮಾತಿನ ಚಕಮಕಿ ನಡೆದಿರಬಹುದು. ಘಟನೆಯ ಸಂದರ್ಭದಲ್ಲಿ ನಿಖರವಾಗಿ ಏನು ನಡೆದಿದೆ ಎಂಬುದು ತಮ್ಮ ಗಮನಕ್ಕೆ ಸಂಪೂರ್ಣವಾಗಿ ಬಂದಿಲ್ಲ. ಮಗಳ ಕಡೆಯಿಂದಲೂ ಏನಾಯಿತು ಎಂಬುದನ್ನು ಪೊಲೀಸರು ಆಲಿಸಬೇಕಿತ್ತು. ಈ ಸಂಬಂಧ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಈಗಾಗಲೇ ಮಾತನಾಡಿರುವುದಾಗಿ ತಿಳಿಸಿದ್ದಾರೆ. ನನ್ನ ಮಗಳದ್ದು ತಪ್ಪಿದ್ದರೆ, ನಾನು ಸಾರ್ವಜನಿಕವಾಗಿ ಕ್ಷಮೆ ಕೇಳಲು ಸಿದ್ಧನಿದ್ದೇನೆ. ಆಕೆ ಆ ಕ್ಷಣದಲ್ಲಿ ತಾಳ್ಮೆ ಕಳೆದುಕೊಂಡಿರಬಹುದು. ಆದರೆ, ನಾವು ಸಾರ್ವಜನಿಕ ಜೀವನದಲ್ಲಿರುವವರು. ಈ ರೀತಿಯ ವರ್ತನೆ ಯಾವುದೇ ಕಾರಣಕ್ಕೂ ಸರಿಯಲ್ಲ. ಹೀಗಾಗಿ ನನ್ನ ಮಗಳ ವರ್ತನೆಗಾಗಿ ನಾನೇ ಸಾರ್ವಜನಿಕವಾಗಿ ಕ್ಷಮೆಯಾಚಿಸುತ್ತೇನೆಂದು ಹೇಳಿದರು.

# ಡಿ ಕೆ ಶಿವಕುಮಾರ್ ಸಂಪುಟದಲ್ಲಿ ಮಹಿಳಾ ಸಚಿವರಿಲ್ಲ: ವಿಧಾನಸೌಧ ಆವರಣದಲ್ಲಿ ಬಿಜೆಪಿ ಶಾಸಕರ ಪ್ರತಿಭಟನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಇತ್ತೀಚೆಗೆ ವಿಸ್ತರಣೆಯಾದ ಡಿ.ಕೆ. ಶಿವಕುಮಾರ್ ನೇತೃತ್ವದ ಸಚಿವ ಸಂಪುಟದಲ್ಲಿ ಮಹಿಳಾ ಶಾಸಕರಿಗೆ ಸಚಿವರಿಗೆ ಸ್ಥಾನ ನೀಡದಿರುವುದನ್ನು ಖಂಡಿಸಿ ಬಿಜೆಪಿ ಶಾಸಕರು ಇಂದು ಶುಕ್ರವಾರ ವಿಧಾನಸೌಧದ ಆವರಣದಲ್ಲಿ ಪ್ರತಿಭಟನೆ ನಡೆಸಿದರು. ಆಡಳಿತಾರೂಢ ಕಾಂಗ್ರೆಸ್ ಸರ್ಕಾರವನ್ನು ''ಮಹಿಳಾ ವಿರೋಧಿ'' ಎಂದು ಟೀಕಿಸಿದ ಬಿಜೆಪಿ ಶಾಸಕರು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು. ವಿಧಾನಸಭೆಯ ಪ್ರತಿಪಕ್ಷ ನಾಯಕ ಆರ್. ಅಶೋಕ, ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಚಲವಾದಿ ನಾರಾಯಣಸ್ವಾಮಿ ಸೇರಿದಂತೆ ಮಹಿಳಾ ಶಾಸಕರೂ ಒಳಗೊಂಡಂತೆ ಹಲವು ಬಿಜೆಪಿ ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡರು.

ವಿಧಾನಸೌಧದ ಆವರಣದ ಪ್ರವೇಶದ್ವಾರದ ಬಳಿಯಿರುವ ನಾಡದೇವಿ ಭುವನೇಶ್ವರಿ ಪ್ರತಿಮೆ ಸಮೀಪ ಬಿಜೆಪಿ ಶಾಸಕರು ಜಮಾಯಿಸಿ, ಬಳಿಕ ವಿಧಾನಸೌಧದತ್ತ ಮೆರವಣಿಗೆ ನಡೆಸಿದರು.

ಮೇ 28ರಂದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ ಬಳಿಕ, ಜೂನ್ 3ರಂದು ಡಿ.ಕೆ. ಶಿವಕುಮಾರ್ ಅವರು 13 ಸಚಿವರೊಂದಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಅಧಿಕಾರವಹಿಸಿಕೊಂಡ ಎರಡು ತಿಂಗಳ ಬಳಿಕ, ಆಗಸ್ಟ್ 3ರಂದು ಶಿವಕುಮಾರ್ ಅವರು 19 ಸಚಿವರನ್ನು ಸಂಪುಟಕ್ಕೆ ಸೇರ್ಪಡೆಗೊಳಿಸುವ ಮೂಲಕ ಸಚಿವ ಸಂಪುಟವನ್ನು ವಿಸ್ತರಿಸಿದರು. ಇದರಿಂದ ಮುಖ್ಯಮಂತ್ರಿ ಸೇರಿದಂತೆ ಸಂಪುಟದ ಒಟ್ಟು ಸದಸ್ಯರ ಸಂಖ್ಯೆ 33ಕ್ಕೆ ಏರಿಕೆಯಾಯಿತು.

# ಗುಟ್ಕಾ, ಪಾನ್ ಮಸಾಲ ಮೇಲಿನ ಒಂದು ವರ್ಷದ ನಿಷೇಧ: ಆದೇಶ ಹಿಂಪಡೆದ ಸಿಎಂ ಡಿ ಕೆ ಶಿವಕುಮಾರ್

• ಉದಯವಾಹಿನಿ, ಬೆಂಗಳೂರು

ತಂಬಾಕು ಅಥವಾ ನಿಕೋಟಿನ್ ಒಳಗೊಂಡಿರುವ ಗುಟ್ಕಾ ಹಾಗೂ ಪಾನ್ ಮಸಾಲಾ ಉತ್ಪನ್ನಗಳ ಮೇಲೆ ಕರ್ನಾಟಕ ಸರ್ಕಾರ ಹೇರಿದ್ದ ಒಂದು ವರ್ಷದ ನಿಷೇಧವನ್ನು ಹಿಂಪಡೆಯಲು ನಿರ್ಧರಿಸಿದೆ. ನಿಷೇಧ ಜಾರಿಗೆ ಬಂದ ಕೇವಲ ಎರಡು ದಿನಗಳಲ್ಲೇ ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಧಿಕಾರಿಗಳಿಗೆ ನಿಷೇಧ ಆದೇಶವನ್ನು ಹಿಂಪಡೆಯುವಂತೆ ಸೂಚಿಸಿದ್ದಾರೆ.

ರಾಜ್ಯಾದ್ಯಂತ ತಂಬಾಕು ಅಥವಾ ನಿಕೋಟಿನ್ ಒಳಗೊಂಡ ಗುಟ್ಕಾ ಮತ್ತು ಪಾನ್ ಮಸಾಲಾ ಉತ್ಪನ್ನಗಳ ತಯಾರಿಕೆ, ಸಂಗ್ರಹಣೆ, ವಿತರಣೆ, ಸಾಗಣೆ ಮತ್ತು ಮಾರಾಟಕ್ಕೆ ಆಹಾರ ಸುರಕ್ಷತಾ ಆಯುಕ್ತರು ಒಂದು ವರ್ಷದ ನಿಷೇಧ ವಿಧಿಸಿದ್ದರು.ತಮ್ಮ ಗಮನಕ್ಕೆ ತಾರದೆ ಈ ಆದೇಶ ಹೊರಡಿಸಿರುವುದಕ್ಕೆ ಡಿಕೆ ಶಿವಕುಮಾರ್ ಅಸಮಾಧಾನಗೊಂಡಿದ್ದರು. ಈ ನಿಷೇಧದಿಂದ ಹಲವು ರೈತರಿಗೆ ನಷ್ಟ ಉಂಟಾಗಬಹುದು ಎಂಬ ಕಾರಣ ನೀಡಿ, ಆದೇಶವನ್ನು ತಕ್ಷಣವೇ ಹಿಂಪಡೆಯುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ ಎನ್ನಲಾಗಿದೆ. ಇದಕ್ಕೂ ಮುನ್ನ ಗುರುವಾರ ಬಿಜೆಪಿ ಮತ್ತು ಕಾಂಗ್ರೆಸ್ ಶಾಸಕರ ನಿಯೋಗವೊಂದು ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ಅವರನ್ನು ಭೇಟಿ ಮಾಡಿ ನಿಷೇಧ ಆದೇಶವನ್ನು ಹಿಂಪಡೆಯುವಂತೆ ಮನವಿ ಮಾಡಿತ್ತು.

# ವಿಧಾನ ಪರಿಷತ್ ನೂತನ ಸಭಾಪತಿಯಾಗಿ ಸಲೀಂ ಅಹ್ಮದ್ ಆಯ್ಕೆ: ಧ್ವನಿ ಮತದ ಮೂಲಕ ಅಂಗೀಕಾರ

• ಉದಯವಾಹಿನಿ, ವಿಜಯಪುರ

ರಾಜ್ಯ ವಿಧಾನಮಂಡಲದ ಮುಂಗಾರು ಅಧಿವೇಶನದ ಎರಡನೇ ದಿನವಾದ ಶುಕ್ರವಾರ ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆನಡೆದ ಚುನಾವಣೆಯಲ್ಲಿ ಸಲೀಂ ಅಹ್ಮದ್ ಅವರು ಆಯ್ಕೆಯಾಗಿದ್ದಾರೆ. ಧ್ವನಿಮತದ ಮೂಲಕ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ ಸಲೀಂ ಅಹ್ಮದ್ ಪರವಾಗಿ 38 ಮತಗಳು ಚಲಾವಣೆಯಾದರೆ, ಪಿ.ಎಚ್.ಪೂಜಾರ್ ಪರವಾಗಿ 30 ಮತಗಳು ಚಲಾವಣೆಯಾದವು.

ಬಸವರಾಜ ಹೊರಟ್ಟಿ ಅವರ ರಾಜೀನಾಮೆಯಿಂದ ತೆರವಾಗಿರುವ ವಿಧಾನ ಪರಿಷತ್ ಸಭಾಪತಿ ಸ್ಥಾನಕ್ಕೆ ಕಾಂಗ್ರೆಸ್ ನಿಂದ ಸಲೀಂ ಅಹ್ಮದ್ ಹಾಗೂ ಮೈತ್ರಿಕೂಟದಿಂದ ಬಿಜೆಪಿಯ ಪಿ.ಎಚ್.ಪೂಜಾರ್ ಕಣದಲ್ಲಿದ್ದರು. ವಿಧಾನ ಪರಿಷತ್ ನಲ್ಲಿ ಒಟ್ಟು 75 ಸ್ಥಾನಗಳ ಪೈಕಿ ಕಾಂಗ್ರೆಸ್ 38, ಬಿಜೆಪಿ 25, ಜೆಡಿಎಸ್ 6, ಪಕ್ಷೇತರ-1 ಸ್ಥಾನಗಳಿವೆ. ಐದು ಸದಸ್ಯ ಸ್ಥಾನಗಳು ಖಾಲಿಯಿವೆ. ಸಭಾಪತಿ ಸ್ಥಾನಕ್ಕೆ ಏಳು ಪ್ರಸ್ತಾವಗಳು ಬಂದಿದ್ದವು.

# ಹಲವು ರಸ್ತೆಗಳು ಬಂದ್, ಈ ರಸ್ತೆಗಳಲ್ಲಿ ವಾಹನ ಸಂಚಾರ ಇರಲ್ಲ..!

## ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರದ ದೃಷ್ಟಿಯಿಂದ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದ್ದು

• ಉದಯವಾಹಿನಿ, ಬೆಂಗಳೂರು

1 ಬಿಎಂಟಿಸಿ ಹೆಚ್ಚುವರಿ ಬಸ್ ವ್ಯವಸ್ಥೆ
2 ವಾಹನ ನಿಲುಗಡೆಗೆ ನಿಗದಿತ ಸ್ಥಳಗಳು
3 ಕ್ಯಾಬ್‌ಗಳಿಗೆ ಪಿಕ್‌ಅಪ್ ಮತ್ತು ಡ್ರಾಪ್

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಶನಿವಾರ ವಿಧಾನಸೌಧದ ಮುಂಭಾಗದಲ್ಲಿ ಮಧ್ಯಾಹ್ನ 12ರಿಂದ ರಾತ್ರಿ 10ರವರೆಗೆ 'ಫ್ರೀಡಂ ಹಬ್ಬ' ನಡೆಯಲಿರುವ ಹಿನ್ನೆಲೆಯಲ್ಲಿ ನಗರ ಸಂಚಾರ ಪೊಲೀಸರು ಹಲವು ಪ್ರಮುಖ ಸಂಚಾರ ನಿರ್ಬಂಧ ಹಾಗೂ ಪರ್ಯಾಯ ಮಾರ್ಗಗಳ ವ್ಯವಸ್ಥೆ ಮಾಡಿದ್ದಾರೆ.

ಸಾರ್ವಜನಿಕರ ಸುರಕ್ಷತೆ ಮತ್ತು ಸುಗಮ ಸಂಚಾರದ ದೃಷ್ಟಿಯಿಂದ ಕೆಲವು ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದ್ದು, ಮೆಟ್ರೋ ನಿಲ್ದಾಣಗಳ ಪ್ರವೇಶ-ನಿರ್ಗಮನದಲ್ಲೂ ತಾತ್ಕಾಲಿಕ ಬದಲಾವಣೆ ಮಾಡಲಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರೋ ನಿಲ್ದಾಣ ಹಾಗೂ ವಿಧಾನಸೌಧ ಮೆಟ್ರೋ ನಿಲ್ದಾಣಗಳಲ್ಲಿ ಬೆಳಗ್ಗೆ 10ರಿಂದ ರಾತ್ರಿ 9.30ರವರೆಗೆ ಪ್ರವೇಶ ಮತ್ತು ನಿರ್ಗಮನವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗುತ್ತದೆ.

ಸಾರ್ವಜನಿಕರು ಕಬ್ಬನ್ ಪಾರ್ಕ್ ಮೆಟ್ರೋ ನಿಲ್ದಾಣ ಹಾಗೂ ಸರ್ ಎಂ. ವಿಶ್ವೇಶ್ವರಯ್ಯ ಮೆಟ್ರೋ ನಿಲ್ದಾಣವನ್ನು (ಸೆಂಟ್ರಲ್ ಕಾಲೇಜು) ಬಳಸುವಂತೆ ಸೂಚಿಸಲಾಗಿದೆ. ಅಂಬೇಡ್ಕರ್ ರಸ್ತೆಯಿಂದ ಕೆ.ಆರ್. ವೃತ್ತದ ಕಡೆಗೆ ಹಾಗೂ ಕೆ.ಆರ್. ವೃತ್ತದಿಂದ ಶೇಷಾದ್ರಿ ರಸ್ತೆಯ ಮೂಲಕ ಶಿವಾಜಿನಗರ ಮತ್ತು ವಸಂತನಗರದ ಕಡೆಗೆ ಅಂಬೇಡ್ಕರ್ ರಸ್ತೆಯ ಮಾರ್ಗವಾಗಿ ಎಲ್ಲ ರೀತಿಯ ವಾಹನ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ. ಕೆ.ಆರ್. ವೃತ್ತದ ಕಡೆಗೆ ತೆರಳುವ ವಾಹನಗಳು ಬಾಳೇಕುಂದ್ರಿ ಜಂಕ್ಷನ್‌ನಿಂದ ಕನ್ನಿಂಗ್ ಹ್ಯಾಮ್ ರಸ್ತೆ ಮೂಲಕ ತೆರಳಿ, ಚಂದ್ರಿಕಾ ಬಳಿ ಎಡಕ್ಕೆ ತಿರುಗಿ ಎಲ್‌ಆರ್‌ಡಿಇ ಬಸವೇಶ್ವರ ಜಂಕ್ಷನ್ ಪ್ಯಾಲೇಸ್ ರಸ್ತೆ ಮೂಲಕ ಕೆ.ಆರ್. ವೃತ್ತ ತಲುಪಬಹುದು.


ಉದಯವಾಹಿನಿ ಚಿತ್ರ

ಮತ್ತೊಂದು ಪರ್ಯಾಯ ಮಾರ್ಗವಾಗಿ ಬಾಳೇಕುಂದ್ರಿ ಜಂಕ್ಷನ್‌ನಿಂದ ಸಿಟಿಒ, ಕ್ವೀನ್ಸ್ ಜಂಕ್ಷನ್, ಸಿದ್ದಲಿಂಗಯ್ಯ ಜಂಕ್ಷನ್, ಆರ್‌ಆರ್‌ಎಂಆರ್ ಹಾಗೂ ಕಾರ್ಪೊರೇಷನ್ ವೃತ್ತದ ಮೂಲಕ ತೆರಳಬಹುದು.

ಬಿಆರ್‌ವಿ ರಸ್ತೆಯಿಂದ ಬರುವ ವಾಹನಗಳು ಅನಿಲ್ ಕುಂಬ್ಳೆ ವೃತ್ತದ ಮೂಲಕ ಬಲಕ್ಕೆ ತಿರುಗಿ ಕ್ವೀನ್ಸ್ ಜಂಕ್ಷನ್, ಸಿದ್ದಲಿಂಗಯ್ಯ ಜಂಕ್ಷನ್, ಆರ್‌ಆರ್‌ಎಂಆರ್ ಮತ್ತು ಕಾರ್ಪೊರೇಷನ್ ವೃತ್ತದ ಮೂಲಕ ಸಾಗಬಹುದು.ಮತ್ತೊಂದು ಮಾರ್ಗವಾಗಿ ರಾಜಭವನ ರಸ್ತೆಯಲ್ಲಿ ತೆರಳಿ ಚಾಲುಕ್ಯ ವೃತ್ತದಲ್ಲಿ ಎಡಕ್ಕೆ ತಿರುಗಿ ಪ್ಯಾಲೇಸ್ ರಸ್ತೆಯ ಮೂಲಕ ಕೆ.ಆರ್. ವೃತ್ತದ ಕಡೆಗೆ ಹೋಗಬಹುದು.

ಕೆ.ಆರ್. ವೃತ್ತದಿಂದ ಶೇಷಾದ್ರಿ ರಸ್ತೆಯ ಮೂಲಕ ಶಿವಾಜಿನಗರ ಮತ್ತು ವಸಂತನಗರದ ಕಡೆಗೆ ತೆರಳುವ ವಾಹನಗಳು ಮಹಾರಾಣಿ ಫ್ಲೈಓವರ್ ಬಳಿ ಎಡಕ್ಕೆ ತಿರುಗಿ ಪ್ಯಾಲೇಸ್ ರಸ್ತೆಯ ಬಸವೇಶ್ವರ ವೃತ್ತದ ಮೂಲಕ ವಸಂತನಗರ ಅಥವಾ ಶಿವಾಜಿನಗರ ತಲುಪಬಹುದು. ಕೆ.ಆರ್. ವೃತ್ತದಿಂದ ಮತ್ತೊಂದು ಪರ್ಯಾಯವಾಗಿ ನೃಪತುಂಗ ರಸ್ತೆಕಾರ್ಪೊರೇಷನ್ ವೃತ್ತಕೆಬಿ ರಸ್ತೆ ಮೂಲಕ ಶಿವಾಜಿನಗರದ ಕಡೆಗೆ ತೆರಳಲು ಅವಕಾಶವಿದೆ.ಕ್ಯಾಬ್‌ಗಳ ಪಿಕ್‌ಅಪ್‌ಗಾಗಿ ಸಿಟಿಒ ಜಂಕ್ಷನ್ ಹಾಗೂ ಕೆ.ಆರ್. ವೃತ್ತವನ್ನು ನಿಗದಿಪಡಿಸಲಾಗಿದೆ. ಡ್ರಾಪ್ ಮಾಡಲು ಕಬ್ಬನ್ ಪಾರ್ಕ್ ಮೆಟ್ರೋ ಹಾಗೂ ಕೆ.ಆರ್. ವೃತ್ತವನ್ನು ಬಳಸಬಹುದು.ಪ್ರಯಾಣಿಕರ ಅನುಕೂಲಕ್ಕಾಗಿ ಬಿಎಂಟಿಸಿ ಹೆಚ್ಚುವರಿ ಬಸ್‌ಗಳನ್ನು ಸಂಚರಿಸಲಿದೆ. ಎಂ.ಎಸ್. ಬಿಲ್ಡಿಂಗ್ ಒಳಭಾಗದ ದೇವರಾಜ ಅರಸು ರಸ್ತೆಯಿಂದ ಹೊರಡುವ ಬಸ್‌ಗಳು ಟೌನ್‌ಹಾಲ್, ಸಿಟಿ ಮಾರ್ಕೆಟ್, ಮೈಸೂರು ರಸ್ತೆ ಸ್ಯಾಟಲೈಟ್, ಶೇಷಾದ್ರಿಪುರಂ, ಲುಲು ಮಾಲ್, ಮಾಗಡಿ ರಸ್ತೆ, ಸುಮನಹಳ್ಳಿ, ಶಾಂತಿನಗರ, ಮಡಿವಾಳ, ಎಲೆಕ್ಟ್ರಾನಿಕ್ ಸಿಟಿ, ಲಾಲ್‌ಬಾಗ್ ರಸ್ತೆ, ಬನಶಂಕರಿ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ನವರಂಗ್ ಥಿಯೇಟರ್, ವೆಸ್ಟ್ ಆಫ್ ಕಾರ್ಡ್ ರಸ್ತೆ, ಶಂಕರಮಠ ಹಾಗೂ ಬಸವೇಶ್ವರನಗರ ಮಾರ್ಗಗಳಲ್ಲಿ ಸಂಚರಿಸಲಿವೆ.

**ಪಾರ್ಕಿಂಗ್ ನಿಷೇಧ**

ಕ್ವೀನ್ಸ್ ರಸ್ತೆಯ ಎರಡೂ ಬದಿಗಳಲ್ಲಿ ಬಾಳೇಕುಂದ್ರಿ ವೃತ್ತದಿಂದ ಕ್ವೀನ್ಸ್ ವೃತ್ತದವರೆಗೆ ಹಾಗೂ ಕ್ವೀನ್ಸ್ ವೃತ್ತದಿಂದ ಸಿಟಿಒ ಜಂಕ್ಷನ್‌ವರೆಗೆ ವಾಹನ ನಿಲುಗಡೆಗೆ ಅವಕಾಶ ಇರುವುದಿಲ್ಲ. ಲೋಕಭವನ್ ರಸ್ತೆ, ಟಿ. ಚೌಡಯ್ಯ ರಸ್ತೆ ಮತ್ತು ರೇಸ್‌ಕೋರ್ಸ್ ರಸ್ತೆಯಲ್ಲೂ ಪಾರ್ಕಿಂಗ್ ನಿಷೇಧಿಸಲಾಗಿದೆ.

**ವಾಹನ ನಿಲುಗಡೆಗೆ ನಿಗದಿತ ಸ್ಥಳಗಳು**

ಸ್ಕೌಟ್ಸ್ ಆಂಡ್ ಗೈಡ್ಸ್ ಪಾರ್ಕಿಂಗ್ ಪ್ರದೇಶ ಫ್ರೀಡಂ ಪಾರ್ಕ್ ಬಹುಮಹಡಿ ಪಾರ್ಕಿಂಗ್ ಕಂಠೀರವ ಕ್ರೀಡಾಂಗಣ ಜ್ಞಾನಜ್ಯೋತಿ ಸಭಾಂಗಣದ ಸಮೀಪದ ವಿಶ್ವವಿದ್ಯಾಲಯ ಪಾರ್ಕಿಂಗ್ ಪ್ರದೇಶ ಸರ್ಕಾರಿ ಕಲಾ ಕಾಲೇಜು ಪಾರ್ಕಿಂಗ್ ಪ್ರದೇಶ ಯುಬಿ ಸಿಟಿ ಶಿವಾಜಿನಗರ ಬಹುಮಹಡಿ ಪಾರ್ಕಿಂಗ್ ನೆಹರು ತಾರಾಲಯ ಸೇಂಟ್ ಜೋಸೆಫ್ ಹೈಸ್ಕೂಲ್ ಮೈದಾನ ಲಿಂಕ್ ರಸ್ತೆ (ಚಿನ್ನಸ್ವಾಮಿ ಕ್ರೀಡಾಂಗಣ)ದಲ್ಲಿ ವಾಹನ ನಿಲುಗಡೆ ಮಾಡಬಹುದು.

# ಸಿದ್ದು ಸಂಪುಟದಲ್ಲಿದ್ದಾಗೇಕೆ ರಾಜೀನಾಮೆ ನೀಡಿದ್ದಿರಿ? ನಿರಪರಾಧಿ ಎಂದು ಸಾಬೀತು ಪಡಿಸಿ ಮತ್ತೆ ಸಚಿವರಾಗಿ!

• ಉದಯವಾಹಿನಿ, ಬೆಂಗಳೂರು

ಸಿದ್ದರಾಮಯ್ಯ ಸಂಪುಟದಿಂದ ಬಿ. ನಾಗೇಂದ್ರ ಅವರು ಏಕೆ ರಾಜೀನಾಮೆ ನೀಡಿದರು ಎಂಬುದನ್ನು ರಾಜ್ಯದ ಜನತೆಗೆ ಸ್ಪಷ್ಟಪಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಆಗ್ರಹಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ರೂ.185 ಕೋಟಿ ಹಣಕಾಸು ಅಕ್ರಮ ಪ್ರಕರಣದಲ್ಲಿ ಆರೋಪಿಯಾಗಿರುವ ನಾಗೇಂದ್ರ ಅವರ ರಾಜೀನಾಮೆ ವಿಚಾರದಲ್ಲಿ ಬಿಜೆಪಿ ತನ್ನ ಒತ್ತಾಯವನ್ನು ಮುಂದುವರಿಸಲಿದೆ ಎಂದು ಹೇಳಿದರು. ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ರೂ.185 ಕೋಟಿ ಹಣಕಾಸು ಅಕ್ರಮ ಪ್ರಕರಣದಲ್ಲಿ ನಾಗೇಂದ್ರ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ತಮ್ಮ ನಿರಪರಾಧಿತ್ವವನ್ನು ಸಾಬೀತುಪಡಿಸಿದ ಬಳಿಕ ನಾಗೇಂದ್ರ ಅವರು ಮತ್ತೆ ಸಚಿವರಾಗುವುದಕ್ಕೆ ಬಿಜೆಪಿಗೆ ಯಾವುದೇ ಆಕ್ಷೇಪವಿಲ್ಲ ಎಂದು ತಿಳಿಸಿದರು.

ಬಿಜೆಪಿಗೆ ನಾಗೇಂದ್ರರ ಬಗ್ಗೆ ದ್ವೇಷ ಇಲ್ಲ. ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗ ತಾವು ರಾಜೀನಾಮೆ ಕೊಡುವ ಪ್ರಸಂಗ ಯಾಕೆ ನಿರ್ಮಾಣವಾಯಿತೆಂದು ನಾಗೇಂದ್ರ ಅವರೇ ತಿಳಿಸಬೇಕು. ವಾಲ್ಮೀಕಿ ಅಭಿವೃದ್ಧಿ ನಿಗಮದ 185 ಕೋಟಿ ರೂ. ಲೂಟಿಯ ಹಗರಣದಲ್ಲಿ ನಾಗೇಂದ್ರ ಅವರು ಆರೋಪಿ.


ಉದಯವಾಹಿನಿ ಚಿತ್ರ

ಚಂದ್ರಶೇಖರ್ ಅವರು ಆತ್ಮಹತ್ಯೆ ಮಾಡಿಕೊಂಡಿದ್ದು, ಬಳಿಕ ತನಿಖೆ ಆರಂಭವಾಗಿದ್ದು, ತೆಲಂಗಾಣಕ್ಕೆ ಹಣ ವರ್ಗಾವಣೆಯಾಗಿ ದುರುಪಯೋಗ ಆಗಿರುವುದು ರಾಜ್ಯದ ಜನರಿಗೆ ಗೊತ್ತಿದೆ. ಅವರ ವಿರುದ್ಧ ಆರೋಪಪಟ್ಟಿ ಸಲ್ಲಿಕೆಯಾಗಿದ್ದು, ಅಪರಾಧಿ ಸ್ಥಾನದಿಂದ ಅವರಿನ್ನೂ ಹೊರಬಂದಿಲ್ಲ. ನಿರಪರಾಧಿ ಎಂದು ಸಾಬೀತಾದ ಬಳಿಕ ಅವರು ಸಚಿವರಾದರೆ ನಮ್ಮದೇನೂ ಅಭ್ಯಂತರವಿಲ್ಲ. ನಾಗೇಂದ್ರ ಅವರೇ ಅಂಥ ಘೋರ ಆಪಾದನೆ, ಆರೋಪ ನಿಮ್ಮ ಮೇಲಿದ್ದ ಸಂದರ್ಭದಲ್ಲಿ ಈ ರೀತಿ ಜಾತಿ ಹೆಸರು ಹೇಳಿಕೊಂಡು ತಪ್ಪಿಸಿಕೊಳ್ಳುವ ಪ್ರಯತ್ನ ಮಾಡದಿರಿ ಎಂದರು.

# ಅಕ್ಟೋಬರ್‌ನಿಂದ 450 ಕೋಟಿ ರೂ. ವೆಚ್ಚದ ವೈಟ್-ಟಾಪಿಂಗ್ ಕಾಮಗಾರಿ ಆರಂಭ..!

• ಉದಯವಾಹಿನಿ, ಬೆಂಗಳೂರು

ಸಿಲಿಕಾನ್ ಸಿಟಿಯ ಅತ್ಯಂತ ಬ್ಯುಸಿ ರಸ್ತೆಗಳಲ್ಲಿ ಒಂದಾದ ಹೊರ ವರ್ತುಲ ರಸ್ತೆಯ ಪ್ರಯಾಣಿಕರಿಗೆ ಮತ್ತೊಂದು ಸಂಚಾರ ದಟ್ಟಣೆಯ ಬಿಸಿ ತಟ್ಟಲಿದೆ.

ಹೊರ ವರ್ತುಲ ರಸ್ತೆಯ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾಗಿರುವ ಬರೋಬ್ಬರಿ 450 ಕೋಟಿ ರೂ. ವೆಚ್ಚದ ವೈಟ್-ಟಾಪಿಂಗ್ (ಕಾಂಕ್ರೀಟ್ ರಸ್ತೆ) ಕಾಮಗಾರಿಯು ಈ ವರ್ಷದ ಅಕ್ಟೋಬರ್ ನಿಂದ ಅಧಿಕೃತವಾಗಿ ಆರಂಭವಾಗಲಿದೆ.

ಬೆಂಗಳೂರಿನ ಹೊರವರ್ತುಲ ರಸ್ತೆಯ ವೈಟ್ ಟಾಪಿಂಗ್ ಕಾಮಗಾರಿಯನ್ನು ಅಕ್ಟೋಬರ್‌ನಿಂದ ಆರಂಭಿಸುವಂತೆ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಅವರು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಕಾಮಗಾರಿ ನಡೆಯುವ'ಂಚಾರಕ್ಕೆ ಯಾವುದೇ ತೊಂದರೆಯಾಗದಂತೆ ಈ ರಸ್ತೆಯ ಸುತ್ತಮುತ್ತ ಇರುವ ಕಂಪನಿಗಳೊಂದಿಗೆ ಸಮನ್ವಯ ಸಾಧಿಸಿ, ಶೇ.50ರಷ್ಟು ಉದ್ಯೋಗಿಗಳು ಮನೆಯಿಂದಲೇ ಕೆಲಸ ಮಾಡುವ ವ್ಯವಸ್ಥೆ ಕಲ್ಪಿಸುವಂತೆ ಸಲಹೆ ನೀಡಿದ್ದಾರೆ. ಯೋಜನೆಗೆ ಸಂಬಂಧಿಸಿದಂತೆ ಸಚಿವರು ಮುಖ್ಯಮಂತ್ರಿ


ಉದಯವಾಹಿನಿ ಚಿತ್ರ

ಆರ್ಥಿಕ ಸಲಹೆಗಾರ ಎಲ್.ಕೆ. ಅತೀಕ್, ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್, ವಿಶೇಷ ಆಯುಕ್ತ ನಿತೇಶ್, ಡಿಸಿಪಿ ಶಾಹಿಲ್ ಬಗ್ಲಾ, ಬಿ-ಸ್ಮೈಲ್ ತಾಂತ್ರಿಕ ನಿರ್ದೇಶಕ ಪ್ರಹ್ಲಾದ್, ಮುಖ್ಯ ಎಂಜಿನಿಯರ್‌ಗಳು, ಕಾರ್ಯಪಾಲಕ ಎಂಜಿನಿಯರ್‌ಗಳು ಸೇರಿದಂತೆ ವಿವಿಧ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂವರೆಗೆ ಸುಮಾರು 17 ಕಿ.ಮೀ. ಉದ್ದದ ಹೊರವರ್ತುಲ ರಸ್ತೆ ಅಭಿವೃದ್ಧಿಪಡಿಸುವ ಯೋಜನೆಗೆ ಸರ್ಕಾರ ಈಗಾಗಲೇ ರೂ.450 ಕೋಟಿ ಮಂಜೂರು ಮಾಡಿದೆ. ಈ ಯೋಜನೆಗೆ ಸಂಬಂಧಿಸಿದಂತೆ ಹೊರವರ್ತುಲ ರಸ್ತೆಯಲ್ಲಿರುವ ವಿವಿಧ ಕಂಪನಿಗಳ ಪ್ರತಿನಿಧಿಗಳೊಂದಿಗೆ ನಡೆದ ಸಭೆಯ ಹಿನ್ನೆಲೆಯಲ್ಲಿ ಸಚಿವರು ಅಧಿಕಾರಿಗಳಿಗೆ ಹಲವು ಸೂಚನೆಗಳನ್ನು ನೀಡಿದ್ದಾರೆ.

# ಕಾಂಗ್ರೆಸ್ ಸರ್ಕಾರದ ನಿಜ ಬಣ್ಣ ಮತ್ತೊಮ್ಮೆ ಬಯಲಾಗಿದೆ': ಆರ್ ಅಶೋಕ್

• ಉದಯವಾಹಿನಿ, ಬೆಂಗಳೂರು

ಕರ್ನಾಟಕದ ಕಾಂಗ್ರೆಸ್ ಸರ್ಕಾರದ ನಿಜವಾದ ಮುಖ ಹಾಗೂ ನಮ್ಮ ಮಾತೃಭೂಮಿಯ ಬಗ್ಗೆ ಅದರ ಸಂಪೂರ್ಣ ಅಗೌರವವನ್ನು ನೋಡಿ, ಸಚಿವ ಬಿ. ಝಡ್. ಜಮೀರ್ ಅಹ್ಮದ್ ಖಾನ್ ಅವರು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಅಧಿಕೃತವಾಗಿ ಪತ್ರ ಬರೆದು, ವಿಜಯನಗರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ದಿನಾಚರಣೆಯಂದು ತ್ರಿವರ್ಣ ಧ್ವಜಾರೋಹಣ ಮಾಡುವ ಕರ್ತವ್ಯದಿಂದ ವಿನಾಯಿತಿ ನೀಡುವಂತೆ ಮನವಿ ಮಾಡಿದ್ದಾರೆ ಎಂದು ವಿಪಕ್ಷ ನಾಯಕ ಆರ್ ಅಶೋಕ್ ಟೀಕಿಸಿದ್ದಾರೆ. ಸಚಿವ ಜಮೀರ್ ಅಹ್ಮದ್ ಖಾನ್ ಮನವಿಗೆ ನೀಡಿರುವ ಕಾರಣವೇನು? ಸ್ಥಳೀಯ ಸಂಸ್ಥೆಗಳ ಚುನಾವಣೆಗಳು, ಮುಂಬರುವ ವಿಧಾನಸಭಾ ಉಪಚುನಾವಣೆಗಳು ಹಾಗೂ ಪಕ್ಷದ ಆಂತರಿಕ ರಾಜಕೀಯ ಚಟುವಟಿಕೆಗಳ ಮೇಲೆ ಗಮನಹರಿಸಬೇಕಿರುವುದರಿಂದ ತಮ್ಮ ಬಳಿ ಸಮಯವಿಲ್ಲ ಎಂದು ಅವರು ಹೇಳಿದ್ದಾರೆ. ಇದು ನಮ್ಮ ಸಂವಿಧಾನಕ್ಕೆ ಸಂಪೂರ್ಣ ಅವಮಾನ ಮತ್ತು ಕೋಟ್ಯಂತರ ಭಾರತೀಯರಿಗೆ ನೇರ ಅಪಮಾನ. ಸ್ವಾತಂತ್ರ್ಯ ದಿನದಂದು ರಾಷ್ಟ್ರಧ್ವಜ ಹಾರಿಸುವ ಪವಿತ್ರ ಕರ್ತವ್ಯಕ್ಕಿಂತ ಪಕ್ಷದ ರಾಜಕಾರಣಕ್ಕೆ ಹೆಚ್ಚಿನ ಆದ್ಯತೆ ನೀಡುವುದನ್ನು ಸಚಿವರೊಬ್ಬರು ಹೇಗೆ ಸಮರ್ಥಿಸಿಕೊಳ್ಳಬಹುದೇ ಎಂದು ಅಶೋಕ್ ಕೇಳಿದ್ದಾರೆ.


ಉದಯವಾಹಿನಿ ಚಿತ್ರ


ಸಚಿವ ಜಮೀರ್ ಮತ್ತು ಕರ್ನಾಟಕ ಕಾಂಗ್ರೆಸ್‌ಗೆ ರಾಜಕೀಯ ಅಧಿಕಾರ, ಚುನಾವಣಾ ಕಾರ್ಯತಂತ್ರ ಹಾಗೂ ಪಕ್ಷದ ನಿಷ್ಠೆ ರಾಷ್ಟ್ರದ ಹೆಮ್ಮೆ, ಸ್ವಾತಂತ್ರ್ಯ ಹೋರಾಟಗಾರರು ಮತ್ತು ಪವಿತ್ರ ತ್ರಿವರ್ಣ ಧ್ವಜಕ್ಕಿಂತಲೂ ಸದಾ ಮುಖ್ಯವಾಗಿರುವಂತೆ ಕಾಣುತ್ತಿದೆ.

ರಾಷ್ಟ್ರಧ್ವಜವನ್ನು ಎರಡನೇ ಆದ್ಯತೆಯಾಗಿ ಪರಿಗಣಿಸುವ ಸಚಿವರು ಇನ್ನು ಒಂದು ಕ್ಷಣವೂ ಸಾರ್ವಜನಿಕ ಹುದ್ದೆಯಲ್ಲಿ ಮುಂದುವರಿಯುವ ನೈತಿಕ ಮತ್ತು ಸಾಂವಿಧಾನಿಕ ಹಕ್ಕನ್ನು ಕಳೆದುಕೊಂಡಿದ್ದಾರೆ.

> **ಇಂತಹ ಅಹಂಕಾರಿ ಮತ್ತು ರಾಷ್ಟ್ರವಿರೋಧಿ ಮನೋಭಾವ ಕಾಂಗ್ರೆಸ್ ಸಂಸ್ಕೃತಿಯಲ್ಲೇ ಆಳವಾಗಿ ಬೇರೂರಿದೆ. ಪಕ್ಷದ ನಾಯಕರು ಚುನಾವಣಾ ಲೆಕ್ಕಾಚಾರಗಳಿಗೆ ದೇಶದ ಸ್ವಾತಂತ್ರ್ಯವನ್ನು ಗೌರವಿಸುವುದಕ್ಕಿಂತ ಹೆಚ್ಚಿನ ಆದ್ಯತೆ ನೀಡಿದಾಗ, ಅವರ ನಿಜವಾದ ನಿಷ್ಠೆ ಎಲ್ಲಿದೆ ಎಂಬುದು ಬಹಿರಂಗವಾಗುತ್ತದೆ.-** ಆರ್ ಅಶೋಕ್

# ವಿಧಾನಸಭಾ ಸ್ಪೀಕರ್ ಆಗಿ ಜಿ.ಎಸ್. ಪಾಟೀಲ್ ಆಯ್ಕೆ; ಅವಿರೋಧವಾಗಿ ಆಯ್ಕೆಯಾದ ರೋಣ ಶಾಸಕ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಕರ್ನಾಟಕ ವಿಧಾನಸಭೆಯ ನೂತನ ಸ್ಪೀಕರ್ ಆಗಿ ಗದಗದ ರೋಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಗುರುಪಾದಗೌಡ ಸಂಗನಗೌಡ ಪಾಟೀಲ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಜಿ.ಎಸ್. ಪಾಟೀಲ್ ಎಂದೇ ಜನಪ್ರಿಯರಾಗಿರುವ ಅವರ ಹೆಸರನ್ನು ಸ್ಪೀಕರ್ ಸ್ಥಾನಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೂಚಿಸಿದರು ಮತ್ತು ಉಪಮುಖ್ಯಮಂತ್ರಿ ಜಿ. ಪರಮೇಶ್ವರ ಅನುಮೋದಿಸಿದರು.

**ಆ ಕುರಿತ ವರದಿ ಇಲ್ಲಿದೆ:** ನಡೆದ ಸಭೆಯಲ್ಲಿ ಹಂಗಾಮಿ ಸ್ಪೀಕರ್ ಟಿ.ಬಿ. ಜಯಚಂದ್ರ ಅವರ ನೇತೃತ್ವದಲ್ಲಿ ಈ ಆಯ್ಕೆ ಪ್ರಕ್ರಿಯೆ ನಡೆದಿದ್ದು, ಈ ಮೊದಲು ಸ್ಪೀಕರ್ ಆಗಿದ್ದ ಯು.ಟಿ. ಖಾದರ್ ಅವರು ಸಿಎಂ ಡಿಕೆಶಿ ನೇತೃತ್ವದ ಸರ್ಕಾರದಲ್ಲಿ ಸಚಿವ ಸಂಪುಟ ಸೇರುವ ಸಲುವಾಗಿ ಜೂನ್ 3 ರಂದು ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು.

ಕಾಂಗ್ರೆಸ್ ಪಕ್ಷವು ತನ್ನ ಅಧಿಕೃತ ಲೆಟರ್ ಹೆಡ್‌ನಲ್ಲಿ ಸ್ಪೀಕರ್ ಹೆಸರನ್ನು ಮೊದಲೇ ಪ್ರಕಟಿಸಿ ಸದನದ ಗೌರವಕ್ಕೆ ಧಕ್ಕೆ ತಂದಿದೆ ಎಂದು ಆರೋಪಿಸಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸ್ಪೀಕರ್ ಆಯ್ಕೆ ಪ್ರಕ್ರಿಯೆಯನ್ನು ಬಹಿಷ್ಕರಿಸಿದ್ದವು. ಹೀಗಾಗಿ ಯಾವುದೇ ಪ್ರತಿಪಕ್ಷದ ಅಭ್ಯರ್ಥಿ ಇಲ್ಲದೆ ಜಿ.ಎಸ್. ಪಾಟೀಲ್ ಅವರು ಅವಿರೋಧವಾಗಿ ಧ್ವನಿ ಮತದ ಮೂಲಕ ಆಯ್ಕೆಯಾದರು.

# ಪಾಕ್ ಮೂಲದ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಶಂಕೆ: ಮೂವರ ಬಂಧನ!

## ಸೆಕ್ಯುರಿಟಿ ಗಾರ್ಡ್ ಅಸಪುಲ್ ಮಲ್ಲಿಕ್, ಟಿಟಿಪಿ ಸದಸ್ಯನೊಬ್ಬನಿಗೆ ಧ್ವನಿ ಕರೆಗಳನ್ನು ಮಾಡಿ ಆಡಿಯೊ ರೆಕಾರ್ಡಿಂಗ್‌ಗಳನ್ನು ಕಳುಹಿಸಿದ್ದ

• ಉದಯವಾಹಿನಿ, ಬೆಂಗಳೂರು

1 ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್
2 ಪಾಕಿಸ್ತಾನ ಸೇನೆ ನಡೆಸಿದ ದೌರ್ಜನ್ಯ
3 ಸಂಘರ್ಷದ ಬಗ್ಗೆಯೂ ಕೋಪ ವ್ಯಕ್ತ

ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳೊಂದಿಗೆ ಸಂಪರ್ಕ ಹೊಂದಿರುವ ಶಂಕೆಯ ಮೇಲೆ ಬೆಂಗಳೂರು ಮತ್ತು ಕಲಬುರಗಿಯಲ್ಲಿ ಮೂವರು ವ್ಯಕ್ತಿಗಳನ್ನು ಬಂಧಿಸಲಾಗಿದೆ.

ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ್ (ಟಿಟಿಪಿ) ಜೊತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಬೆಂಗಳೂರಿನಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ 23 ವರ್ಷದ ಪಶ್ಚಿಮ ಬಂಗಾಳದ ವ್ಯಕ್ತಿಯೊಬ್ಬನನ್ನು ಬಂಧಿಸಲಾಗಿದೆ.

ಕಲಬುರಗಿಯ ಹೊರವಲಯದಲ್ಲಿರುವ ಕಸಾಯಿಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶದ ಸೀತಾಪುರದ ಇಬ್ಬರು ಸಾಮಾಜಿಕ ಮಾಧ್ಯಮಗಳ ಮೂಲಕ ಭಯೋತ್ಪಾದಕರೆಂದು ಹೇಳಲಾಗುವ ವ್ಯಕ್ತಿಗಳೊಂದಿಗೆ ಸಂಪರ್ಕ ಸಾಧಿಸಿದ ಆರೋಪದ ಮೇಲೆ ಬಂಧಿಸಲಾಗಿದೆ.

ಸೆಕ್ಯುರಿಟಿ ಗಾರ್ಡ್ ಅಸಪುಲ್ ಮಲ್ಲಿಕ್, ಟಿಟಿಪಿ ಸದಸ್ಯನೊಬ್ಬನಿಗೆ ಧ್ವನಿ ಕರೆಗಳನ್ನು ಮಾಡಿ ಆಡಿಯೊ ರೆಕಾರ್ಡಿಂಗ್‌ಗಳನ್ನು ಕಳುಹಿಸಿದ್ದ ಎಂದು ಹೆಬ್ಬಗೋಡಿ ಪೊಲೀಸರು ತಿಳಿಸಿದ್ದಾರೆ. ಉತ್ತರ 24 ಪರಗಣದ ಮಲ್ಲಿಕ್, ಜಿಗಾನಿಯ ಎಪಿಸಿ ಸರ್ಕಲ್ ಬಳಿ ವಾಸಿಸುತ್ತಿದ್ದ. ಬೊಮ್ಮಸಂದ್ರ ಕೈಗಾರಿಕಾ


ಉದಯವಾಹಿನಿ ಚಿತ್ರ

ಪ್ರದೇಶದ ಖಾಸಗಿ ಸಂಸ್ಥೆಯಲ್ಲಿ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರು. ಮಾಹಿತಿದಾರರೊಬ್ಬರ ಸುಳಿವು ಆಧರಿಸಿ ಮಂಗಳವಾರ ಪೊಲೀಸರು ಬಂಧಿಸಿದ್ದಾರೆ. ವಿಚಾರಣೆಯ ಸಮಯದಲ್ಲಿ, ಆರೋಪಿಯು ಪಾಕಿಸ್ತಾನದ ಮಸೀದಿಗಳು ಮತ್ತು ಜನರ ಮೇಲೆ ಪಾಕಿಸ್ತಾನ ಸೇನೆ ನಡೆಸಿದ ದೌರ್ಜನ್ಯಗಳ ಬಗ್ಗೆ ಕೋಪಗೊಂಡಿದ್ದಾಗಿ ಹೇಳಿದ್ದಾನೆ. ಆರೋಪಿ ಮುಸ್ಲಿಮರಿಗಾಗಿ 'ಸೇಡು ತೀರಿಸಿಕೊಳ್ಳಲು' ಬಯಸಿದ್ದನು ನಂತರ ಮಲ್ಲಿಕ್ ಫೇಸ್‌ಬುಕ್‌ನಲ್ಲಿ ಅಫ್ಘಾನಿಸ್ತಾನದಲ್ಲಿರುವ ಇಮ್ರಾನ್ ಹೈದರ್ ಎಂಬ ವ್ಯಕ್ತಿಯನ್ನು ಸಂಪರ್ಕಿಸಿದನು. ಹ ನಂತರ ಅವನು ಆರ್ಥಿಕ ತೊಂದರೆಗಳಿಂದಾಗಿ ತನ್ನ ಮನಸ್ಸನ್ನು ಬದಲಾಯಿಸಿದನು ಮತ್ತು ತನ್ನ ಕುಟುಂಬವನ್ನು ನೋಡಿಕೊಳ್ಳಲು ಬಯಸಿದನು. ಪಾಕಿಸ್ತಾನದಲ್ಲಿ ನೆಲೆಸಿರುವ ಶಂಕಿತ ಭಯೋತ್ಪಾದಕರೊಂದಿಗೆ ಸಂಪರ್ಕ ಸಾಧಿಸಿದ ಆರೋಪದ ಮೇಲೆ ಕಲಬುರಗಿಯ ಹೊರವಲಯದಲ್ಲಿರುವ ತಾವರಗೇರಾದಲ್ಲಿರುವ ಕಸಾಯಿಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಉತ್ತರ ಪ್ರದೇಶದ ಸೀತಾಪುರದ ಇಬ್ಬರು ನಿವಾಸಿಗಳನ್ನು ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಕಲಬುರಗಿ ಪೊಲೀಸ್ ಆಯುಕ್ತ ಡಾ. ಶರಣಪ್ಪ ಎಸ್‌ಡಿ ಮಾತನಾಡಿ, ಕಾನೂನುಬಾಹಿರ ಚಟುವಟಿಕೆಗಳಿಗಾಗಿ ಹಲವಾರು ವ್ಯಕ್ತಿಗಳ ಸಾಮಾಜಿಕ ಮಾಧ್ಯಮ ಖಾತೆಗಳನ್ನು ಮೇಲ್ವಿಚಾರಣೆ ಮಾಡುತ್ತಿದ್ದಾಗ ಸಮೀರ್ ವಾಟ್ಸಾಪ್ ಮತ್ತು ಫೇಸ್‌ಬುಕ್ ಮೂಲಕ ಪಾಕಿಸ್ತಾನ ಮೂಲದ ಭಯೋತ್ಪಾದಕ ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸುತ್ತಿರುವುದು ಕಂಡುಬಂದಿದೆ.

**ಇನ್ನೂ ಮಾಹಿತಿ ಸಿಕ್ಕಿಲ್ಲ**

ಸಲ್ಮಾನ್ ಪಾಕಿಸ್ತಾನ ಮೂಲದ ಭಯೋತ್ಪಾದಕರೊಂದಿಗೆ ಯಾವುದೇ ಸಂಪರ್ಕ ಹೊಂದಿದ್ದಾನೆಯೇ ಎಂಬುದು ಪೊಲೀಸರಿಗೆ ಇನ್ನೂ ಮಾಹಿತಿ ಸಿಕ್ಕಿಲ್ಲ ಎಂದು ಅವರು ಹೇಳಿದರು. ಆರೋಪಿಗಳ ವಿರುದ್ಧ ವಿಶ್ವವಿದ್ಯಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> **ಪೊಲೀಸರು ಅವನ ಫೇಸ್‌ಬುಕ್ ಮತ್ತು ವಾಟ್ಸಾಪ್ ಖಾತೆಗಳನ್ನು ಪರಿಶೀಲಿಸಲು ಅವನ ಮೊಬೈಲ್ ಫೋನ್ ಅನ್ನು ಪರಿಶೀಲಿಸಿದಾಗ, ಅವರು ಹೈದರ್ ಜೊತೆಗಿನ ಚಾಟ್ ವಿವರಗಳನ್ನು ಕಂಡುಕೊಂಡಿದ್ದಾರೆ. ಅವನ ವಿರುದ್ಧ ಬಿಎನ್‌ಎಸ್‌ನ ಸೆಕ್ಷನ್ 113(3) ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.-** ಪೊಲೀಸರು

ಅಂತರಾಳದಿಂದ..
EDITORIAL

# ರಾಜಕೀಯ ಪ್ರತಿಷ್ಠೆ, ಅಹಂಗೆ ಸಂಸತ್ ಕಲಾಪ ಆಪೋಶನ



ಸಂಸತ್‌ನ ಈ ಬಾರಿಯ ಮುಂಗಾರು ಅಧಿವೇಶನವೂ ಬಹುತೇಕ ನಿಷ್ಫಲವಾಗಿ ಮುಕ್ತಾಯಗೊಂಡಿದೆ. ವಿಪಕ್ಷಗಳ ಗದ್ದಲ ಹಾಗೂ ಆಡಳಿತ ಪಕ್ಷದ ಹಠಮಾರಿ ಧೋರಣೆಯ ಪರಿಣಾಮ ಈ ಬಾರಿಯ ಮುಂಗಾರು ಅಧಿವೇಶನ ಸಂಪೂರ್ಣ ನಿರರ್ಥಕಗೊಂಡಿತು. ಇದರ ಹೊರತಾಗಿಯೂ ಸರಕಾರ ಯಾವುದೇ ಚರ್ಚೆ ಇಲ್ಲದೆ 12 ಮಸೂದೆಗಳಿಗೆ ಸಂಸತ್‌ನ ಒಪ್ಪಿಗೆ ಪಡೆಯುವಲ್ಲಿ ಸಫಲವಾಗಿರುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಹಳಿ ತಪ್ಪುತ್ತಿರುವುದನ್ನು ಮತ್ತಷ್ಟು ಪುಷ್ಟೀಕರಿಸಿದೆ. ಸಂಸತ್‌ನ ಉಭಯ ಸದನಗಳ ಕಲಾಪಗಳು ಅನಿರ್ದಿಷ್ಟಾವಧಿಗೆ ಮುಂದೂಡಲ್ಪಟ್ಟ ಬಳಿಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವರು, ವಿಪಕ್ಷಗಳ ಗದ್ದಲದಿಂದಾಗಿ ಈ ಬಾರಿಯ ಅಧಿವೇಶನ ತುಂಬಾ ಕಳಪೆ ಉತ್ಪಾದಕತೆಯನ್ನು ಕಾಣುವಂತಾಯಿತು ಎನ್ನುವ ಮೂಲಕ ಸರಕಾರದ ನಡೆಯನ್ನು ನೇರವಾಗಿಯೇ ಸಮರ್ಥಿಸಿಕೊಂಡರು. ಜುಲೈ 20ರಂದು ಸಂಸತ್‌ನ ಮುಂಗಾರು ಅಧಿವೇಶನ ಆರಂಭಗೊಂಡಾಗಿನಿಂದಲೂ ಉಭಯ ಸದನಗಳಲ್ಲಿಯೂ ಕಲಾಪಗಳು ಸುಲಲಿತವಾಗಿ ನಡೆಯಲಿಲ್ಲ. ಅಧಿವೇಶನದ ಆರಂಭಕ್ಕೂ ಮುನ್ನ ನೀಟ್ ಪ್ರಶ್ನೆಪತ್ರಿಕೆ ಸೋರಿಕೆ, ರಾಮಮಂದಿರ ದೇಣಿಗೆ ದುರುಪಯೋಗ, ವಿದ್ಯಾರ್ಥಿಗಳ ಪ್ರತಿಭಟನೆ ವೇಳೆ ಭದ್ರತ ಪಡೆಗಳು ಪ್ರತಿಭಟನನಿರತರ ಮೇಲೆ ನಡೆಸಿದ ನಡೆಸಿದ ದೌರ್ಜನ್ಯ ವಿಷಯಗಳನ್ನು ಮುಂದಿಟ್ಟು ವಿಪಕ್ಷಗಳು ಸರಕಾರದ ವಿರುದ್ಧ ಮುಗಿಬೀಳಲು ಸನ್ನದ್ಧವಾಗಿದ್ದುದು ಸರಕಾರಕ್ಕೂ ತಿಳಿದಿತ್ತು. ಆದಾಗ್ಯೂ ಸರಕಾರ ಈ ವಿಷಯಗಳ ಕುರಿತಂತೆ ತನ್ನ ಸ್ಪಷ್ಟ ನಿಲುವೇನು? ಕೈಗೊಂಡ ಕ್ರಮಗಳೇನು? ಎಂಬ ಬಗ್ಗೆ ಉಭಯ ಸದನಗಳಿಗೆ ತಿಳಿಸುವ ದಿಟ್ಟತನವನ್ನು ಪ್ರದರ್ಶಿಸಲಿಲ್ಲ. ದೇಶದ ಹಿತಾಸಕ್ತಿಯ ರಕ್ಷಣೆ, ಅಭಿವೃದ್ಧಿ, ಸುಧಾರಣೆಯ ಮಾತು ಬಂದಾಗಲೆಲ್ಲ ವಿಪಕ್ಷಗಳಾದಿಯಾಗಿ ಎಲ್ಲರ ಸಹಕಾರ ಯಾಚಿಸುವ ಸರಕಾರ ತನ್ನ ವಿರುದ್ಧ ಗಂಭೀರ ಆರೋಪಗಳು ಕೇಳಿ ಬಂದಾಗಲೆಲ್ಲ ಸದನಗಳಲ್ಲಿ ತನ್ನ ನಿಲುವನ್ನು ತಿಳಿಸಲು ಹಿಂದೇಟು ಹಾಕುವುದು ಸರಿಯಲ್ಲ. ಸಂಸತ್ ಅಧಿವೇಶನ ನಡೆಯುವ ಸಂದರ್ಭದಲ್ಲಿ ಸದನದಲ್ಲಿ ಮಾತನಾಡಲು ಹಿಂಜರಿಯುವ ಆಡಳಿತಾರೂಢ ನಾಯಕರು ಸಾಮಾಜಿಕ ಜಾಲ ತಾಣಗಳಲ್ಲಿ ಕಾಣಿಸಿಕೊಂಡು ಸಮಜಾಯಿಶಿ ನೀಡುವ ಸಂಪ್ರದಾಯಕ್ಕೆ ನಾಂದಿ ಹಾಡಿರುವುದು ಪ್ರತಿಯೊಬ್ಬ ಸಂಸದನಿಗೆ ಹಾಗೂ ಪ್ರಜಾಸತ್ತೆಯ ದೇಗುಲವಾದ ಸಂಸತ್‌ಗೆ ತೋರುವ ಅಗೌರವವೇ ಸರಿ. ಇನ್ನು ವಿಪಕ್ಷಗಳ ವರ್ತನೆ ಬಗ್ಗೆ ಅಸಮಾಧಾನಗಳು ಕೇಳಿಬಂದಿವೆ. ನೀಟ್ ಅಕ್ರಮ, ರಾಮಮಂದಿರ ದೇಣಿಗೆ ಕಳವು, ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯದಂತಹ ಗಂಭೀರ ವಿಷಯಗಳ ಕುರಿತಂತೆ ಸರಕಾರದಿಂದ ಸ್ಪಷ್ಟನೆಯನ್ನು ಅಷ್ಟೇ ಗಾಂಭೀರ್ಯ ಮತ್ತು ಸಹನೆಯಿಂದ ಕೇಳಬೇಕಿತ್ತು.

**ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ವಿರುದ್ಧದ ವಿದ್ಯಾರ್ಥಿ ಪ್ರತಿಭಟನೆ ತೀವ್ರಗೊಂಡ ಬಳಿಕ ದಿಢೀರ್ ಎಚ್ಚೆತ್ತ ಸರಕಾರ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಮತ್ತು ಮೌಲ್ಯಮಾಪನ ವ್ಯವಸ್ಥೆಯಲ್ಲಿ ಸುಧಾರಣೆ ತರುವ ಉದ್ದೇಶದಿಂದ ಮಸೂದೆಯನ್ನು ರೂಪಿಸಿ, ಸಂಸತ್‌ನ ಮುಂದೆ ಮಂಡಿಸಿತು. ಈ ಮಸೂದೆಗೆ ಸಂಸತ್ ಒಪ್ಪಿಗೆ ಪಡೆಯುವಲ್ಲಿ ಸರಕಾರ ಯಶಸ್ವಿಯಾಯಿತಾದರೂ ವಿಪಕ್ಷಗಳು ಎತ್ತಿದ್ದ ಅಕ್ರಮಗಳು, ದೌರ್ಜನ್ಯಗಳ ಕುರಿತಾಗಿನ ಮೂಲಭೂತ ಪ್ರಶ್ನೆಗಳಿಗೆ ಉತ್ತರಿಸುವ ಸೌಜನ್ಯವನ್ನು ಸರಕಾರ ತೋರಲಿಲ್ಲ.**

ಆದರೆ, ಆರಂಭದಿಂದಲೇ ಸರಕಾರವನ್ನು ಹಳಿಯಲು ಆಸಕ್ತಿ ತೋರಿ ರಾಜಕೀಯವಾಗಿ ಲಾಭ ಪಡೆಯಲು ಮುಂದಾದುವು. ವಿಪಕ್ಷವಾಗಿ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಸಂಪೂರ್ಣವಾಗಿ ಎಡವಿದವು. ಆಡಳಿತ ಮತ್ತು ವಿಪಕ್ಷಗಳ ರಾಜಕೀಯ ಒಣ ಪ್ರತಿಷ್ಠೆ, ನಾಯಕರ ಅಹಂಗಳಿಂದಾಗಿ ಇಡೀ ಅಧಿವೇಶನ ಪ್ರತಿ ಬಾರಿಯಂತೆ ನಾಮ್ ಕೆ ವಾಸ್ತೆ, ಎಂಬಂತೆ ನಡೆದು ಜನರ ನಿರೀಕ್ಷೆಗಳನ್ನು ಸಂಪೂರ್ಣ ಹುಸಿಯಾಗುವಂತೆ ಮಾಡಿದುದು ದೇಶದ ಪ್ರಜಾಪ್ರಭುತ್ವ ವ್ಯವಸ್ಥೆಯ ದೌರ್ಭಾಗ್ಯವೇ ಸರಿ.

# ರಾಮಾಯಣ



ತನಗೆ ಬುದ್ಧಿ ಹೇಳಿದ ವಿಭೀಷಣನನ್ನು ರಾವಣನು ಗಡೀಪಾರು ಮಾಡಿದು

• ಹಿಂದಿನ ಸಂಚಿಕೆಯಿಂದ 121ನೆಯ ಅಧ್ಯಾಯ

ಮೋಡದ ನೆರಳನ್ನೂ ಬಿಸಿಲನ್ನೂ ನಂಬಿ ಖಳರ ನುಡಿಯಲ್ಲಿ ವಿಶ್ವಾಸವನ್ನು ತಾಳಿದವನಿಗೆ ಲೋಕದಲ್ಲಿ ಅಹಿತಕರವಾದುದೂ ಹಿತಕರವೆಂಬಂತೆ ಕಾಣಿಸುತ್ತದೆ. ತುಂಬ ಕಹಿಯಾದ ಔಷಧಿಯನ್ನು ಕುಡಿಸುತ್ತ ಕಟ್ಟುನಿಟ್ಟಾದ ಪಥ್ಯಗಳಿಂದ ಸಂಕಟಗೊಳಿಸುವಂತೆ ಕಂಡರೂ ವೈದ್ಯನು ರೋಗವನ್ನು ವಾಸಿ ಮಾಡುವಂತೆಯೇ ಆಪ್ತವಚನಗಳು ಕೂಡ. ಕಹಿಯಾದರೂ ಸೌಖ್ಯವನ್ನುಂಟುಮಾಡುವುದೆಂಬುದನ್ನು ಅರ್ಥಮಾಡಿಕೊಂಡು ನನ್ನ ಮಾತುಗಳು ಕುಟಿಲವಿರಹಿತವಾದವು ಎಂದು ತಿಳಿದು ನಡೆದರೆ ನಿನಗೂ ಕ್ಷೇಮ, ವಂಶಕ್ಕೂ ಹಿತಕರ. ತಂದೆ ಮತ್ತು ಗುರುಗಳ ಮಾತುಗಳು ಮಗನಿಗೂ ಶಿಷ್ಯನಿಗೂ ಒಳಿತನ್ನುಂಟು ಮಾಡುವುದೆಂದು ಲೋಕವು ನಂಬಿಕೊಂಡಿದೆ. ಅದರಿಂದ ನಿನಗೆ ಕ್ಷೇಮ ಎಂದು ತಿಳಿದು ನನ್ನ ಬುದ್ಧಿಗೆ ಗೋಚರಿಸುವಷ್ಟನ್ನು ನಾನು ಹೇಳುತ್ತಿದ್ದೇನೆ. ಅದನ್ನು ಆಪ್ತವಚನವೆಂದು ಭಾವಿಸಿ, ಜೀಯ, ನಡೆದುಕೊಳ್ಳುವುದು ಸೂಕ್ತ ಮೂವತ್ತರೆಡು ಕೋಟಿ ದೇವತೆಗಳೂ ಕಮಲಭವನ ಸನಿಹದಲ್ಲಿ ನಿನ್ನ ಕೋಟಲೆಗಳನ್ನು ತಿಳಿಸಿ ಸಕಲ ಸೌಂದರ್ಯದ ಆಕೃತಿಯನ್ನು ಮಾಡಿ ಪ್ರಮದಾವಿಕಾರದಿಂದ ಇತ್ತ ಕಳಿಸಿದ್ದಾರೆ. ಮನುಜರದು ಮೂಲೋಕದಲ್ಲಿಯೂ ಉತ್ತಮಾಕೃತಿಯ ದೇಹ, ಸೀತೆಯ ಆಕೃತಿಯನ್ನು ನಿನ್ನ ಎಕೃತಿಗೆ ಅನುಗುಣವಾಗಿ ಭಾವಿಸುತ್ತಿದ್ದೀಯೆ. ಆಕೆಯ ಗುರುತನ್ನು ಹೇಳುತ್ತೇನೆ, ಮಹಾರಾಜನೇ, ವಾಮೆಯನ್ನು ತಂದು ನಿನ್ನ ಮನೆಯೊಳಗಿಟ್ಟುಕೊಂಡು, ಅಂದಿನಿಂದ ನಾನಾ ಬಗೆಯ ದುಶ್ಶಕುನ ಪರಂಪರೆಯು ಭೀತಿಗೊಳಿಸುತ್ತಿದ್ದರೂ, ಜನರು

ಮಂಗಳಕರವಾದ ಮಾತುಗಳನ್ನೇ ಆಡುತ್ತಿದ್ದಾರೆ. ಅರಸನೇ, ಇದನ್ನೆಲ್ಲ ಅರಿತೂ ಅರಿಯದಂತಿರುವ ನಿನಗೆ ಭೀತಿಯನ್ನು ತೊರೆದು ಹೇಳುವವರಾರು? ಕುಲವನ್ನು ನುಂಗುವ ಕಾಳರಾತ್ರಿಯು ದಿತಿಜಾತಸಂಕುಲವನ್ನೆಲ್ಲ ನಾಶಮಾಡುವ ಮೃತ್ಯು ಎಂದು ತಿಳಿದು ವಂಶವನ್ನುಳಿಸಿ, ದೊರಕಿರುವ ಸೌಖ್ಯಗಳನ್ನು ಅನುಭವಿಸುತ್ತ, ನೆಲದಣುಗಿಯನ್ನು ದಾಶರಥಿಗೆ ಒಪ್ಪಿಸುವುದು ಉಚಿತವಾದುದು. ಹಿಂದೆ ದೇವಮುನಿಯು ಒಂದು ದಿನ ಏಕಾಂತದಲ್ಲಿ ರಹಸ್ಯಕರವಾದ ಒಂದು ಅಚ್ಚರಿಯನ್ನು ನನಗೆ ತಿಳಿಸಿದ ಲಕ್ಷ್ಮಿಯು ವೇದಾವತಿಯ ರೂಪಿನಿಂದ ಮನುಷ್ಯಳಾಗಿ ಪರಮಪುರುಷನ ಪಾದಪದ್ಮಗಳ ಬಗ್ಗೆ ಆಲೋಚಿಸುತ್ತ ಸಂತಸದಲ್ಲಿರಲು, ಆ ಮಾರ್ಗದಲ್ಲಿಯೇ ಬಂದ ನೀನು ಆಕೆಯನ್ನು ಕೆಣಕಿದಾಗ ಆ ವನಿತೆಯು ಆ ಕ್ಷಣವೇ ತನ್ನ ತಪೋಗ್ನಿಯಿಂದ ಪ್ರಾಣಬಿಟ್ಟಳು. ಆನಂತರ ಆ ಸತಿಯು ಕ್ರೋಧದಿಂದ ಮಂಡೋದರಿಯ ಗರ್ಭವನ್ನು ಸೇರಿ ಹೆಣ್ಣಿನ ಆಕೃತಿಯಿಂದ ಈ ಧರೆಗೆ ಬರಲು, ಭಾರ್ಗವನು ನೋಡಿ ಇದು ಮೃತ್ಯುಸೂಚಕ' ಎಂದು ಹೇಳಲು, ಅದರಿಂದ ಪಾರಾಗಲು ಮಗುವನ್ನು ಒಂದು ಬಂಗಾರದ ಪೆಟ್ಟಿಗೆಯಲ್ಲಿಟ್ಟು ಬೀಗವನ್ನು ಹಾಕಿ ತಕ್ಷಣವೇ ಸಮುದ್ರದಲ್ಲಿ ಎಸೆಯಲು ಅದು ದೀರ್ಘ ಕಾಲ ತೇಲಿಕೊಂಡು ಮತ್ತೊಂದು ದಡವನ್ನು ಸೇರಿತು. ಸಮುದದಲ್ಲಿ ತೇಲಿಕೊಂಡು ಬಂದು ಕೆಲ ಕಾಲ ದಡದಲ್ಲಿ ಬಿದ್ದಿರುವಾಗ, ಭೂಮಿಯನ್ನು ಶುದ್ಧಿಪಡಿಸುವ ಉದ್ದೇಶದಿಂದ ಬಂದ ಜನಕ ಮಹಾರಾಜನಿಗೆ ಆ ಪೆಟ್ಟಿಗೆಯು ಸಿಕ್ಕಿತು; ಕುತೂಹಲದಿಂದ ಅದರ ಬೀಗವನ್ನು ತೆರೆದು ನೋಡಲು ಸುವರ್ಣಪುತ್ಥಳಿಯಂತಹ ಒಂದು ಮಗುವು ಕಾಣಿಸಿತು; ಹರ್ಷದಿಂದ ಜನಕನು ಆ ಮಗುವನ್ನು ಸ್ವಂತ ಮಗಳಂತೆ ಸಾಕಿ ಸಲಹಿದ; ಆನಂತರ ಕಾಲಕರ್ಮದ ಮಹಾ ಯೋಗದಿಂದ ಆ ಮಗುವು ಮೂಲೋಕಕ್ಕೂ ಅಚ್ಚರಿಯುಂಟುಮಾಡುವಂತಹ ರೂಪವತಿ ಯುವತಿಯಾಗಿ ಬೆಳೆದಳು; ಅವಳನ್ನು ವರಿಸುವವನ ಬಲಾಬಲಗಳನ್ನು ಪರೀಕ್ಷಿಸಲೋಸುಗ ಜನಕ ಮಹಾರಾಜನು ಶೂಲಪಾಣಿಯ ಬಿಲ್ಲನ್ನು ಪಣವಾಗಿರಿಸಿ, ಅದರಲ್ಲಿ ಗೆದ್ದ ಶ್ರೀ ರಾಮಚಂದ್ರನಿಗೆ ಅವಳನ್ನಿತ್ತು ಮದುವೆ ಮಾಡಿದ.

ಮಾಡಿದ. ದೇವತೆಗಳ ಪ್ರಾರ್ಥನೆಯಂತೆ ಗೋವಿಪ್ರರನ್ನು ಪೊರೆಯಲೆಂದು ಲಕ್ಷ್ಮೀರಮಣನು ಭೂಮಿಯಲ್ಲಿ ಮನುಜಾಕಾರದಲ್ಲಿ ಜನಿಸಿದ ರಾಮನು ಸೀತೆಯೊಂದಿಗೆ ಅಯೋಧ್ಯೆಗೆ ಬಂದ. ಆ ಸಮಯದಲ್ಲಿ ವಸಿಷ್ಠನ ಅನುಮತಿಯಿಂದ ದಶರಥನು ಮಗನಿಗೆ ಯುವರಾಜ್ಯಪಟ್ಟವನ್ನು ಕಟ್ಟಲು ಏರ್ಪಾಟು ಮಾಡಿದ. ಆದರೆ ಮಂಥರೆಯು ಕೈಕೇಯಿಗೆ ದುರ್ಬೋಧನೆ ಮಾಡಿ ರಾಮನು ಸೀತಾಲಕ್ಷ್ಮಣರೊಡನೆ ಕಾಡಿಗೆ ತೆರಳುವಂತೆ ಮಾಡಿದಳು.

ಅದರಂತೆಯೇ ಕಾಡಿಗೆ ಬಂದ ರಘುವರನು ಭೂತಳವನ್ನು ಪಾವನಗೈದು, ನಿಮಿಷಾರ್ಧದಲ್ಲಿ ಖರದೂಷಣತ್ರಿಶಿರರನ್ನು ತರಿದು ಆ ವಿಪಿನದಲ್ಲಿರಲು, ನೀನು ಅಲ್ಲಿಗೆ ಹೋಗಿ ಮಾರೀಚನನ್ನು ಕಳಿಸಿ ವಂಚನೆಮಾಡಿ ಧರಣಿಜೆಯನ್ನು ತಂದಿಟ್ಟುಕೊಂಡೆ. ದೇವತೆಗಳೆಲ್ಲರೂ ವಾನರರೂಪಿನಿಂದ ಭೂಮಿಗೆ ಬಂದು ನರರೂಪಿನ ಅಚ್ಯುತನನ್ನು ಸೇರಿದ್ದಾರೆ. ಸೀತೆಯ ನೆವದಿಂದ ಗೋವಿಪ್ರರನ್ನು ಸಲಹಲು ಬಂದಿರುವುದೇ ಆ ದೇವಗೋಪ್ಯ ಎಂದು ದೇವಮುನಿಯು ಕರುಣೆಯಿಂದ ತಿಳಿಸಿದ.

ಮುಂದುವರೆಯುವುದು



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಮತ್ತು ಇಂದಿನ ಭಾರತ

**ಬಲಿಷ್ಠ ಮತ್ತು ಸಮೃದ್ಧ ಭಾರತವನ್ನು ನೀಡುವುದು ನಮ್ಮೆಲ್ಲರ ಹೊಣೆಗಾರಿಕೆ**

ಭಾರತದ ಸ್ವಾತಂತ್ರ್ಯವೆಂಬುದು ಕೇವಲ ಒಂದು ದಿನದಲ್ಲಿ ದೊರೆತ ಸಾಧನೆಯಲ್ಲ. ಅದರ ಹಿಂದೆ ಶತಮಾನಗಳ ಹೋರಾಟ, ಅಸಂಖ್ಯಾತ ದೇಶಭಕ್ತರ ತ್ಯಾಗ, ನೋವು, ಸೆರೆವಾಸ ಮತ್ತು ಬಲಿದಾನ ಅಡಗಿದೆ. 1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯದ ಸೂರ್ಯೋದಯವನ್ನು ಕಂಡಾಗ, ಅದರ ಹಿಂದೆ ಅನೇಕ ಪರಿಚಿತ ಹಾಗೂ ಅಪರಿಚಿತ ಹೋರಾಟಗಾರರ ರಕ್ತ ಮತ್ತು ಬೆವರಿನ ಇತಿಹಾಸವಿತ್ತು. ಆದ್ದರಿಂದ ಸ್ವಾತಂತ್ರ್ಯ ದಿನಾಚರಣೆ ಕೇವಲ ಧ್ವಜಾರೋಹಣದ ದಿನವಲ್ಲ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ಸ್ಮರಿಸಿ, ಅವರ ಕನಸಿನ ಭಾರತವನ್ನು ಕಟ್ಟುವ ಸಂಕಲ್ಪದ ದಿನವೂ ಹೌದು. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯರು ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಶೋಷಣೆಗೆ ಒಳಗಾಗಿದ್ದರು.

ಈ ಅನ್ಯಾಯದ ವಿರುದ್ಧ ದೇಶದ ವಿವಿಧ ಭಾಗಗಳಲ್ಲಿ ಹೋರಾಟಗಳು ಆರಂಭವಾದವು. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಿಂದ 1942ರ ಭಾರತ ಬಿಟ್ಟು ತೊಲಗಿ ಚಳವಳಿಯವರೆಗೆ ಸ್ವಾತಂತ್ರ್ಯ ಹೋರಾಟ ಹಲವು ಹಂತಗಳನ್ನು ಕಂಡಿತು.

ಮಹಾತ್ಮ ಗಾಂಧೀಜಿಯವರ ಸತ್ಯ ಮತ್ತು ಅಹಿಂಸೆಯ ಮಾರ್ಗವು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ದಿಕ್ಕನ್ನು ನೀಡಿತು. ಅಸಹಕಾರ ಚಳವಳಿ, ಉಪ್ಪಿನ ಸತ್ಯಾಗ್ರಹ ಮತ್ತು ಭಾರತ ಬಿಟ್ಟು ತೊಲಗಿ ಚಳವಳಿಗಳ ಮೂಲಕ ಅವರು ಸಾಮಾನ್ಯ ಜನರನ್ನು ಹೋರಾಟದೊಂದಿಗೆ ಬೆಸೆದರು. ಮತ್ತೊಂದೆಡೆ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ ಕ್ರಾಂತಿಕಾರಿ ದೇಶಭಕ್ತಿ ಯುವಜನರಲ್ಲಿ ಹೊಸ ಉತ್ಸಾಹ ಮೂಡಿಸಿತು. ಭಗತ್ ಸಿಂಗ್, ರಾಜಗುರು, ಸುಖದೇವ್ ಸೇರಿದಂತೆ ಅನೇಕ ಕ್ರಾಂತಿಕಾರಿಗಳು ದೇಶಕ್ಕಾಗಿ ಪ್ರಾಣವನ್ನೇ ಅರ್ಪಿಸಿದರು. ಕರ್ನಾಟಕದಲ್ಲಿಯೂ ಕಿತ್ತೂರು ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ಬೆಳವಡಿ ಮಲ್ಲಮ್ಮ ಸೇರಿದಂತೆ ಅನೇಕ ವೀರರು ಬ್ರಿಟಿಷರ ವಿರುದ್ಧ ಹೋರಾಡಿದರು.

ಸ್ವಾತಂತ್ರ್ಯ ಹೋರಾಟದ ಇತಿಹಾಸವು ಕೇವಲ ಪ್ರಸಿದ್ಧ ನಾಯಕರದ್ದಲ್ಲ. ತಮ್ಮ ಕುಟುಂಬ, ಆಸ್ತಿ, ಉದ್ಯೋಗ ಮತ್ತು ವೈಯಕ್ತಿಕ ಸುಖವನ್ನು ಬದಿಗಿಟ್ಟು ಹೋರಾಟದಲ್ಲಿ ಪಾಲ್ಗೊಂಡ ಸಾವಿರಾರು ಸಾಮಾನ್ಯ ಜನರ ತ್ಯಾಗವೂ ಅದರ ಭಾಗವಾಗಿದೆ. ಅನೇಕರು ಜೈಲು ಸೇರಿದರು, ಲಾಠಿ ಏಟು ಅನುಭವಿಸಿದರು; ಕೆಲವರು ಪ್ರಾಣವನ್ನೇ ಕಳೆದುಕೊಂಡರು. ಅವರ ಬಲಿದಾನದ ಫಲವೇ ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ.

ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಭಾರತ ಬಡತನ, ಅನಕ್ಷರತೆ, ಆಹಾರದ ಕೊರತೆ, ನಿರುದ್ಯೋಗ ಮತ್ತು ಮೂಲಸೌಕರ್ಯದ ಕೊರತೆಯಂತಹ ಅನೇಕ ಸವಾಲುಗಳನ್ನು ಎದುರಿಸುತ್ತಿತ್ತು. ಆದರೆ ಕಳೆದ ಎಂಟು ದಶಕಗಳಲ್ಲಿ ಭಾರತ ಕೃಷಿ, ಕೈಗಾರಿಕೆ, ಶಿಕ್ಷಣ, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಗಮನಾರ್ಹ ಪ್ರಗತಿ ಸಾಧಿಸಿದೆ. ಭಾರತೀಯ ಯುವಕರು ಜಾಗತಿಕ ಮಟ್ಟದಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸುತ್ತಿದ್ದಾರೆ. ಮಹಿಳೆಯರು ಸಹ ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿದ್ದಾರೆ.

ಆದರೆ ಅಭಿವೃದ್ಧಿಯ ಜೊತೆಗೆ ಬಡತನ, ನಿರುದ್ಯೋಗ, ಭ್ರಷ್ಟಾಚಾರ, ಸಾಮಾಜಿಕ ಅಸಮಾನತೆ ಮತ್ತು ಪರಿಸರ ಹಾನಿಯಂತಹ ಸವಾಲುಗಳೂ ನಮ್ಮ ಮುಂದಿವೆ. ಸ್ವಾತಂತ್ರ್ಯ ಹೋರಾಟಗಾರರು ಕನಸು ಕಂಡ ಭಾರತವು ಕೇವಲ ಆರ್ಥಿಕವಾಗಿ ಬಲಿಷ್ಠವಾಗಿರುವ ದೇಶವಲ್ಲ; ನ್ಯಾಯ, ಸಮಾನತೆ, ಸಹೋದರತ್ವ ಮತ್ತು ಮಾನವೀಯತೆಯನ್ನು ಗೌರವಿಸುವ ರಾಷ್ಟ್ರವಾಗಿರಬೇಕು.

ಸ್ವಾತಂತ್ರ್ಯ ಎಂದರೆ ಕೇವಲ ಹಕ್ಕುಗಳನ್ನು ಅನುಭವಿಸುವುದಲ್ಲ; ಕರ್ತವ್ಯಗಳನ್ನು ಪ್ರಾಮಾಣಿಕವಾಗಿ ನಿರ್ವಹಿಸುವುದೂ ಹೌದು. ಸಂವಿಧಾನವನ್ನು ಗೌರವಿಸುವುದು, ಕಾನೂನು ಪಾಲಿಸುವುದು, ಮತದಾನದ ಹಕ್ಕನ್ನು ಜವಾಬ್ದಾರಿಯಿಂದ ಬಳಸುವುದು, ಸಾರ್ವಜನಿಕ ಆಸ್ತಿಯನ್ನು ರಕ್ಷಿಸುವುದು, ಪರಿಸರವನ್ನು ಕಾಪಾಡುವುದು ಮತ್ತು ಸಮಾಜದಲ್ಲಿ ಸೌಹಾರ್ದತೆ ಬೆಳೆಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ವಿಶೇಷವಾಗಿ ಯುವ ಪೀಳಿಗೆ ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಅರಿತುಕೊಳ್ಳಬೇಕು. ದೇಶಪ್ರೇಮವೆಂದರೆ ಕೇವಲ ಘೋಷಣೆ ಅಥವಾ ಸಾಮಾಜಿಕ ಜಾಲತಾಣದ ಸಂದೇಶವಲ್ಲ; ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುವುದು, ಸಮಾಜಕ್ಕೆ ಉಪಯುಕ್ತರಾಗುವುದು ಮತ್ತು ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವುದೇ ನಿಜವಾದ ದೇಶಭಕ್ತಿ. ಸ್ವಾತಂತ್ರ್ಯದ 80ನೇ ವರ್ಷದ ಸಂದರ್ಭದಲ್ಲಿ ನಮ್ಮ ಪೂರ್ವಜರ ತ್ಯಾಗವನ್ನು ಸ್ಮರಿಸಿ, ಅವರ ಕನಸಿನ ಭಾರತವನ್ನು ನಿರ್ಮಿಸುವ ಸಂಕಲ್ಪ ಮಾಡೋಣ. ತ್ಯಾಗದಿಂದ ಪಡೆದ ಸ್ವಾತಂತ್ರ್ಯವನ್ನು ಜವಾಬ್ದಾರಿಯಿಂದ ಕಾಪಾಡಿ, ಮುಂದಿನ ಪೀಳಿಗೆಗೆ ಇನ್ನಷ್ಟು ಬಲಿಷ್ಠ ಮತ್ತು ಸಮೃದ್ಧ ಭಾರತವನ್ನು ನೀಡುವುದು ನಮ್ಮೆಲ್ಲರ ಹೊಣೆಗಾರಿಕೆ. ತ್ಯಾಗದಿಂದ ಪಡೆದ ಸ್ವಾತಂತ್ರ್ಯ ನಮ್ಮ ಹೆಮ್ಮೆ; ಜವಾಬ್ದಾರಿಯಿಂದ ಕಾಪಾಡುವ ಭಾರತ ನಮ್ಮ ಸಂಕಲ್ಪ.





# ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು

53

## ಸಕಾರಾತ್ಮಕ ಸ್ಪರ್ಧೆ : ಗೆಲುವಿಗೆ ಪಂಥ ಬೆಳಕು

**ಸಹಪಾಠಿಯನ್ನು ದ್ವೇಷದ ಕಣ್ಣಿನಿಂದ ನೋಡದೆ, ದಿಕ್ಸೂಚಿಯಾಗಿ ಸ್ವೀಕರಿಸಬೇಕು. ಅವನು ಚೆನ್ನಾಗಿ ಓದಿದರೆ, ಶಿಸ್ತಿನಿಂದ ಕೆಲಸ ಮಾಡಿದರೆ ನಾವು ಅದನ್ನು ಅನುಕರಿಸಬೇಕು. ನಮ್ಮಲ್ಲಿರುವ ಕೊರತೆಯನ್ನು ಒಪ್ಪಿಕೊಂಡು ಅದನ್ನು ತಿದ್ದಿಕೊಳ್ಳುವ ಧೈರ್ಯವೇ ನಿಜವಾದ ಸ್ಪರ್ಧೆಯ ಸಾರ. ಇಲ್ಲಿ ಸೋಲು-ಗೆಲುವಿನ ಲೆಕ್ಕಿಂತ ನಮ್ಮ ವ್ಯಕ್ತಿತ್ವ ಎಷ್ಟು ಬೆಳೆಯಿತು ಎಂಬುದೇ ಮುಖ್ಯವಾಗುತ್ತದೆ.**



ವಿದ್ಯಾರ್ಥಿಯ ಜೀವನದಲ್ಲಿ ಯಶಸ್ಸು ಎನ್ನುವುದು ಒಂಟಿ ಪ್ರಯತ್ನದಿಂದ ಮಾತ್ರ ಬರುವುದಿಲ್ಲ. ಒಳ್ಳೆಯ ಸ್ನೇಹ, ಸತ್ಸಂಗ ಮತ್ತು ಆರೋಗ್ಯಕರ ವಾತಾವರಣವೇ ಅದರ ಬುನಾದಿ. ಅಂತಹ ಪರಿಸರದಲ್ಲಿ ಹುಟ್ಟುವ ''ಸಕಾರಾತ್ಮಕ ಸ್ಪರ್ಧೆ'' ಒಂದು ಮೌನ ಪ್ರೇರಣೆ. ಇದು ಕತ್ತಿ ಹಿಡಿದ ಪೈಪೋಟಿಯಲ್ಲ. ಬದಲಾಗಿ ಒಬ್ಬರ ಬೆಳಕಿನಲ್ಲಿ ಇನ್ನೊಬ್ಬರು ತಮ್ಮ ದಾರಿ ಕಂಡುಕೊಳ್ಳುವ ಸ್ನೇಹದ ಸ್ಪರ್ಧೆ.

ವಿಜ್ಞಾನದ ದೃಷ್ಟಿಯಿಂದಲೂ ಆರೋಗ್ಯಕರ ಸ್ಪರ್ಧೆ ಬಹಳ ಮುಖ್ಯ.

ಇದು ಮೆದುಳಿನ ಪ್ರೇರಣಾ ಕೇಂದ್ರವನ್ನು ಜಾಗೃತಗೊಳಿಸಿ, ಡೋಪಮೈನ್ ಬಿಡುಗಡೆಗೆ ಕಾರಣವಾಗುತ್ತದೆ. ಇದರಿಂದ ಕಲಿಕೆಯಲ್ಲಿ ಆಸಕ್ತಿ, ಶ್ರಮದಲ್ಲಿ ನಿರಂತರತೆ ಹೆಚ್ಚುತ್ತದೆ. ಆದರೆ ಅಸೂಯೆ ಮತ್ತು ಅತಿಯಾದ ಹೋಲಿಕೆ ಮಾತ್ರ ಮನಸ್ಸಿನಲ್ಲಿ ಆತಂಕ ಬಿತ್ತಿ, ಕಲಿಕೆಯ ರುಚಿಯನ್ನು ಹಾಳುಮಾಡುತ್ತದೆ.

ಹೀಗಾಗಿ ಸಕಾರಾತ್ಮಕ ಸ್ಪರ್ಧೆಯನ್ನು ಅಳವಡಿಸಿಕೊಂಡ ವಿದ್ಯಾರ್ಥಿಯಲ್ಲಿ ಆತ್ಮವಿಶ್ವಾಸ, ಶಿಸ್ತು ಮತ್ತು ಬೆಳೆಯುವ ಹಂಬಲ ಸಹಜವಾಗಿ ಮೂಡುತ್ತದೆ.

ಅವನ ಹೆಜ್ಜೆ ಗುರಿಯತ್ತ ಸ್ಥಿರವಾಗುತ್ತದೆ. ಇದು ಕೇವಲ ಅಂಕಗಳ ಯುದ್ಧವಲ್ಲ.

ಇದು ಯುವ ಮನಸ್ಸನ್ನು ರೂಪಿಸಿ, ಸಮಾಜಕ್ಕೆ ಉತ್ತಮ ಪ್ರಜೆಯನ್ನು ಕೊಡುವ ಮೌನ ಶಕ್ತಿ ಮತ್ತು ಜೀವನಕ್ಕೆ ದಾರಿ ತೋರುವ ಬೆಳಕು.

# ಸ್ವಾತಂತ್ರ್ಯ ದಿನಾಚರಣೆ ಹಬ್ಬದ ಸಡಗರ



ಬೆಂಗಳೂರಿನ ಬಹುತೇಕ ಮಳಿಗೆಗಳು ಸೇರಿದಂತೆ ವ್ಯಾಪಕ ಕೇಂದ್ರಗಳು ಸೇಲ್‌ಗಳ ಪೈಪೋಟಿಯಲ್ಲಿ ತೊಡಗಿವೆ. ದೊಡ್ಡ ದೊಡ್ಡ ಮಾಲ್‌ಗಳು ನವವಧುವಿನಂತೆ ಕಂಗೊಳಿಸುತ್ತ ಶೃಂಗಾರಗೊಂಡಿವೆ. ಒಂದು ಕೊಂಡರೆ ಇನ್ನೊಂದು ಉಚಿತ ಅಷ್ಟು ರಿಯಾಯಿತಿ ಇಷ್ಟು ರಿಯಾಯಿತಿ ಅದು ಕೊಂಡರೆ ಇದು ಫ್ರೀ.. ಎಂಬ ಟಿವಿ ಜಾಯಿರಾತು ಮತ್ತು ಬ್ಯಾನರ್ ಗಳಿಂದ ಪ್ರಚಾರವಾಗುತ್ತಿವೆ. ಸ್ವಾತಂತ್ರ್ಯ ದಿನಾಚರಣೆ ಮತ್ತು ವರ ಮಹಾಲಕ್ಷ್ಮಿ ಹಬ್ಬದ ಸಡಗರ. ಪ್ರತಿ ವರ್ಷ ಆಗಸ್ಟ್ 15 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಅತ್ಯಂತ ಸಡಗರ ಸಂಭ್ರಮದಿಂದ ನಾವು ಆಚರಿಸುತ್ತೇವೆ. ನಾವೆಲ್ಲರೂ ಭಾರತೀಯರು ಎಂದು ಜಾತಿ, ಮತ, ಭೇದವಿಲ್ಲದೆ ಸಂಭ್ರಮಿಸುವ ದಿನವಿದು 79 ವಸಂತಗಳನ್ನು ಪೂರೈಸಿ 80ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿದ್ದೇವೆ. ಈ ದಿನಾಚರಣೆಯ ದಿನದಂತ ದೇಶಭಕ್ತಿಯ ಹಾಡುಗಳು ಭಾಷಣಗಳು ಕಲೆ ಸಂಸ್ಕೃತಿ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಸಾರುವ ವಿವಿಧ ರೀತಿಯ ಕಾರ್ಯಕ್ರಮಗಳು ನಡೆಯುತ್ತವೆ. ನಾವೆಲ್ಲರೂ ಭಾರತೀಯರು ಧರ್ಮ, ಜಾತಿ ಭಾಷೆ ಕುಲಗೋತ್ರ ಬಡವ, ಶ್ರೀಮಂತರು, ವಿದ್ಯಾವಂತ, ಅವಿದ್ಯಾವಂತ ಎಂಬ ಭೇದವಿಲ್ಲದೇ ನಮ್ಮ ಭಾರತ ದೇಶವನ್ನು ಪ್ರತಿಯೊಬ್ಬ ಪ್ರಜೆಯು ಪ್ರೀತಿಸುತ್ತಾನೆ. ಪ್ರೀತಿಸಲೇಬೇಕು, ಏಕೆಂದರೆ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಪ್ರಾಣಗಳನ್ನೇ ಬಲಿದಾನ ಮಾಡಿದ್ದಾರೆ. ಸ್ವಾತಂತ್ರ್ಯನಂತರ ನಾವು ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದೇವೆ. ಕೃಷಿ ವಿದ್ಯೆ, ಆರೋಗ್ಯ, ಕಗಾರಿಕೆ, ಕಲೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಸಿನಿಮಾ, ಕ್ರೀಡೆ ಇತ್ಯಾದಿ ರಂಗದಲ್ಲಿ ನಮ್ಮ ದೇಶ ಮುಂದುವರೆದ ರಾಷ್ಟ್ರಗಳ ಶ್ರೇಣಿಯಲ್ಲಿ ಇದೆ. ಪ್ರಗತಿ ಪಥದಲ್ಲಿರುವ ಈ ದೇಶದ ಪ್ರಗತಿ ನಮ್ಮ ಪ್ರಗತಿ ಎಂಬ ಭಾವನೆ ಸದಾ ನಮ್ಮಲ್ಲಿರಬೇಕು. ಸತ್ಯಮೇವ ಜಯತೇ ಇದು ನಮ್ಮ ರಾಷ್ಟ್ರೀಯ ಧ್ಯೇಯವಾಕ್ಯ, ಈ ಧ್ಯೇಯವಾಕ್ಯದ ಪರಿಪಾಲನೆ ಎಷ್ಟಾಗುತ್ತಿದೆ. ಎಲ್ಲ ಕಡೆ ಸುಳ್ಳು ವ್ಯಾಪಿಸಿಕೊಂಡು ಬಿಟ್ಟಿದೆ. ವಂಚನೆ, ಮೋಸ ಲಂಚ ಇಲ್ಲದೇ ಇಂದು ಯಾವ ವ್ಯವಹಾರಗಳು ಕೂಡಾ ನಡೆಯುತ್ತಿಲ್ಲ. ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮಹಿಳೆಯರು ಕೂಡ ಹೋರಾಡಿದ್ದಾರೆ. ದೇಶವನ್ನು ಗೌರವಿಸುವ ನಾವು ಮಹಿಳೆಯರನ್ನು ಗೌರವಿಸಬೇಕು. ತಾಯಿ ಎಂಬ ಗೌರವ, ಮಗಳೆಂಬ ವಾತ್ಸಲ್ಯ.

ಅತ್ತೆ ಎಂಬ ಅಭಿಯಾನ. ಸೊಸೆ ಎಂಬ ಪ್ರೀತಿ ಸಹೋದರ ಸಹೋದರಿಯರ ಪ್ರೀತಿ ಭಾಂದವ್ಯ. ನಾವೆಲ್ಲರೂ ಒಂದೇ ನಮ್ಮೆಲ್ಲರ ಸೃಷ್ಟಿಕರ್ತನು ಒಬ್ಬನೆ ಆಗಿರುವಾಗ ನಾವೆಲ್ಲರೂ ಒಂದೇ ಸಹೋದರ ಸಹೋದರಿಯಾಗಿ ಒಂದೇ ದೇಶದ ನಿವಾಸಿಗಳಾಗಿ ಜಾತಿ ಮತ ಧರ್ಮ ಭಾಷೆ ಭೇದವಿಲ್ಲದೇ ನಾವು ಭಾರತೀಯರು ಎಂಬ ಒಗ್ಗಟ್ಟು ಹಾಗು ಏಕತೆಯನ್ನು ಪ್ರದರ್ಶಿಸಬೇಕಾಗಿದೆ. ಸ್ವಾತಂತ್ರ್ಯ ದಿನಾಚರಣೆ ಎನ್ನುವುದು ಒಂದು ದಿನಕ್ಕೆ ಸೀಮಿತಗೊಳಿಸದ ನಾವೆಲ್ಲರು ಒಂದೇ ಎಂಬ ಭಾವನೆಯನ್ನು ಗಟ್ಟಿಗೊಳಿಸೋಣ ಸ್ವಾತಂತ್ರ್ಯ ದಿನಾಚರಣೆಯ ಎಲ್ಲಾರು ಸಡಗರ ಸಂಭ್ರಮದಿಂದ ಆಚರಿಸೋಣ.



- ವಿ.ಎಂ.ಎಸ್.ಗೋಪಿ.
ಲೇಖಕರು ಬೆಂಗಳೂರು.

# ಇದೇ ಆಗಸ್ಟ್ 17 ರಂದು ನಾಗರಪಂಚಮಿ

ತಿಥಿ : ಶ್ರಾವಣ ಶುಕ್ಲ ಪಂಚಮಿ

ಇತಿಹಾಸ : ಆಸ್ತಿಕ ಋಷಿಯು ಸರ್ಪಯಜ್ಞ ಮಾಡುವ ಜನಮೇಜಯ ರಾಜನನ್ನು ಪ್ರಸನ್ನಗೊಳಿಸಿಕೊಂಡನು. ಜನಮೇಜಯ ರಾಜನು 'ವರವನ್ನು ಕೇಳು' ಎಂದು ಹೇಳಿದಾಗ, ಆಸ್ತಿಕನು ಸರ್ಪಯಜ್ಞವನ್ನು ನಿಲ್ಲಿಸಬೇಕು ಎಂಬ ವರವನ್ನು ಕೇಳಿಕೊಂಡನು. ಜನಮೇಜಯನು ಸರ್ಪಯಜ್ಞವನ್ನು ನಿಲ್ಲಿಸಿದ ದಿನವು ಪಂಚಮಿಯಾಗಿತ್ತು.ನಾಗರಪಂಚಮಿ ಸಾತ್ತ್ವಿಕತೆ ಗ್ರಹಿಸಲು ಉಪಯುಕ್ತ ಕಾಲ ಪಂಚಪ್ರಾಣಗಳೇ ಪಂಚನಾಗಗಳಾಗಿವೆ. ನಾಗರಪಂಚಮಿಯ ದಿನದಲ್ಲಿ ವಾತಾವರಣವು ಸ್ಥಿರವಾಗಿರುತ್ತದೆ. ಸಾತ್ತ್ವಿಕತೆಯನ್ನು ಗ್ರಹಿಸಲು ಈ ಕಾಲವು ಅತ್ಯಂತ ಯೋಗ್ಯ ಮತ್ತು ಬಹಳ ಉಪಯುಕ್ತವಾಗಿದೆ. ಈ ದಿನದಂದು ಶೇಷನಾಗ, ಶ್ರೀವಿಷ್ಣುವಿಗೆ ಮುಂದಿನಂತೆ ಪ್ರಾರ್ಥನೆ ಮಾಡಬೇಕು 'ತಮ್ಮ ಕೃಪೆಯಿಂದ ಈ ದಿನದಂದು ಶಿವ ಲೋಕದಿಂದ ಪ್ರಕ್ಷೇಪಿತವಾಗುವ ಲಹರಿಗಳು ನನ್ನಿಂದ ಹೆಚ್ಚೆಚ್ಚು ಗ್ರಹಣವಾಗಲಿ. ನನ್ನ ಆಧ್ಯಾತ್ಮಿಕ ಪ್ರಗತಿಗೆ ಎದುರಾಗುವ ಎಲ್ಲಾ ಅಡಚಣೆಗಳೂ ನಾಶವಾಗಲಿ. ದೇವತೆಗಳ ಶಕ್ತಿಯು ನನ್ನ ಪಂಚಪ್ರಾಣಗಳಲ್ಲಿ ಸಂಗ್ರಹವಾಗಿ ಅದು ಈಶ್ವರ ಪ್ರಾಪ್ತಿಗಾಗಿ ಮತ್ತು ರಾಷ್ಟ್ರ ರಕ್ಷಣೆಗಾಗಿ ಉಪಯೋಗವಾಗಲಿ. ನನ್ನ ಪಂಚಪ್ರಾಣದ ಶುದ್ಧಿಯಾಗಲಿ.' ನಾಗದೇವತೆಯು ಸಂಪೂರ್ಣ ಬ್ರಹ್ಮಾಂಡದ ಕುಂಡಲಿನಿಯಾಗಿದ್ದಾನೆ. ಪಂಚಪ್ರಾಣವೆಂದರೆ ಪಂಚಭೌತಿಕ ತತ್ತ್ವದಿಂದ ಉಂಟಾದ ಶರೀರದ ಸೂಕ್ಷ್ಮರೂಪವಾಗಿದೆ. ಸ್ಥೂಲ ದೇಹವು ಪ್ರಾಣಹೀನವಾಗಿದೆ ಮತ್ತು ಸ್ಥೂಲ ದೇಹದಲ್ಲಿ ಚಲಿಸುವ ಪ್ರಾಣವಾಯುವು ಪಂಚಪ್ರಾಣದಿಂದ ಬರುತ್ತದೆ.ನಾಗರಪಂಚಮಿಯಂದು ಮಾಡಿದ ಉಪವಾಸದ ಮಹತ್ವ 5 ಯುಗಗಳ ಹಿಂದೆ ಸತ್ಯೇಶ್ವರೀ ಎಂಬ ಹೆಸರಿನ ಕನಿಷ್ಠ ದೇವಿಯಿದ್ದಳು. ಸತ್ಯೇಶ್ವರನು ಅವಳ ಸಹೋದರನಾಗಿದ್ದನು.

ಸತ್ಯೇಶ್ವರನು ನಾಗರಪಂಚಮಿಯ ಹಿಂದಿನ ದಿನ ಮೃತ್ಯು ಹೊಂದಿದನು. ಆಗ ಸಹೋದರನ ಮೃತ್ಯುವಿನ ಶೋಕದಲ್ಲಿ ಸತ್ಯೇಶ್ವರಿಯು ಆಹಾರವನ್ನು ಸ್ವೀಕರಿಸಲಿಲ್ಲ. ಆದುದರಿಂದ ಆ ದಿನ ಸ್ತ್ರೀಯರು ಸಹೋದರನ ಹೆಸರಿನಲ್ಲಿ ಉಪವಾಸ ಮಾಡುತ್ತಾರೆ. '

ಸಹೋದರನಿಗೆ ಅಖಂಡ ಆಯುಷ್ಯವು ದೊರಕಲಿ, ಅನೇಕ ಆಯುಧಗಳು ಪ್ರಾಪ್ತವಾಗಲಿ ಮತ್ತು ಅವನು ಪ್ರತಿಯೊಂದು ದುಃಖ ಮತ್ತು ಸಂಕಟಗಳಿಂದ ಪಾರಾಗಲಿ' ಎನ್ನುವುದು ಸಹ ಈ ಉಪವಾಸದ ಹಿಂದಿನ ಕಾರಣವಾಗಿದೆ.

ನಾಗರಪಂಚಮಿಯ ಹಿಂದಿನ ದಿನ ಪ್ರತಿಯೊಬ್ಬ ಸಹೋದರಿಯು ದೇವರಲ್ಲಿ ಮೊರೆ ಇಡುವುದರಿಂದ ಅವಳ ಸಹೋದರನಿಗೆ ಲಾಭವಾಗುತ್ತದೆ ಮತ್ತು ಅವನ ರಕ್ಷಣೆಯಾಗುತ್ತದೆ. ನಾಗನ ಪೂಜೆ ಮಾಡುವುದರ ಹಿಂದಿನ ಶಾಸ್ತ್ರ ಸತ್ಯೇಶ್ವರಿಗೆ ಅವಳ ಸಹೋದರನು ನಾಗರೂಪದಲ್ಲಿ ಕಂಡನು. ಆಗ ಅವಳು ಆ ನಾಗರೂಪವನ್ನು ತನ್ನ ಸಹೋದರನೆಂದು




ಭಾವಿಸಿದಳು. ಆಗ ನಾಗದೇವನು, ನನ್ನನ್ನು ಸಹೋದರನೆಂದು ಭಾವಿಸಿ ಪೂಜೆ ಮಾಡಿದ ಸಹೋದರಿಯ ರಕ್ಷಣೆಯನ್ನು ನಾನು ಮಾಡುವೆನು ಎಂದು ಅವಳಿಗೆ ವಚನ ನೀಡಿದನು. ಆದುದರಿಂದಲೇ ಆ ದಿನ ಪ್ರತಿಯೊಬ್ಬ ಸ್ತ್ರೀಯು ನಾಗನ ಪೂಜೆ ಮಾಡಿ ನಾಗರಪಂಚಮಿಯನ್ನು ಆಚರಿಸುತ್ತಾಳೆ.

**ನಾಗನ ಮಹಾತ್ಮೆ:** 'ಶೇಷನಾಗನು ಪಾತಾಳದಲ್ಲಿ ವಾಸಿಸುತ್ತಾನೆ. ಅವನು ತನ್ನ ಹೆಡೆಯ ಮೇಲೆ ಪೃಥ್ವಿಯನ್ನು ಧರಿಸಿದ್ದಾನೆ. ಅವನಿಗೆ ಸಹಸ್ರ ಹೆಡೆಗಳಿವೆ. ಪ್ರತಿಯೊಂದು ಹೆಡೆಯ ಮೇಲೆ ಒಂದು ವಜ್ರವಿದೆ. ಅವನು ಶ್ರೀವಿಷ್ಣುವಿನ ತಮೋಗುಣದಿಂದ ಉತ್ಪನ್ನವಾಗಿದ್ದಾನೆ. ಪ್ರತಿಯೊಂದು ಕಲ್ಪದ ಅಂತ್ಯದಲ್ಲಿ ಶ್ರೀವಿಷ್ಣು ಮಹಾಸಾಗರದಲ್ಲಿ ಶೇಷಾಸನದ ಮೇಲೆ ಶಯನ ಮಾಡುತ್ತಾನೆ. ತ್ರೇತಾಯುಗದಲ್ಲಿ ಶ್ರೀವಿಷ್ಣು ರಾಮನ ಅವತಾರವನ್ನು ತೆಗೆದುಕೊಂಡಾಗ ಶೇಷನು ಲಕ್ಷ್ಮಣನ ಅವತಾರವನ್ನು ತೆಗೆದುಕೊಂಡಿದ್ದನು. ದ್ವಾಪರ ಮತ್ತು ಕಲಿಯುಗದ ಸಂಧಿಕಾಲದಲ್ಲಿ ಕೃಷ್ಣನ ಅವತಾರವಾದಾಗ ಶೇಷನು ಬಲರಾಮನಾಗಿದ್ದನು. 2. 'ಶ್ರೀಕೃಷ್ಣನು ಯಮುನಾ ನದಿಯ ಆಳದಲ್ಲಿದ್ದ ಕಾಲಿಯಾ ನಾಗನನ್ನು ಮರ್ದನ ಮಾಡಿದನು. ಆ ದಿನವು ಶ್ರಾವಣ ಶುಕ್ಲ ಪಂಚಮಿಯಾಗಿತ್ತು.3. 'ನಾಗಗಳಲ್ಲಿನ ಶ್ರೇಷ್ಠನಾದ 'ಅನಂತ'ನೇ ನಾನು', ಎಂದು ಗೀತೆಯಲ್ಲಿ (10.29) ಶ್ರೀಕೃಷ್ಣ ತನ್ನ ವಿಭೂತಿಯನ್ನು ಹೇಳುತ್ತಾನೆ. ಅನಂತಂ ವಾಸುಕಿಂ ಶೇಷಂ ಪದ್ಮನಾಭಂ ಚ ಕಂಬಲಮ್ ಶಂಖಪಾಲಂ ಧೃತರಾಷ್ಟ್ರಂ ತಕ್ಷಕಂ, ಕಾಲಿಯಂ ತಥಾ॥ ಅನಂತ, ವಾಸುಕೀ, ಶೇಷ, ಪದ್ಮನಾಭ, ಕಂಬಲ, ಶಂಖಪಾಲ, ಧೃತರಾಷ್ಟ್ರ, ತಕ್ಷಕ ಮತ್ತು ಕಾಲಿಯಾ ಹೀಗೆ ಒಂಭತ್ತು ಜಾತಿಯ ನಾಗಗಳ ಆರಾಧನೆಯನ್ನು ಮಾಡುತ್ತಾರೆ.

ಇದರಿಂದ ಸರ್ಪಭಯವಿರುವುದಿಲ್ಲ ಮತ್ತು ವಿಷದಿಂದ ತೊಂದರೆಯಾಗುವುದಿಲ್ಲ. ಪೂಜೆ ನಾಗರಪಂಚಮಿಯ ದಿನ ಅರಿಶಿನ ಅಥವಾ ರಕ್ತಚಂದನದಿಂದ ಮಣೆಯ ಮೇಲೆ ನವನಾಗಗಳ ಆಕೃತಿಗಳನ್ನು ಬಿಡಿಸಿ ಅವುಗಳ ಪೂಜೆಯನ್ನು ಮಾಡಿ ಹಾಲು ಮತ್ತು ಅರಳಿನ ನೈವೇದ್ಯವನ್ನು ಅರ್ಪಿಸಬೇಕು.

ನವನಾಗಗಳು ಪವಿತ್ರಕಗಳ ಒಂಬತ್ತು ಪ್ರಮುಖ ಗುಂಪುಗಳಾಗಿವೆ. ಪವಿತ್ರಕಗಳೆಂದರೆ ಸೂಕ್ಷ್ಮಾತಿಸೂಕ್ಷ್ಮ ದೈವೀ ಕಣಗಳು (ಚೈತನ್ಯಕಣಗಳು).

**ನಿಷೇಧ:** ನಾಗರಪಂಚಮಿಯ ದಿನ ಏನನ್ನೂ ಹೆಚ್ಚಬಾರದು, ಕೊಯ್ಯಬಾರದು, ಕರಿಯಬಾರದು, ಒಲೆಯ ಮೇಲೆ ತವೆಯನ್ನು ಇಡಬಾರದು ಮುಂತಾದ ನಿಯಮಗಳನ್ನು ಪಾಲಿಸಬೇಕು. ಈ ದಿನ ಭೂಮಿಯನ್ನು ಅಗೆಯಬಾರದು.

**ಸಂಕಲನ - ಶ್ರೀ. ವಿನೋದ ಕಾಮತ,**



ಕಲಾ ಸಾಹಿತ್ಯ
ಕೃಷ್ಣಪ್ಪ
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ ವಿಮರ್ಶಕರು

# ದೇವಸ್ಥಾನದ ಹುಂಡಿಗೆ ಹಣ,ಒಡವೆ ಹಾಗೂ ದೇಣಿಗೆ ನೀಡಿದ್ದೇವೆಂದು ಮರೆಯಬೇಡಿ

ಮಾನವನಿರ್ಮಿತ ದೇವಸ್ಥಾನ, ಶಿಲ್ಪಿ ನಿರ್ಮಿತ ದೇವರ ವಿಗ್ರಹ, ಹಣ ನಿರ್ಮಿತ ಮಾನವ ಯಂತ್ರ, ಒಡವೆ ನಿರ್ಮಿತ ಅಕ್ಕಸಾಲಿಗ ಈ ಪಂಚ ಪದಗಳಿಗೆ ಅವಿನಾಭಾವ ಸಂಬಂಧವಿದೆ ಮಿಗಿಲಾಗಿ ನಿರ್ಜೀವಗಳು ಆದರೂ ಜೀವಂತವಾಗಿವೆ.ವೇದ-ಉಪನಿಷತ್ತುಗಳ ಆಧಾರದ ಮೇಲೆ ಸ್ಥಾಪಿತವಾದ ಹಿಂದೂ ಸನಾತನ ಧರ್ಮದಲ್ಲಿ ಅನಾದಿಕಾಲದಿಂದಲೂ ಹಿಂದೂ ಧರ್ಮಕ್ಕೆ ಸಂಬಂಧಪಡುವ ದೇವರುಗಳ ದೇವಸ್ಥಾನಗಳನ್ನು ನಂಬಿಕೆಯ ಮೇಲೆ ನಿರ್ಮಿಸಿಕೊಂಡು ಆಚರಣೆ ಮಾಡಿಕೊಂಡು ಬಂದಿದ್ದೇವೆ.ದೇವಸ್ಥಾನಗಳನ್ನು ನಿರ್ಮಿಸಿಕೊಂಡಿರುವ ಉದ್ದೇಶವನ್ನು ಕೆಲವರು ಮರೆತು ಅವರವರ ಲೋಕದಲ್ಲಿ ತೇಲಾಡುತ್ತಿದ್ದಾರೆ ಹಾಗೂ ತಪ್ಪುಗಳನ್ನು ಪದೇಪದೇ ಮಾಡುವುದು ಸಹಜವಾಗಿದೆ ಕಾರಣ ದೇವರ ಮೇಲೆ ನಂಬಿಕೆಯನ್ನೂ ಸಹ ಕಳೆದುಕೊಂಡಿದ್ದಾರೆ.ನಮ್ಮ ಆಸೆ ಆಕಾಂಕ್ಷೆಗಳನ್ನು,ದಾಹ ಗಳನ್ನು ಪೂರೈಸಲು ಮಾಡಿದ ಪಾಪಕರ್ಮಗಳನ್ನು ತೊಳೆಯಲು ದೇವರೇನು ಬಿಟ್ಟಿನ ದೇವಸ್ಥಾನದಲ್ಲಿ ಹುಂಡಿ ಇಟ್ಟಿರುವುದು ಸಹಜ ಆ ಹುಂಡಿಯಲ್ಲಿ ಭಕ್ತಾದಿಗಳು ತಂದಿದ್ದ ಹಣ ಮತ್ತು ಒಡವೆಗಳನ್ನು ಹಾಕಿ ಮಾಡಿದ ಪಾಪ ಕರ್ಮಗಳಿಗೆ ಮನ್ನಿಸು ಮುಂದೆ ಆಯಸ್ಸು, ಆರೋಗ್ಯ,ಐಶ್ವರ್ಯ ದಯಪಾಲಿಸು ಎಂದು ದೇವರಲ್ಲಿ ಬೇಡುತ್ತಾನೆ.ದೇವಸ್ಥಾನದ ಹುಂಡಿಗೆ ಹಣ ಮತ್ತು ಒಡವೆ ಹಾಕಿರುವ ಬಗ್ಗೆ ದೇವರಿಗೆ ಗೊತ್ತಾಗುವುದೇ ಇಲ್ಲ. ದೇವರು ನಿರ್ವಿಕಾರ, ಕಣ್ಣಿಗೆ ಕಾಣದ ಒಂದು ಶಕ್ತಿಯೇ ದೇವರು. ಎಲ್ಲವೂ ನಮ್ಮ ಭ್ರಮೆ ಮತ್ತು ಮೌಢ್ಯ ನಮ್ಮನ್ನ ಹುಚ್ಚನನ್ನಾಗಿ ಮಾಡಿದೆ.ಹುಂಡಿಗೆ ಹಾಕಿರುವ ಒಡವೆ ಮತ್ತು ಹಣವನ್ನು ಹಾಗೂ ದೇಣಿಗೆ ನೀಡಿರುವುದನ್ನು ಕೆಲವು ಆಡಳಿತ ವರ್ಗದವರು ಹಾಗೂ ಕೆಲವು ಅರ್ಚಕರು ದುರುಪಯೋಗಪಡಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ಉದಾಹರಣೆಗೆ:= ತಿರುಪತಿಯಲ್ಲಿ ಮೂರು ಚಿನ್ನದ ಕಿರೀಟ ಕಳವಾಯಿತು ಇನ್ನೂ ಇತ್ಯಾದಿ.ನಾವು ಜೀವನದಲ್ಲಿ ತಪ್ಪು ಮಾಡಿದರೆ ಅದಕ್ಕೆ ನಾವೇ ಅದರ ಭಾರವನ್ನು ಹೊತ್ತುಕೊಳ್ಳಬೇಕು ಯಾವ ದೇವರೂ ಎಲ್ಲೂ ಕೂಡ ಹೊತ್ತುಕೊಂಡಿರುವುದು ಇತಿಹಾಸದಲ್ಲಿ ಕಾಣಲಿಲ್ಲ. ನಾವು ಕಥೆ ಪುರಾಣಗಳಲ್ಲಿ ಕೆಲವು ವಿಚಾರಗಳನ್ನು ತಿಳಿದಿದ್ದೇವೆ. ಉದಾಹರಣೆ ಮೂಲಕ ನಾವು ತಿಳಿಯುವುದಾದರೆ ಒಬ್ಬ ಐಶ್ವರ್ಯವಂತ ಬಡವರ ರಕ್ತ ಹೀರಿ ಸಂಪಾದಿಸಿ ಇಟ್ಟಿದ್ದ ಹಣ,ಆ ಹಣವನ್ನು ಇಡಲು ಜಾಗವಿಲ್ಲದೇ ಮತ್ತು ಯಾರಿಗೂ ಹೇಳದೇ ದಿನಾ ಕೊರಗುತ್ತಿದ್ದು ಒಂದು ದಿನ ಈ ವಿಚಾರವನ್ನು ಗೌತಮ ಬುದ್ಧನ ಹತ್ತಿರ ಹೇಳಿ ಸ್ವಾಮಿ ನಾನು ಕೂಡಿಟ್ಟ ಪಾಪದ ಹಣವನ್ನು ತೀರಾ ಬಡವರಿಗೆ ಹಂಚಬೇಕು ಇದು ನನ್ನಿಂದ ಸಾಧ್ಯವಿಲ್ಲ ನೀವೇ ಹಂಚಬೇಕು ಎಂದು ಕೇಳಿಕೊಂಡನಂತೆ. ಅದಕ್ಕೆ ಬುದ್ಧ ಆಯಿತು ತಂದುಕೊಡಿ ಎಂದು ಹೇಳಿದರಂತೆ ಅದಕ್ಕೆ ಮಾರನೆ ದಿನ ಶ್ರೀಮಂತ ಹಣದ ಚೀಲವನ್ನು ಬುದ್ಧನಿಗೆ ತಂದುಕೊಟ್ಟನಂತೆ.ಕೊಟ್ಟ ನಂತರ ಒಂದು ನಿಮಿಷ ಶ್ರೀಮಂತ ಮೌನವಾಗಿ ನಿಂತು ಕೊಂಡನಂತೆ ಅದಕ್ಕೆ ಬುದ್ಧ ಯಾವುದೇ ಉತ್ತರ ಕೊಡದೇ ಅಥವಾ ಕೃತಜ್ಞತೆ ಹೇಳದೇ ಮರೆತನಲ್ಲಾ ನಾನು ಏಕೆ ಇಷ್ಟು ಹಣ ತಂದುಕೊಟ್ಟೆ ಎಂದು ಗಂಭೀರವಾಗಿ ಕೊರಗಿದ ನಂತೆ. ಅದಕ್ಕೆ ಬುದ್ಧ ಹೇಳಿದರಂತೆ ಅಯ್ಯೋ ಶ್ರೀಮಂತ ನಿನ್ನ ಭಾರವನ್ನು ನಾನು ಹೊತ್ತುಕೊಂಡು ಭಾರದಿಂದ ಯಾವತ್ತು ವಿಮುಕ್ತಿಗೊಳ್ಳುತ್ತೇನೆಂದು ಯೋಚಿಸುತ್ತಿದ್ದೇನೆ ಈ ಸಂಬಂಧ ನೀನೇ ನನಗೆ ಕೃತಜ್ಞತೆ ಹೇಳಲು ಮರೆತಿದ್ದೀಯಾ! ಇನ್ನುಮೇಲೆ ನಿನಗೆ ಭಾರವೇ ಇಲ್ಲ ಎಂದು ಬುದ್ಧ ಹೇಳಿದ ಮೇಲೆ ಸುಮ್ಮನೆ ವಾಪಸ್ಸು ಹೋದನಂತೆ.ನಾವು ದೇವಸ್ಥಾನ ಕಟ್ಟಿದ್ದೇವೆ ಎಂದು ಎಲ್ಲೂ ಹೇಳಿಕೊಳ್ಳಬೇಡಿ ಮೊದಲು ತನ್ನತನವನ್ನು ಅರಿಯಿರಿ ಶುದ್ಧರಾಗಿ, ಸಮಾಜಮುಖಿಯಾಗಿ ಬಾಳಿ ದೇವರಿಗೆ ಹತ್ತಿರವಾಗಿ ಮನುಷ್ಯ ರಾಗಿ ಹಾಗೂ ಲೋಕ ಪ್ರಿಯರಾಗಿ ಬಾಳಿ, ನೊಂದವರಿಗೆ ಸಹಾಯ ಮಾಡುವುದನ್ನು ಮರೆಯಬೇಡಿ. ನೀವು ದೇವಸ್ಥಾನ ಕಟ್ಟಿಕೊಡುವ ಬದಲು ಒಂದು ಶಾಲೆ,ಒಂದು ಗ್ರಂಥಾಲಯ,ಒಂದು ವಾಚನಾಲಯ, ಒಂದು ಆಸ್ಪತ್ರೆ,ಬಡವರಿಗೆ ಮನೆ,ಶೌಚಾಲಯ, ಸಮುದಾಯ ಭವನ ಕಟ್ಟಿಸಿಕೊಡಿ ಅವುಗಳ ಮೇಲೆ ನಿಮ್ಮ ಹೆಸರುಗಳನ್ನು ಬರೆದುಕೊಂಡು ಜನೋಪಕಾರಿಗಳಾಗಿ. ಆಗ ದೇವರು ನಿಮ್ಮ ಭಾಗಕ್ಕೆ ಪ್ರತ್ಯಕ್ಷನಾಗುತ್ತಾನೆ ಸದಾ ನಿಮ್ಮನ್ನು ನೆನೆಯುವ ಅಭಿಮಾನಿಗಳೇ ದೇವರಾಗಿ ಅವರ ಆಶೀರ್ವಾದದಿಂದ ಇನ್ನೂ ಅಭಿವೃದ್ಧಿ ಕಾಣುತ್ತೀರಾ!ಆದಿಕಾಲದಿಂದಲೂ ದೇವಸ್ಥಾನದ ಹುಂಡಿ ಹಣವನ್ನು ಅರ್ಚಕರು, ಆಡಳಿತ ವರ್ಗದವರು ಹಾಗೂ ಇತರರು ದೇವರ ಹೆಸರು ಹೇಳಿ ಸ್ವಾಹ ಮಾಡಿಕೊಂಡಿರುವುದೇ ಜಾಸ್ತಿ. ಅವರನ್ನ ನೀವು ಉದ್ಧಾರ ಮಾಡಲು ಕಣ್ಣುಮುಚ್ಚಿಕೊಂಡು ಹಣ ಮತ್ತು ಒಡವೆಯನ್ನು ಹುಂಡಿಗೆ ಹಾಕುತ್ತೀರಾ! ನಿಮ್ಮ ಕಣ್ಣು ಮುಂದೆ ನರಳುವ ನೂರಾರು ಜೀವಗಳು. ಯೋಚಿಸಿ ಯಾವುದು ಸರಿ,ಯಾವುದು ತಪ್ಪು ನೀವೇ ನಿರ್ಧಾರ ತೆಗೆದುಕೊಳ್ಳಿ.ನಿಮಗೆ ದೇವರಿಂದ ಸಹಾಯವಾಯಿತು ಎಂದು ನೀವು ತಿಳಿದುಕೊಳ್ಳುವುದು ಬರೀ ಭ್ರಮೆಯೇ ಹೊರತು ಮತ್ತೇನು ಇಲ್ಲ ಮೊದಲು ನೀವು ಶುದ್ಧಿಯಾಗುವುದನ್ನು ನೋಡಿ ನೀವು ಶುದ್ಧಿಯಾದರೆ ದೇವರೇ ನಿಮ್ಮ ಬಳಿಗೆ. ಆದ್ದರಿಂದ ನೀವು ಜೀವನದಲ್ಲಿ ಹೆಗ್ಗಳಿಕೆಯನ್ನು ಬಿಡಿ ಮೊದಲು ನೀವು ಮನುಷ್ಯರಾಗಿ ನೂರಾರು ಕಡುಬಡವರಿಗೆ ನೆರಳಾಗಿ ಎಲ್ಲರಲ್ಲೂ ಒಂದಾಗಿ ಬಾಳಿ ಆಗ ನಿಮ್ಮ ಶ್ರೇಯಸ್ಸು ಅಭಿವೃದ್ಧಿ ಸಾಗರದಂತೆ ಸಾಗುತ್ತದೆ. ಬಹುಶಹ: ಅನ್ಯಾಯ ಮಾರ್ಗದಿಂದ ಸಂಪಾದಿಸಿದ ಹೆಚ್ಚುವರಿ ಹಣವನ್ನು ದೇವರು ದೇವಸ್ಥಾನಕ್ಕೆ ದೇಣಿಗೆ ನೀಡುವುದು ಸರ್ವೇಸಾಮಾನ್ಯವಾಗಿದೆ. ನ್ಯಾಯಮಾರ್ಗದಲ್ಲಿ ಸಂಪಾದಿಸಿದ ಹಣವನ್ನು ಕೊಡಲು ಯಾರಿಗೂ ಸಹ ಮನಸ್ಸು ಒಪ್ಪುವುದಿಲ್ಲ. ಬಹುತೇಕ ಶ್ರೀಮಂತರು ಹಣ,ಒಡವೆ ಹಾಗೂ ದೇಣಿಗೆಯನ್ನು ನೀಡುತ್ತಾರೆ ಆದರೆ ಬಡವರಿಗೆ ಈ ಬಗ್ಗೆ ಅರಿವೇ ಇಲ್ಲ. ಒಟ್ಟಾರೆ ದೇವಸ್ಥಾನದ ಹುಂಡಿಗೆ ಹಣ,ಒಡವೆ ಹಾಗೂ ದೇಣಿಗೆ ನೀಡಿದ್ದೇವೆ ಎಂದು ಎಲ್ಲೂ ಕೂಡ ಹೇಳಿಕೊಳ್ಳಬೇಡಿ ಹಾಗೂ ಮರೆಯಬೇಡಿ.

# ದಶಕ ಕಳೆದರೂ ಕೆರೆಗಳ ಒಡಲಿಗೆ ಬಾರದ ಜೀವಜಲ

## ಕೆರೆಗಳನ್ನು ತುಂಬಿಸುವ ಏತ ನೀರಾವರಿ ಯೋಜನೆ ಜಾರಿಯಾಗಿ ದಶಕ ಕಳೆದರೂ, ಸಾಕಷ್ಟು ಕೆರೆಗಳು ಇನ್ನು ನೀರಿಲ್ಲದೆ ಭಣಗುಡುತ್ತಿವೆ.

• **ಉದಯವಾಹಿನಿ, ದಾವಣಗೆರೆ:**

22 ಕೆರೆಗಳನ್ನು ತುಂಬಿಸುವ ಏತ ನೀರಾವರಿ ಯೋಜನೆಯು ರೈತರ ಕನಸಿನ ಯೋಜನೆ. ಇದರ ಜಾರಿಗಾಗಿ ಜಗಳೂರಿನಿಂದ ಹೋರಾಟ ಆರಂಭವಾಗಿತ್ತು. ರೈತರು ಹೋರಾಟ ಮಾಡಿದ ಪರಿಣಾಮ 2012ರಲ್ಲಿ ಜಾರಿಯಾಗಿತ್ತು. ದುರಂತವೆಂದರೆ, ಬೆರಳೆಣಿಕೆಯಷ್ಟು ಕೆರೆಗಳಿಗೆ ಮಾತ್ರ ಅಷ್ಟೋ ಇಷ್ಟೋ ನೀರು ಬರುತ್ತಿದೆ. ಉಳಿದ ಸಾಕಷ್ಟು ಕೆರೆಗಳು ನೀರಿಲ್ಲದೆ ಭಣಗುಡುತ್ತಿವೆ. ದಾವಣಗೆರೆ ತಾಲ್ಲೂಕಿನ ಬರೋಬ್ಬರಿ 22 ಕೆರೆಗಳನ್ನು ತುಂಬಿಸುವ ಯೋಜನೆ ಇದಾಗಿತ್ತು. ಇದೀಗ ರೈತರಿಗೆ ನೀರಿ ಅವಶ್ಯಕತೆ ಇದೆ. ಇತ್ತ ಮಳೆ ಇಲ್ಲದೆ ಬರದ ಛಾಯೆ ಆವರಿಸಿದೆ. ನೀರಿಗಾಗಿ ರೈತರು

**1 : ಕೆರೆಗಳನ್ನು ತುಂಬಿಸುವ ಯೋಜನೆ**
**2 : ನೀರು ಹರಿಸುವ ಪವರ್ ಸೆಂಟರ್**
**3 : ತುಂಗಭದ್ರಾ ನದಿಯಿಂದ ನೀರು**

ತಾಲ್ಲೂಕಿನ ಮಲ್ಲಶೆಟ್ಟಿ ಹಳ್ಳಿ ಬಳಿ ಇರುವ ನೀರಿನ ಜಾಕ್ ವೆಲ್ ಬಳಿ ರೈತರು ಆಕ್ರೋಶ ಹೊರಹಾಕಿದರು. ಮೋಟಾರ್ ಹಾಕಿ ನೀರು ಲಿಫ್ಟ್ ಮಾಡುವಂತೆ ಅಧಿಕಾರಿಗಳಿಗೆ ಒತ್ತಾಯಿಸಿದರು.

ಆನಗೋಡು, ಹೆಬ್ಬಾಳು, ಮಾಯಕೊಂಡ ಭಾಗದ ಕೆರೆಗಳಿಗೆ ಹರಿದಿಲ್ಲ ನೀರು ದಾವಣಗೆರೆ ತಾಲ್ಲೂಕಿನ ಮಲ್ಲಶೆಟ್ಟಿಹಳ್ಳಿ ಗ್ರಾಮದ ಬಳಿ ಇರುವ ಜಾಕ್ ವೆಲ್ ಸದ್ಯ ಕೆರೆಗಳಿಗೆ ನೀರು ಹರಿಸುವ ಪವರ್ ಸೆಂಟರ್. ತುಂಗಭದ್ರಾ ನದಿಯಲ್ಲಿ ನೀರು ಹರಿದು ಹೋಗುತ್ತಿದ್ದರೂ ಈ ಕೆರೆಗಳನ್ನು ತುಂಬಿಸಲು ಆಗದ ದುಸ್ಥಿತಿ ತಲೆದೋರಿದೆ. ರೈತರು ಬೆಳೆಗಳನ್ನು ಉಳಿಸಿಕೊಳ್ಳಲು ಹರಸಾಹಸಪಡುತ್ತಿದ್ದಾರೆ. ಅದರಲ್ಲೂ ದಾವಣಗೆರೆಯ ಆನಗೋಡು, ಹೆಬ್ಬಾಳು ಹಾಗೂ ಮಾಯಕೊಂಡ ಬರಪೀಡಿತ ಹೋಬಳಿಗಳ 22 ಕೆರೆಗಳನ್ನು ತುಂಬಿಸುವ ಯೋಜನೆ ಮಾತ್ರ ಈ ಭಾಗದ ರೈತರಿಗೆ ಉಪಯೋಗಕ್ಕೆ ಬಾರದಂತಾಗಿದೆ. ಈ ಕೆರೆಗಳ ಒಡಲು ತುಂಬಿಸಲು ಹರಿಹರದ ರಾಜನಹಳ್ಳಿ ಬಳಿಯ ತುಂಗಭದ್ರಾ ನದಿಯಿಂದ ನೀರು ಎತ್ತಿ, ಮಲ್ಲಶೆಟ್ಟಿ ಹಳ್ಳಿ ಬಳಿಯ ಜಾಕ್‌ವೆಲ್‌ಗೆ ನೀರು ಲಿಫ್ಟ್ ಮಾಡಲಾಗುತ್ತದೆ.

ಅಲ್ಲಿಂದ 22 ಕೆರೆಗಳಿಗೆ ನೀರು ತುಂಬಿಸುವ ಕೆಲಸವನ್ನು ಅಧಿಕಾರಿಗಳು ಮಾಡಬೇಕಿತ್ತು, ಕಳಪೆ ಪೈಪ್‌ಲೈನ್ ಕಾಮಗಾರಿಯಿಂದ ತಲೆಬಿಸಿಯಾಗಿದೆ. ಈ ಯೋಜನೆ ಜಾರಿಯಾಗಿ ವರ್ಷಗಳೇ ಉರುಳಿದರೂ ಇಂದಿಗೂ ರೈತರಿಗೆ ನೀರು ಮರೀಚಿಕೆಯಾಗಿದೆ.

19 ಕೆರೆಗಳ ಪೈಕಿ 8ಕ್ಕೂ ಹೆಚ್ಚು ಕೆರೆಗಳಿಗೆ ಬರಬೇಕಿದೆ ನೀರು



ಉದಯವಾಹಿನಿ ಚಿತ್ರ

> ಹಾಲವರ್ತಿ ಗ್ರಾಮ ಕೆರೆಯ ವ್ಯಾಪ್ತಿಯಲ್ಲಿ ಬರುವ ರೈತರು ನಾವು. ನಾಳೆ ನಾಡಿದ್ದು ಉಳಿದ ಎಂಟು ಕೆರೆ ರೈತರು ಬರಲಿದ್ದಾರೆ. ಕೆರೆಗೆ ನೀರು ಬಂದರೆ ಕೊಳವೆಬಾವಿ ರಿಚಾರ್ಜ್ ಆಗಲಿವೆ. ದನಕರುಗಳಿಗೆ ಕುಡಿಯಲು ನೀರು ಸಿಗಲಿದೆ'' ಎಂದು ಹೇಳಿದರು. -ರೈತ ರುದ್ರೇಶ್

> ತಕ್ಷಣ ಅಧಿಕಾರಿಗಳು ಮೂರು ಮೋಟಾರ್ ಮೂಲಕ ನೀರು ಎತ್ತಿ ಕೆರೆಗಳಿಗೆ ಹಾಯಿಸಿದರೆ ಹೆಬ್ಬಾಳು, ಹಾಲವರ್ತಿ ಕೆರೆಗಳಿಗೆ ನೀರು ಬರಲಿದೆ. ಇಡೀ ಕೆರೆ ಒಣಗಿಹೋಗಿದೆ. ದನಕರುಗಳಿಗೆ ಕುಡಿಯಲು ನೀರಿಲ್ಲದಂತಾಗಿದೆ. ಕೇಳಿದರೆ ಪೈಪ್‌ಲೈನ್ ಸರಿ ಇಲ್ಲ ಎಂಬ ಸಬೂಬು ಹೇಳುತ್ತಿದ್ದಾರೆ. ಅದನ್ನು ಸರಿಪಡಿಸುವ ಕೆಲಸ ಅಧಿಕಾರಿಗಳು ಮಾಡಬೇಕು ಎಂದು ಆಗ್ರಹಿಸಿದರು.
> -ರೈತ ವಿಜಯ್

> ಈ ಯೋಜನೆ ಆರಂಭವಾಗಿ ವರ್ಷಗಳೇ ಉರುಳಿವೆ. ಆರಂಭದಲ್ಲಿ ಒಂದು ವರ್ಷ ಅಷ್ಟೋ ಇಷ್ಟೋ ನೀರು ಕೆರೆಗೆ ಬಂತು. ಆದಾದ ಬಳಿಕ ನೀರು ಬರಲೇ ಇಲ್ಲ, ತುಂಗಭದ್ರಾ ನದಿ ತುಂಬಿ ಹರಿಯುತ್ತಿದೆ. ನೀರು ಲಿಫ್ಟ್ ಮಾಡಬಹುದು. ಮೂರು ಮೋಟಾರ್‌ಗಳಿದ್ದರೂ ಕೇವಲ ಒಂದು ಮೋಟಾರ್ ಮೂಲಕ ನೀರು ಲಿಫ್ಟ್ ಮಾಡುತ್ತಿದ್ದಾರೆ.

ಮಲ್ಲಶೆಟ್ಟಿಹಳ್ಳಿ ಜಾಕ್‌ವೆಕಲ್‌ನಿಂದಲೇ ಎಲ್ಲಾ 22 ಕೆರೆಗಳ ಪೈಕಿ 19 ಕೆರೆಗಳಿಗೆ ನೀರು ಸರಬರಾಜು ಆಗಲಿದೆ. ಈಗಾಗಲೇ 22 ಕೆರೆಗಳಲ್ಲಿ 3 ಕೆರೆಗಳಿಗೆ ಭರಮಸಾಗರ ಏತ ನೀರಾವರಿ ಯೋಜನೆ ಮೂಲಕ ನೀರು ಹರಿಸಲಾಗುತ್ತಿದೆ. ಉಳಿದ 19 ಕೆರೆಗಳಲ್ಲಿ 10-11 ಕೆರೆಗಳಿಗೆ ಅಷ್ಟು ಇಷ್ಟು ನೀರು ಹರಿಯುತ್ತಿದ್ದು, ಉಳಿದ 8 ಕೆರೆಗಳಿಗೆ ನೀರು ಹರಿಸಲು ಗ್ರಹಣ ಹಿಡಿದಿದೆ. ಈ ಎಂಟು ಕೆರೆಗಳಿಗೆ ನೀರು ತುಂಬಿಸಲು ರೈತರು ನೀರಿಗಾಗಿ ಪಟ್ಟುಹಿಡಿದಿದ್ದಾರೆ.

ಪ್ರತಿ ವರ್ಷ ಜೂನ್, ಜುಲೈ, ಆಗಸ್ಟ್ ಈ ಮೂರು ತಿಂಗಳ ಅವಧಿಯೊಳಗೆ ಕೆರೆಗಳಿಗೆ ನೀರು ತುಂಬಿಸಬೇಕಿದೆ. ಏಕೆಂದರೆ ಆಗಲೇ ತುಂಗಭದ್ರಾ ನದಿಯಲ್ಲಿ ನೀರು ಹರಿಯುತ್ತಿದೆ.

ಈಗಾಗಲೇ ಎರಡುವರೆ ತಿಂಗಳು ಕಳೆದು ಹೋಗಿವೆ. ಉಳಿದ ಒಂದು ತಿಂಗಳಲ್ಲಿ ಇಷ್ಟೊಂದು ಕೆರೆಗಳನ್ನು ನೀರು ತುಂಬಿಸಲು ಹೇಗೆ ಸಾಧ್ಯ ಅನ್ನೋದು ರೈತರ ಪ್ರಶ್ನೆಯಾಗಿದೆ. ಈ ಕೆರೆಗಳಿಗೆ ನೀರು ಬಂದರೆ ಜನ, ಜಾನುವಾರುಗಳಿಗೆ ನೀರು ಸಿಗಲಿದೆ, ಬೋರ್ ವೆಲ್‌ಗಳು ರಿಚಾರ್ಜ್ ಆಗಲಿವೆ. ಅಲ್ಲದೆ ಬೆಳೆ ಉಳಿಸಿಕೊಳ್ಳು ಈ ನೀರು ಆಸರೆಯಾಗಲಿದೆ ಎಂದು ರೈತರ ಅಭಿಪ್ರಾಯವಾಗಿದೆ.

# ಹುಮನಾಬಾದ್‌ನಲ್ಲಿ 4 ಕಾರ್ಖಾನೆಗಳಿಗೆ ಬೀಗ

• **ಉದಯವಾಹಿನಿ, ಹುಮನಾಬಾದ್:**

ಮಾಲಿನ್ಯ ನಿಯಂತ್ರಣ ನಿಯಮಗಳ ಉಲ್ಲಂಘನೆ, ಪರಿಸರಕ್ಕೆ ಹಾನಿ ಉಂಟು ಮಾಡುತ್ತಿರುವ ಮತ್ತು ಸಾರ್ವಜನಿಕರ ಆರೋಗ್ಯಕ್ಕೆ ಸಮಸ್ಯೆ ಉಂಟು ಮಾಡುತ್ತಿರುವ ಆರೋಪಗಳ ಹಿನ್ನೆಲೆಯಲ್ಲಿ ನಾಲ್ಕು ಕಾರ್ಖಾನೆಗಳಿಗೆ ಬೀಗ ಹಾಕಲಾಯಿತು. ಸಚಿವರ ಸೂಚನೆಯ ಬೆನ್ನಲ್ಲೇ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅವರು ಆ.10ರಂದು ನೀಡಿದ ಆದೇಶದನ್ವಯ, ಸಂಜೆ ಅಧಿಕಾರಿಗಳ ತಂಡ ಪ್ರತ್ಯಕ್ಷವಾಗಿ ಭೇಟಿ ನೀಡಿ ಕಾರ್ಖಾನೆಗಳನ್ನು ಸೀಲ್‌ಡೌನ್ ಮಾಡುವ ಪ್ರಕ್ರಿಯೆ ಆರಂಭಿಸಿದರು. ಎಚ್-6, ಸತ್ಯ ದೀಪ್ತ ಫಾರ್ಮಾ, ಹಿಮಾಲಯ , ಕೆಜಿಎಸ್ ಇಂಡಸ್ಟ್ರಿಗಳ ಕಾರ್ಯಸ್ಥಗಿತಮಾಡಿ ಅಧಿಕಾರಿಗಳು ಸೀಲ್ಡೈನ್ ಕಾರ್ಖಾನೆಗೆ ಬೀಗ ಹಾಕಿದರು.

ಮಾಣಿಕನಗರದ ಗುರು ಗಂಗಾ ಹಳ್ಳದ ಮೂಲಕ ಕಾರಂಜಾ ಜಲಾಶಯಕ್ಕೆ ರಾಸಾಯನಿಕ ತ್ಯಾಜ್ಯ ಸೇರುತ್ತಿರುವುದಕ್ಕೆ ಜನರಿಂದ ಆಕ್ರೋಶಗೊಂಡಿರುವ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ್ ಖಂಡ್ರೆ ಅವರು ತ್ಯಾಜ್ಯ ಹರಡಿಸುತ್ತಿರುವ ಘಟಕಗಳನ್ನು ಮುಚಿಸಲು ಜಿಲಾಧಿಕಾರಿಗಳಿಗೆ. ಆ.10ರಂದು ಆದೇಶ ನೀಡಿದ ನೀಡಿದ್ದರು. ಕಾರ್ಖಾನೆಗಳಲಿನ ತಯಾರಿಕಾ ಘಟಕ ಸ್ಥಗಿತಗೊಳಿಸುವಂತೆ ಹುಮನಾಬಾದ್ ಆ.11ರಂದು ತಹಶೀಲ್ ಕಾರ್ಯಾಲಯದಿಂದ ಮೂಲಕ ನೋಟಿಸ್ ನೀಡಲಾಗಿತ್ತು.



ಉದಯವಾಹಿನಿ ಚಿತ್ರ

ಈ ಹಿನ್ನೆಲೆಯಲ್ಲಿ ಕಾಲಾವಕಾಶವೂ 4 ಕಾರ್ಖಾನೆಗಳಿಗೆ ಬೀಗ್ ಜಡೆಯಲಾಗಿದೆ. ಸಹಾಯಕ ಆಯುಕ್ತ ಪ್ರಕಾಶ ಕುದರೆ, ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕಿ ಸುರೇಖಾ, ಕರ್ನಾಟಕ ಕೈಗಾ ರಿಕಾ ಪ್ರದೇಶಗಳ ಅಭಿವೃದ್ಧಿ ಮಂಡಳಿ ಉಪ ಅಭಿವೃದ್ಧಿ ಅಧಿಕಾರಿ ಪ್ರೇಮಲತಾ, ತಾಪಂ ಅಧಿಕಾರಿ ದೀಪಿಕಾ ನಾಯ್ಕಲ್, ಡಿವೈಎಸ್ಪಿ ಮಡೋಳಪ್ಪ, ಪಿಎಸ್‌ಐ ಸುರೇಶ್ ಕುಮಾರ, ಕಂದಾಯ ನೀರಿಕ್ಷಕ ರಾಹುಲ್ ದೇವ, ಆನಂದ ಜಮಾಲೆ, ಸಹಾಯಕ ಪರಿಸರ ಮಾಲಿನ್ಯ ಅಧಿಕಾರಿ ಸಂತೋಷ್ ಸೇರಿದಂತೆ ಉಪಸ್ಥಿತರಿದ್ದರು.

# ವಿಬಿಜಿ ರಾಮ್‌ಜಿ-ರೋಜ್ ಗಾರ್ ಗ್ಯಾರಂಟಿ ಕಾರ್ಡ್‌ಗಳ ವಿತರಣೆ

• **ಉದಯವಾಹಿನಿ,ಭಾಲ್ಕಿ:**

ತಾಲ್ಲೂಕಿನ ಖಟಕ ಚಿಂಚೋಳಿ ಗ್ರಾಮ ಪಂಚಾಯಿತಿಯಲ್ಲಿ ವಿಬಿಜಿ ರಾಮ್‌ಜಿ)-2025 ಯೋಜನೆಯಡಿ ಹೆಸರು ನೊಂದಾಯಿಸಿಕೊಂಡ 51 ಹೊಸ ಕುಟುಂಬಗಳ ಕೂಲಿ ಕಾರ್ಮಿಕರಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಬೀರೆಂದ್ರಸಿಂಗ್ ಠಾಕೂರ್ ಜಿಆರ್ ಜಿ ಕಾರ್ಡ್ ವಿತರಿಸಿದರು.ನಂತರ ಮಾತನಾಡಿದ ಅವರು, ಸರ್ಕಾರವು ಜುಲೈ 1ರಿಂದ ಹೊಸ ವಿಬಿಜಿ ರಾಮ್‌ಜಿ ಯೋಜನೆ ಜಾರಿಗೆ ತಂದಿದೆ.

ಅಕುಶಲ ದೈಹಿಕ ಶ್ರಮದ ಕೂಲಿ ಕೆಲಸ ಮಾಡಲಿಚ್ಛಿಸುವವರು ಗ್ರಾಪಂಗೆ ಭೇಟಿ ನೀಡಿ ಯೋಜನೆಯಲ್ಲಿ ತಮ್ಮ ಹೆಸರು ನೊಂದಾಯಿಸಿಕೊಳ್ಳಿ ಎಂದರು. ನೋಂದಣಿ ನಂತರ ಆ ಕುಟುಂಬಕ್ಕೆ ಗ್ರಾಮ ಪಂಚಾಯಿತಿ ವತಿಯಿಂದ ಜಿಆರ್ ಜಿ ಕಾರ್ಡ್ ನೀಡಲಾಗುತ್ತದೆ.

ಈ ಕಾರ್ಡ್ ಹೊಂದಿದ್ದರೆ ಮಾತ್ರ ನೀವು ಅಧಿಕೃತವಾಗಿ ಕೂಲಿ ಕೆಲಸಕ್ಕಾಗಿ ಗ್ರಾಮ ಪಂಚಾಯಿತಿಗೆ ಬೇಡಿಕೆ ಸಲ್ಲಿಸಬಹುದು ಎಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಗ್ರಾಮಸ್ಥರಿಗೆ, ಕೂಲಿಕಾರರಿಗೆ ತಿಳಿಸಿದರು.ತಾ.ಪಂ. ಸಹಾಯಕ ನಿರ್ದೇಶಕ ಬಾಲಾಜಿ ಕೋಟೆ ಅವರು ಮಾತನಾಡಿ, ಈ ಹೊಸ ಯೋಜನೆಯಲ್ಲಿ ಜಲ ಸಂರಕ್ಷಣೆ, ಗ್ರಾಮೀಣ ಮೂಲ ಸೌಕರ್ಯಗಳು, ಜೀವನೋಪಾಯ ಹಾಗೂ ಹವಾಮಾನ ವಿದ್ಯಾಮಾನಗಳನ್ನು ತಗ್ಗಿಸುವುದು ಇವುಗಳಿಗೆ ಸಂಬಂಧಿಸಿದಂತೆ 318 ಬಗೆಯ ಸಮುದಾಯ ಮತ್ತು ವೈಯಕ್ತಿಕ ಕಾಮಗಾರಿಗಳು ಇದ್ದು, ರೈತರು ಹಾಗೂ ಆಸಕ್ತರು ಯೋಜನೆಯ ಲಾಭ ಪಡೆದುಕೊಳ್ಳಬೇಕು ಎಂದರು.



ಉದಯವಾಹಿನಿ ಚಿತ್ರ

# ಶ್ರಾವಣ ಮಾಸದ ಪ್ರವಚನಕ್ಕೆ ತಹಶೀಲ್ದಾರ ಮಹೇಶ ಪಾಟೀಲ ಚಾಲನೆ

• **ಉದಯವಾಹಿನಿ, ಔರಾದ:**

ಶ್ರಾವಣ ಮಾಸದ ಅಂಗವಾಗಿ ಶ್ರೀ ಉದ್ಭವಲಿಂಗ ಅಮರೇಶ್ವರ ದೇವಸ್ಥಾನದಲ್ಲಿ ಆಯೋಜಿಸಲಾದ ಒಂದು ತಿಂಗಳ ಕಾಲ ನಡೆಯಲಿರುವ ಶ್ರೀ ಯಡಿಯೂರು ಸಿದ್ದಲಿಂಗೇಶ್ವರ ಪುರಾಣ ಪ್ರವಚನ ಕಾರ್ಯಕ್ರಮಕ್ಕೆ ತಹಸೀಲ್ದಾರ ಮಹೇಶ ಪಾಟೀಲ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಶ್ರಾವಣ ಮಾಸವು ಧಾರ್ಮಿಕ ಆಚರಣೆಗಳ ಜೊತೆಗೆ ಆತ್ಮಚಿಂತನೆ, ಸತ್ಕಾರ್ಯ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರಣೆ ನೀಡುವ ಪವಿತ್ರ ಕಾಲವಾಗಿದೆ. ಪ್ರವಚನಗಳು ಕೇವಲ ಧಾರ್ಮಿಕ ವಿಚಾರಗಳಿಗೆ ಸೀಮಿತವಾಗದೆ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ, ನೈತಿಕತೆ ಮತ್ತು ಸಹಬಾಳ್ವೆಯ ಸಂದೇಶವನ್ನು ಸಾರುವ ಪ್ರವಚನ ಎಲ್ಲರೂ ಆಲಿಸಬೇಕು ಎಂದರು.ಪ್ರವಚನಕಾರರಾದ ವೇದಮೂರ್ತಿ ಗುರುಪಾದಯ್ಯ ಶಾಸ್ತ್ರಿಗಳು ಮಾತನಾಡಿ ಶ್ರಾವಣ ಮಾಸದ ಮಹತ್ವ, ಶಿವಭಕ್ತಿ, ಸಂತ ಶರಣರ ಜೀವನ ಸಾರ ಹಾಗೂ ಅಧ್ಯಾತ್ಮದ ಸಾರ ಹಾಗೂ ಉತ್ತಮ ಜೀವನದ ಮೌಲ್ಯಗಳ ಕುರಿತು ಭಕ್ತರಿಗೆ ಮನವರಿಕೆ ಮಾಡಿಕೊಟ್ಟರು. ಪ್ರತಿಯೊಬ್ಬರೂ ಧಾರ್ಮಿಕ ವಿಚಾರಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮಾಜದ ಒಳಿತಿಗೆ ಮನದಲ್ಲಿನ ಮಲಿನತೆಯ ಶುದ್ಧೀಕರಣಕ್ಕೆ ಪ್ರವಚನಗಳು ಸಹಕಾರಿ ಎಂದು ತಿಳಿಸಿದರು.ಪ್ರವಚನ ಸಮಿತಿ ಅಧ್ಯಕ್ಷ ಬಸವರಾಜ ದೇಶಮುಖ ಅವರು ಮಾತನಾಡಿ ಶ್ರಾವಣ ಮಾಸದ ಪ್ರಯುಕ್ತ ಪ್ರತಿದಿನ ವಿಶೇಷ ಪೂಜೆ, ಭಜನೆ, ಪ್ರವಚನ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಆಧ್ಯಾತ್ಮಿಕ ಚಿಂತನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಪ್ರತಿ ವರ್ಷದಂತೆ ಈ ವರ್ಷವೂ ಸಹ ಸಂಗೀತ ಕಲಾವಿದರಾದ ಪುರುಷೋತ್ತಮ ದೇಸಾಯಿ, ತಬಲಾ ವಾದಕ ಮಾಣಿಕರಾವ ಗುಡುರೆ ಸಂಗೀತ ಸೇವೆ ನೀಡಿದರು.



ಉದಯವಾಹಿನಿ ಚಿತ್ರ

# ಕೂಡ್ಲಿಗಿ ತಾಲೂಕಿನ ವಿನಾಯಕ.ಸಿ ರಾಷ್ಟ್ರಪತಿ ಭವನದ ಮುಖ್ಯ ಅತಿಥಿ



ಉದಯವಾಹಿನಿ ಚಿತ್ರ

• **ಉದಯವಾಹಿನಿ, ಹೊಸಪೇಟೆ.**

ವಿಜಯನಗರ ಜಿಲ್ಲೆ ಕೂಡ್ಲಿಗಿ ತಾಲ್ಲೂಕಿನ ಗಂಡುಬೊಮ್ಮನಹಳ್ಳಿ ಗ್ರಾಮದ ವಿನಾಯಕ.ಸಿ. ಅವರು ಆ.15 ರಂದು ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಜರುಗಲಿರುವ 80ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದ ಅತಿಥಿಯಾಗಿ ಆಯ್ಕೆಯಾಗಿದ್ದಾರೆ. ಕೇಂದ್ರ ಸರ್ಕಾರದ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ವತಿಯಿಂದ ಭರ್ತಿ ಅಭಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನ್ ಯೋಜನೆಯಡಿ ಕೂಡ್ಲಿಗಿ ತಾಲೂಕಿನ ಗಂಡುಬೊಮ್ಮನಹಳ್ಳಿ ಗ್ರಾಮದ ವಿನಾಯಕ.ಸಿ ಅವರನ್ನು ಆಯ್ಕೆ ಮಾಡಲಾಗಿದೆ. ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ, ಭರ್ತಿ ಅಭಾ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನ್ ಯೋಜನೆಯಡಿ ಬುಡಕಟ್ಟು ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಶ್ರೇಯೋಭಿವೃದ್ಧಿಗಾಗಿ ವಿವಿಧ ಇಲಾಖೆಗಳನ್ನು ಒಳಗೊಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು. 2026-27ನೇ ಸಾಲಿಗೆ ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಜನಜಾತಿಯ ಗ್ರಾಮ ಉತ್ಕರ್ಷ ಅಭಿಯಾನ ಯೋಜನೆಯಡಿಯಲ್ಲಿ ಮೀನುಗಾರಿಕೆ ಇಲಾಖೆಯಿಂದ ತ್ರಿಚಕ್ರ ವಾಹನ ಯೋಜನೆ ಪಡೆದ ಪರಿಶಿಷ್ಟ ಪಂಗಡದ ಫಲಾನುಭವಿ ಆಗಿರುವ ವಿನಾಯಕ.ಸಿ ಅವರನ್ನು ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ನೇತೃತ್ವದಲ್ಲಿ ಮೀನುಗಾರಿಕೆ ಇಲಾಖೆ ಉಪನಿರ್ದೇಶಕರು ಹಾಗೂ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಆಯ್ಕೆ ಮಾಡಿದ್ದಾರೆ.

**ಜಿಲ್ಲಾಡಳಿತದಿಂದ ಅಭಿನಂದನೆ:** ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಆ.15 ರಂದು ಜರುಗಲಿರುವ 80ನೇ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಕ್ಕೆ ರಾಜ್ಯದಿಂದ ಅತಿಥಿಯಾಗಿ ಆಯ್ಕೆಯಾದ ಏಕೈಕ ವ್ಯಕ್ತಿಯಾಗಿರುವ ವಿನಾಯಕ ಸಿ. ಆವರನ್ನು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜರುಗಿದ ಸರಳ ಸಮಾರಂಭದಲ್ಲಿ ಜಿಲ್ಲಾಧಿಕಾರಿ ಕವಿತಾ ಎಸ್.ಮನ್ನಿಕೇರಿ ಅವರು, ಅಭಿನಂದಿಸಿ, ರಾಷ್ಟ್ರಪತಿ ಭವನದಿಂದ ಬಂದಂತಹ ಆಹ್ವಾನ ಪತ್ರಿಕೆಯನ್ನು ನೀಡಿ, ಜಿಲ್ಲಾಡಳಿತದ ಪರವಾಗಿ ಶುಭ ಹಾರೈಸಿದರು.

# ಎಸ್‌ಐಆರ್ ಪ್ರಕ್ರಿಯೆ ಸೆ.30 ರ ವರೆಗೆ ವಿಸ್ತರಿಸಲು ನಾಗರೀಕ ಮತಕಾವಲು ಸಮಿತಿ ಆಗ್ರಹ

• **ಉದಯವಾಹಿನಿ, ಹೊಸಪೇಟೆ.**

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಅನಿವಾರ್ಯ. ಆದರೆ ಚುನಾವಣಾ ಆಯೋಗ ರಾಜ್ಯದಲ್ಲಿ ಕೈಗೊಂಡಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಅವೈಜ್ಞಾನಿಕ ವಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯಾಧ್ಯಕ್ಷ ಹಾಗೂ ನಾಗರೀಕ ಮತ ಕಾವಲು ಸಮಿತಿ ರಾಜ್ಯ ಸಂಚಾಲಕ ಜೆ.ಎಂ.ವೀರಸಂಗಯ್ಯ ತಿಳಿಸಿದರು. ಸ್ಥಳೀಯ ಪತ್ರಿಕಾ ಭವನದಲ್ಲಿ ಜರುಗಿದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಭಾರತ ಸಂವಿಧಾನ ರಚನೆ ನಂತರ 18 ವರ್ಷ ತುಂಬಿದ ಪ್ರತಿಯೊಬ್ಬರಿಗೂ ಮತದಾನದ ಹಕ್ಕನ್ನು ಸರ್ಕಾರ ಹಾಗೂ ಆಯೋಗ ನೀಡುತ್ತಾ ಬಂದಿತ್ತು. ಯಾರು ಅರ್ಜಿ ಹಾಕಿ ಮತದಾನದ ಹಕ್ಕು ಪಡೆದಿರಲಿಲ್ಲ. ಆದರೆ ಈಗ ನಮ್ಮ ಮತದಾನದ ಹಕ್ಕನ್ನು ಪಡೆಯಲು ಅರ್ಜಿ ಹಾಕಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದು ಖೇಧಕರ ಸಂಗತಿಯಾಗಿದೆ. ರಾಜ್ಯದಲ್ಲಿ ಮುಂಗಾರು ಕೈಕೊಟ್ಟಿರುವುದರಿಂದ ವ್ಯಾಪಕ ಬರಗಾಲ ತಲೆದೋರಿದೆ. ಅದರಲ್ಲು ವಿಜಯನಗರ ಜಿಲ್ಲೆಯಲ್ಲಿ ವ್ಯಾಪಕ ಬರವಿದೆ. ರೈತರು ಹಾಗೂ ಕೃಷಿ ಕೂಲಿಕಾರ್ಮಿಕರು ಕೆಲಸ ಹರಸಿ ಬೇರೆ ಬೇರೆ ರಾಜ್ಯಗಳಿಗೆ ಹಾಗೂ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ. ಬಿಎಲ್‌ಒ ಗಳು ಮನೆಗಳಿಗೆ ಭೇಟಿ ಕೊಟ್ಟರು ಮನೆ ಲಾಕ್ ಆಗಿರುತ್ತದೆ. ಇಂತಹ ಸಂದರ್ಭದಲ್ಲಿ ದುಡಿಯುವ ವರ್ಗವನ್ನು ಹೊರಗಿಟ್ಟು ವಿಶೇಷ ಮತದಾರರ ಪರಿಷ್ಕರಣೆ ಮಾಡುವುದು ಸೂಕ್ತವಲ್ಲ. ಈ ಹಿನ್ನೆಲೆಯಲ್ಲಿ ಎಸ್‌ಐಆರ್ ಪ್ರಕ್ರಿಯೆಯನ್ನು ಸೆ.30 ರ ವರೆಗೆ ವಿಸ್ತರಿಸಬೇಕು ಎಂದು ಒತ್ತಾಯಿಸಿದರು. ರಾಜ್ಯದಲ್ಲಿ ತಕ್ಷಣ ಯಾವುದೇ ಚುನಾವಣೆಗಳು ನಡೆಯುತ್ತಿಲ್ಲವಾದ್ದರಿಂದ ತರಾತುರಿಯಲ್ಲಿ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ ಮಾಡುವುದು ಬೇಡ ಎಂದು ಚುನಾವಣಾಧಿಕಾರಿಗಳು ಹಾಗು ಚುನಾವಣಾ ಆಯೋಗವನ್ನು ಒತ್ತಾಯಿಸಿದರು.



ಉದಯವಾಹಿನಿ ಚಿತ್ರ

> ಪ್ರಸ್ತುತ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಯಿಂದ ರಾಜ್ಯದಲ್ಲಿ 1.90 ಕೋಟಿ ಜೀವಂತ ಮತದಾರರು ಮತದಾನ ಹಕ್ಕಿನಿಂದ ವಂಚಿತರಾಗಲಿದ್ದಾರೆ. ಮತದಾರರ ಪಟ್ಟಿಯಿಂದ ವಂಚಿತರಾಗುತ್ತಿರುವವರ ಪಟ್ಟಿಯನ್ನು ಗ್ರಾಮ ಸಭೆಗಳಲ್ಲಿ ಪ್ರಕಟಿಸಿ ಡಂಗೂರ ಸಾರುವ ಮೂಲಕ ವ್ಯಾಪಕ ಪ್ರಚಾರ ಮಾಡಬೇಕು ಎಂದು ಒತ್ತಾಯಿಸಿದರು.

# ಕೈಕೊಟ್ಟ ಮಳೆರಾಯ-ಸೆಂಚುರಿಯತ್ತ ಧಾನ್ಯ ದರ,!

## ಅಕ್ಕಿಗೆ ಬೇಡಿಕೆ ಹೆಚ್ಚಿರುವುದು ಹಾಗೂ ಡೀಸೆಲ್ ಬೆಲೆ ಏರಿಕೆ ಕೂಡ ಬೆಲೆ ಹೆಚ್ಚಳದ ಮೇಲೆ ಪರಿಣಾಮ ಬೀರಿದೆ.

• **ಉದಯವಾಹಿನಿ, ಹಾಸನ:**

ಮುಂಗಾರು ಕೈಕೊಟ್ಟ ಪರಿಣಾಮ ಭತ್ತದ ಬಿತ್ತನೆ ಪ್ರಮಾಣ ಗಣನೀಯವಾಗಿ ಕುಸಿದಿದ್ದು, ಇದರ ನೇರ ಪರಿಣಾಮ ಅಕ್ಕಿಯ ಬೆಲೆಯ ಮೇಲೂ ಬೀಳತೊಡಗಿದೆ. ಹವಾಮಾನ ವೈಪರೀತ್ಯ ಹಾಗೂ ಮಳೆ ಕೊರತೆಯಿಂದ

**1 : ಬೇಡಿಕೆ ಹೆಚ್ಚಳ, ಪೂರೈಕೆಯಲ್ಲಿ ಕೊರತೆ**
**2 : ಭತ್ತದ ಇಳುವರಿ ಕುಂಠಿತವಾಗುವ ಆತಂಕ**
**3 : ಬಿತ್ತನೆ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ**

ಭತ್ತದ ಇಳುವರಿ ಕುಂಠಿತವಾಗುವ ಆತಂಕದ ನಡುವೆ ಅಕ್ಕಿಯ ಬೆಲೆ ಗಗನಮುಖಿಯಾಗಿದ್ದು, ಇದೇ ಪರಿಸ್ಥಿತಿ ಮುಂದುವರಿದರೆ ದೀಪಾವಳಿ ವೇಳೆಗೆ ಕೆಜಿಗೆ 80 ರಿಂದ 100 ರೂ. ತಲುಪಿದರೂ ಅಚ್ಚರಿಯಿಲ್ಲ ಎಂಬ ಆತಂಕ ವರ್ತಕ ವಲಯದಲ್ಲಿ ಮೂಡಿದೆ. ಎರಡು ತಿಂಗಳ ಹಿಂದೆ ಕೆಜಿಗೆ 55ರೂ. ಇದ್ದ ಅಕ್ಕಿಯ ಬೆಲೆ ಇದೀಗ 70ರಿಂದ 72ರೂ.ಗೆ ಏರಿಕೆಯಾಗಿದೆ. 25 ಕೆಜಿ ತೂಕದ ಅಕ್ಕಿ ಚೀಲ 2,200 ಇದ್ದದ್ದು 2,750ರಿಂದ 2,800ಕ್ಕೆ ಏರಿಕೆಯಾಗಿದೆ. ಮುಂದಿನ ಎರಡು-ಮೂರು ತಿಂಗಳಲ್ಲಿ ಹೊಸ ಭತ್ತ ಮಾರುಕಟ್ಟೆಗೆ ಬರಬೇಕಿದ್ದರೂ, ಬಹುತೇಕ ಕಡೆ ಬಿತ್ತನೆಯೇ ಪೂರ್ಣ ಪ್ರಮಾಣದಲ್ಲಿ ನಡೆದಿಲ್ಲ. ಹೀಗಾಗಿಅಕ್ಕಿಯ ಬೆಲೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎಂದು ವರ್ತಕರು ಅಂದಾಜಿಸಿದ್ದಾರೆ.

**ಹಾಸನದಲ್ಲಿ ಶೇ.11ರಷ್ಟು ಮಾತ್ರ ಬಿತ್ತನೆ:** ಮುಂಗಾರು ಮಳೆ ಕೊರತೆಯಿಂದ ರಾಜ್ಯಾದ್ಯಂತ ಕೃಷಿ ಚಟುವಟಿಕೆಗಳ ಮೇಲೆ ತೀವ್ರ ಪರಿಣಾಮ ಬೀರಿದೆ. ಕೃಷಿ ಪ್ರಧಾನ ಹಾಸನ ಜಿಲ್ಲೆಯಲ್ಲಿ 30,500 ಹೆಕ್ಟೇರ್ ಪ್ರದೇಶದಲ್ಲಿ ಭತ್ತ ಬೆಳೆಯುವ ಗುರಿ ಹೊಂದಲಾಗಿದ್ದು, ಇದುವರೆಗೆ ಕೇವಲ 3,304 ಹೆಕ್ಟೇರ್‌ನಲ್ಲಿ ಮಾತ್ರ ಬಿತ್ತನೆಯಾಗಿದೆ. ಅಂದರೆ ಗುರಿಯ ಶೇ.11ರಷ್ಟು ಪ್ರದೇಶದಲ್ಲಷ್ಟೇ ಭತ್ತ ಬಿತ್ತನೆಯಾಗಿದೆ. ರಾಜ್ಯದಲ್ಲಿಒಟ್ಟು 14.61 ಲಕ್ಷ ಹೆಕ್ಟೇರ್ ಭತ್ತದ ಬಿತ್ತನೆ ಗುರಿ ಹೊಂದಲಾಗಿದ್ದು, ಮಳೆ ಕೊರತೆಯಿಂದ ಹಲವು ಜಿಲ್ಲೆಗಳಲ್ಲಿ ಬಿತ್ತನೆ ಪ್ರಮಾಣ ತೀವ್ರವಾಗಿ ಕುಸಿದಿದೆ. ದಾವಣಗೆರೆ, ತುಮಕೂರು, ಶಿವಮೊಗ್ಗ, ಶಿರಗುಪ್ಪ, ಬಾಗಲಕೋಟೆ, ಬಳ್ಳಾರಿ, ಬೀದರ್, ಚಿಕ್ಕಮಗಳೂರು, ಚಿತ್ರದುರ್ಗ, ಕೊಡಗು, ಕೊಪ್ಪಳ, ಮಂಡ್ಯ ಸೇರಿದಂತೆ ಹಲವು ಭಾಗಗಳಲ್ಲೂಭತ್ತದ ಬಿತ್ತನೆ ಮೇಲೆ ಮಳೆ ಕೊರತೆಯ ಪರಿಣಾಮ ಬೀರಿದೆ. ರಾಜ್ಯದ ಭತ್ತದ ಬೆಳೆಯ ಪ್ರದೇಶದಲ್ಲಿ ಶೇ.10ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಬಿತ್ತನೆಯಾಗಿರುವುದು ಮುಂದಿನ ದಿನಗಳಲ್ಲಿ ಅಕ್ಕಿಯ ಪೂರೈಕೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯನ್ನು ಹೆಚ್ಚಿಸಿದೆ. ಸಕಲೇಶಪುರ, ಬೇಲೂರು ಹಾಗೂ ಆಲೂರು ತಾಲ್ಲೂಕುಗಳಲ್ಲಿ ಮಳೆಯ ಪರಿಸ್ಥಿತಿ ತುಸು ಉತ್ತಮವಾಗಿದ್ದರೂ, ಕಾಡಾನೆ ಹಾವಳಿಯಿಂದಾಗಿ ರೈತರು ಭತ್ತ ಬೆಳೆಯಲು ಹಿಂದೇಟು ಹಾಕುತ್ತಿದ್ದಾರೆ. ಕಾಡಾನೆಗಳು ಭತ್ತದ ಪೈರು ತಿಂದು ಹಾಕುವುದಲ್ಲದೆ, ಗದ್ದೆಗಳಲ್ಲಿಓಡಾಡಿ ಬೆಳೆ ನಾಶಪಡಿಸುತ್ತಿವೆ. ಇದರಿಂದ ಕೆಲ ರೈತರು ಭತ್ತದ ಕೃಷಿಯ ಸಹವಾಸವೇ ಬೇಡ ಎಂಬ ನಿರ್ಧಾರಕ್ಕೆ ಬಂದಿದ್ದಾರೆ. ಮಳೆ ಕೊರತೆಯ ಜತೆಗೆ ಕಾಡಾನೆ ಹಾವಳಿಯೂ ಭತ್ತದ ಉತ್ಪಾದನೆ ಮೇಲೆ ಪರಿಣಾಮ ಬೀರುವ ಮತ್ತೊಂದು ಪ್ರಮುಖ ಕಾರಣವಾಗಿದೆ.



ಉದಯವಾಹಿನಿ ಚಿತ್ರ

> ಹಾಸನ ನಗರವೊಂದರಲ್ಲೇ ದಿನಕ್ಕೆ ಸುಮಾರು 50 ಟನ್ ಅಕ್ಕಿಗೆ ಬೇಡಿಕೆ ಇದೆ. ಜಿಲ್ಲಾದ್ಯಂತ ಪ್ರತಿದಿನ 10ರಿಂದ 20 ಲೋಡ್ ಅಕ್ಕಿಗೆ ಬೇಡಿಕೆಯಿದ್ದರೂ, ಬೇಡಿಕೆಗೆ ಅನುಗುಣವಾಗಿ ಪೂರೈಕೆಯಾಗುತ್ತಿಲ್ಲ. ಹೀಗಾಗಿ ಮಾರುಕಟ್ಟೆಯಲ್ಲಿಅಕ್ಕಿಯ ಬೆಲೆ ಏರಿಕೆಯಾಗುತ್ತಿದೆ ಎಂದು ಹೇಳುತ್ತಾರೆ. -ವರ್ತಕರು

> ಮಳೆ ಕೊರತೆಯಿಂದ ಜಿಲ್ಲೆಯಲ್ಲಿ ಭತ್ತದ ಬಿತ್ತನೆ ಶೇ.11ರಷ್ಟು ಮಾತ್ರ ಆಗಿದೆ. ಮಳೆ ಕೊರತೆ ಮುಂದುವರಿದರೆ ಮುಂದಿನ ದಿನಗಳಲ್ಲಿ ಭತ್ತದ ಬಿತ್ತನೆ ಪ್ರಮಾಣ ಗಣನೀಯವಾಗಿ ಹೆಚ್ಚಾಗುವ ಸಾಧ್ಯತೆ ಕಡಿಮೆ ಎಂದಿದ್ದಾರೆ.
> -ಡಾ.ರಮೇಶ್‌ಕುಮಾರ್

> ಮುಂದಿನ ಎರಡು-ಮೂರು ತಿಂಗಳಲ್ಲಿ, ಅಂದರೆ ದೀಪಾವಳಿ ವೇಳೆಗೆ ಹೊಸ ಭತ್ತ ಮಾರುಕಟ್ಟೆಗೆ ಬರಬೇಕಿದೆ. ಆದರೆ ಸದ್ಯ ಬಿತ್ತನೆ ಪ್ರಮಾಣವೇ ಕಡಿಮೆಯಾಗಿರುವುದರಿಂದ ಹೊಸ ಭತ್ತದ ಪೂರೈಕೆ ಹೇಗೆ ಸಾಧ್ಯ ಎಂಬ ಪ್ರಶ್ನೆ ಎದುರಾಗಿದೆ. ಈ ಹಿನ್ನೆಲೆಯಲ್ಲಿ ಜಲಾಶಯಗಳಿಂದ ನಾಲೆಗಳಿಗೆ ನೀರು ಹರಿಸುವಂತೆ ರೈತರು ಒತ್ತಾಯಿಸುತ್ತಿದ್ದಾರೆ.

ಉದಯ ವಾಹಿನಿ
ಪ್ರಾದೇಶಿಕ
ಶನಿವಾರ
15 ಆಗಸ್ಟ್ 2026
05

# ಮಿನಿ ನ್ಯೂಸ್

## 'ಹರ್ ಘರ್ ತಿರಂಗಾ' ಅಭಿಯಾನದ ಅಂಗವಾಗಿ

• **ಉದಯವಾಹಿನಿ, ಬೀದರ್:**

ಸ್ವಾತಂತ್ರ್ಯ ದಿನಾಚರಣೆ ಹಾಗೂ 'ಹರ್ ಘರ್ ತಿರಂಗಾ' ಅಭಿಯಾನದ ಅಂಗವಾಗಿ ಬೀದರ್ ಜಿಲ್ಲಾಡಳಿತದ ವತಿಯಿಂದ ನಗರದ ಐತಿಹಾಸಿಕ ಬೀದರ್ ಕೋಟೆ ಆವರಣದಲ್ಲಿ ಶುಕ್ರವಾರ ಬೈಕ್ ಬೃಹತ್ ರ್ಯಾಲಿ ಹಮ್ಮಿಕೊಳ್ಳಲಾಯಿತು. ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬೀದರ್ ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಬೀದರ್ ಜಿಲ್ಲಾ ಘಟಕಗಳ ಸಂಯುಕ್ತ ಆಶ್ರಯದಲ್ಲಿ ಈ ದೇಶಭಕ್ತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಅಚರು, ನಾಡಿನ ಜನತೆಗೆ ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯ ಕೋರಿದರು. ''ಹರ್ ಘರ್ ತಿರಂಗಾ ಕಾರ್ಯಕ್ರಮದ ಅಂಗವಾಗಿ ಇಂದು ಹಮ್ಮಿಕೊಂಡಿರುವ ಈ ಬೈಕ್ ರ್ಯಾಲಿಗೆ ಬೀದರ್ನ ಸ್ಥಳೀಯರು ಹಾಗೂ ಯುವಜನತೆ ಅತ್ಯುತ್ಸಾಹದಿಂದ ಬೆಂಬಲ ನೀಡಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಶೇಷವಾಗಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದ್ದಾರೆ. ನಾಳೆ ನಡೆಯುವ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಕಾರ್ಯಕ್ರಮದಲ್ಲೂ ಬೀದರ್ನ ಸಮಸ್ತ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು,'' ಎಂದು ಕರೆ ನೀಡಿದರು.

## ಜಿಲ್ಲಾ ಉಸ್ತುವಾರಿ ಸ್ಥಾನದಿಂದ ಹಿಂದಕ್ಕೆ ಸರಿದ ಸಚಿವ ಜಮೀರ್ ಅಹ್ಮದ್

• **ಉದಯವಾಹಿನಿ, ಹೊಸಪೇಟೆ.**



ಉದಯವಾಹಿನಿ ಚಿತ್ರ

ವಸತಿ ಸಚಿವರು ಹಾಗೂ ವಿಜಯನಗರ ಜಿಲ್ಲಾ ಬರ ಅಧ್ಯಯನ ಉಸ್ತುವಾರಿ ಆಗಿ ನೇಮಗೊಂಡಿದ್ದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು ಜಿಲ್ಲಾ ಉಸ್ತುವಾರಿ ಸ್ಥಾನದಿಂದ ಹಿಂದಕ್ಕೆ ಸರಿದಿದ್ದಾರೆ. ಈ ಕುರಿತು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿರುವ ಸಚಿವ ಜಮೀರ್ ಅಹಮದ್ ಖಾನ್, ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಬಿಬಿಎಂಪಿ ಸೇರಿದಂತೆ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಾಗೂ ವಿಧಾನಸಭೆ ಉಪಚುನಾವಣೆ ಮತ್ತು ಪಕ್ಷ ಸಂಘಟನೆ ದೃಷ್ಟಿಯಿಂದ ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿಯನ್ನು ನಿಭಾಯಿಸಲು ಸಮಯದ ಅಭಾವ ಉಂಟಾಗುವ ಕಾರಣದಿಂದ ನನಗೆ ರಾಜ್ಯದ ಯಾವುದೇ ಜಿಲ್ಲೆಯ ಜಿಲ್ಲಾ ಉಸ್ತುವಾರಿ ಸಚಿವರ ಜವಾಬ್ದಾರಿ ನೀಡದಿರುವಂತೆ ಕೋರಿದ್ದಾರೆ.

ಇದರೆ ಜೊತೆಗೆ 80ನೇ ಸ್ವಾತಂತ್ರ್ಯ ದಿನಾಚರಣೆ ಹಿನ್ನಲೆಯಲ್ಲಿ ವಿಜಯನಗರ ಜಿಲ್ಲೆಯ ಧ್ವಜಾರೋಹಣ ಹೊಣೆಗಾರಿಕೆಯನ್ನು ನೀಡಿದ್ದು. ನಾನು ಹಾಜರಾಗಲು ಸಾಧ್ಯವಾಗದ ಕಾರಣ ವಿನಾಯಿತಿ ನೀಡುವಂತೆ ಮುಖ್ಯಮಂತ್ರಿಗಳಿಗೆ ಬರೆದ ಪತ್ರದಲ್ಲಿ ಕೋರಿದ್ದಾರೆ.

ಅಲ್ಲದೆ ವಿಜಯನಗರ ಜಿಲ್ಲೆಯ ಬರ ಪರಿಸ್ಥಿತಿಯನ್ನು ಅಧ್ಯಯನ ಮಾಡಿ ವರದಿ ಸಲ್ಲಿಸುವ ಹೊಣೆಗಾರಿಕೆಯನ್ನು ನೀಡಲಾಗಿತ್ತು. ಈಗಾಗಲೇ ಬರ ಪರಿಸ್ಥೀತಿ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿ ಸಲ್ಲಿಸಿರುವುದಾಗಿ ಪತ್ರದಲ್ಲಿ ಸಚಿವ ಜಮೀರ್ ಅಹಮದ್ ಖಾನ್ ತಿಳಿಸಿದ್ದಾರೆ.

## ಘೋಷಿತ ಸ್ಲಂ ಗಳ ಸರ್ವೇ ಕಾರ್ಯ ಆರಂಭ

• **ಉದಯವಾಹಿನಿ, ಹೊಸಪೇಟೆ.**

ನಗರದಲ್ಲಿ ಘೋಷಿತ ಸ್ಲಂ ಗಳ ಗಡಿ ಗುರುತಿಸುವ ಸರ್ವೆ ಕಾರ್ಯಕ್ಕೆ ಕೊಂಡನಾಯಕನಹಳ್ಳಿಯಲ್ಲಿ ಚಾಲನೆ ನೀಡಲಾಯಿತು.

ಸರ್ವೆ ನಂಬರ್ 7 ಕೊಂಡ ನಾಯಕನಹಳ್ಳಿಯಲ್ಲಿ ತಾಲ್ಲೂಕು ಸರ್ವೆಯರ್ ಅಜ್ಜಪ್ಪ ಅವರ ನೇತೃತ್ವದ ತಂಡವು ಸರ್ವೆ ಕಾರ್ಯವನ್ನು ಕೈಗೊಂಡಿದೆ. ಸ್ಲಂ ಸಮಿತಿಯ ನಿರಂತರ ಭೇಟಿ ಹಾಗೂ ಫಾಲೋ ಅಪ್ ಕಾರಣದಿಂದ ಮೂರು ತಿಂಗಳ ನಂತರ ಸರ್ವೆ ಕಾರ್ಯಕ್ಕೆ ಚಾಲನೆ ದೊರೆತಿದೆ. ಸರ್ವೆ ನಡೆಸಿ ಬೌಂಡರಿ ಗುರುತಿಸದ ಹೊರತು ಹಕ್ಕುಪತ್ರ ವಿತರಣೆಗೆ ತಡೆ ನೀಡಲಾಗಿತ್ತು. ಈ ಕಾರಣದಿಂದ ಸಂಘವು ನಿರಂತರವಾಗಿ ಸ್ಲಂ ಬೋರ್ಡ್ ಹಾಗೂ ತಹಸಿಲ್ದಾರ್ ಮತ್ತು ಎ.ಡಿ.ಎಲ್.ಆರ್ ಇಲಾಖೆಗೆ ನಿರಂತರವಾಗಿ ಸಂಪರ್ಕಿಸಿ ಸರ್ವೆ ಕಾರ್ಯವನ್ನು ಆರಂಭಿಸಲು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಲಾಗಿತ್ತು ಎಂದು ಸ್ಲಂ ಸಮಿತಿ ಪ್ರಧಾನ ಕಾರ್ಯದರ್ಶಿ ಎನ್.ವೆಂಕಟೇಶ್ ತಿಳಿಸಿದ್ದಾರೆ. ಸರ್ವೆ ಕಾರ್ಯದ ಸಂದರ್ಭದಲ್ಲಿ ಸರ್ವೆ ಇಲಾಖೆಯ ಅಧಿಕಾರಿಗಳು, ಸ್ಲಂ ಬೋರ್ಡ್ ಸಿಬ್ಬಂದಿ, ಸ್ಲಂ ಸಮಿತಿಯ ಅಧ್ಯಕ್ಷರಾದ ಹೆಚ್.ಶೇಷು, ಉಪಾಧ್ಯಕ್ಷ ವಿ.ಪರಸಪ್ಪ, ಪ್ರಧಾನ ಕಾರ್ಯದರ್ಶಿ ಎನ್.ವೆಂಕಟೇಶ್ ಹಾಗೂ ಯುವ ಘಟಕದ ಭರತ್ ಕುಮಾರ್ ಸೇರಿದಂತೆ ಇತರರು ಇದ್ದರು.

## ಸ್ವಾತಂತ್ರ್ಯ ಮಹೋತ್ಸವಕ್ಕೆ ಬಿಎಸ್ ಎನ್ ಎಲ್ ಗ್ರಾಹಕರಿಗೆ ಭರ್ಜರಿ ಅಫರ್ 1 ರೂಗೆ ಸಿಮ್

• **ಉದಯವಾಹಿನಿ, ಬಳ್ಳಾರಿ, :**

ಬಿಎಸ್ ಎನ್ ಎಲ್ ಸಂಸ್ಥೆ 80 ನೇ ಸ್ವಾತಂತ್ರ ದಿನಾಚರಣೆ ಅಂಗವಾಗಿ ಗ್ರಾಹಕರಿಗೆ ವಿವಿಧ ಆಪರ್ ಗಳನ್ನು ಒಂದು ತಿಂಗಳ ಕಾಲ ನೀಡುತ್ತಿದೆಂದು ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ಮುಖೇಶ್ ಲಾಲ್ ಹೇಳಿದ್ದಾರೆ.

ಅವರು ಇಂದು ನಗರದ ಬಿಎಸ್ ಎನ್ ಎಲ್ ಸಂಸ್ಥೆ ಕಚೇರಿಯಲ್ಲಿ ಸುದ್ದಿಗೋಷ್ಟಿ ನಡೆಸಿ. ಮೇಕ್ ಇನ್ ಇಂಡಿಯಾಗೆ ಭಾರತ ಸರ್ಕಾರ ಒತ್ತು ನೀಡುತ್ತಿದೆ. ಗ್ರಾಹಕರಿಗೆ ಪ್ರೀಡಂ ಪ್ಲಾನ್ ನಡಿ. 24 ದಿನಗಳ ವ್ಯಾಲಿಡಿಟಿಗೆ ಕೇವಲ ಒಂದು ರೂ ನಲ್ಲಿ ಪ್ರೀ ಸಿಮ್ ನೀಡುತ್ತದೆ. ಜೊತೆಗೆ ಪ್ರತಿದಿನ ಒನ್ ಜಿಬಿ ಡೇಟಾ ನಂತರ ರೀ ಚಾರ್ಜ್ ಮಾಡಬೇಕಿದೆ.ಎರಡನೇ ಆಫರ್ ನಲ್ಲಿ 2399 ನಲ್ಲಿ 412 ದಿನಗಳ ವ್ಯಾಲಿಡಿಟಿ ನೀಡುತ್ತಿದೆ.

ಭಾರತ್ ಡಿಜಿಟಲ್ ಡಿವೈಸ್ ಯೋಜಬೆಯಡಿ ಹೈ ಸ್ಪೀಡ್ ನೆಟ್ ವರ್ಕ್ ನ್ನು ಗ್ರಾಮೀಣ ಜನರಿಗೆ ಕೇವಲ ಮಾಸಿಕ 259 ರೂ ಗೆ 700 ಜಿಬಿ ಡೇಟಾವನ್ನು 25 ಎಂಬಿಪಿಎಸ್ ಸ್ಪೀಡ್ ನಲ್ಲಿ ನೀಡುತ್ತಿದೆ.

## ಮೀಸಲಾತಿ ಅಗತ್ಯವಿಲ್ಲವೆಂದ ನಿವೃತ್ತ ನ್ಯಾ. ಎನ್.ಸಂತೋಷ ಹೆಗ್ಡೆ ಹೇಳಿಕೆ ಖಂಡನೀಯ

• **ಉದಯವಾಹಿನಿ, ಕಲಬುರಗಿ ;**

ಮೀಸಲಾತಿ ಸಂವಿಧಾನಕ್ಕೆ ವಿರುದ್ಧ ಹಾಗೂ ರಾಜಕೀಯದಲ್ಲಿ ಮಹಿಳಾ ಮೀಸಲಾತಿಯ ಅಗತ್ಯವಿಲ್ಲ'' ಎಂಬ ಹೇಳಿಕೆ ನೀಡಿರುವ ನಿವೃತ್ತ ನ್ಯಾ. ಎನ್. ಸಂತೋಷ ಹೆಗಡೆ ಸಂವಿಧಾನ ವಿರೋಧಿ ಮತ್ತು ಮಹಿಳಾ ವಿರೋಧಿಯಾಗಿದೆ ಎಂದು ಅಖಿಲ ಕರ್ನಾಟಕ ದಲಿತ ಸೇನೆಯ ರಾಜ್ಯಾಧ್ಯಕ್ಷ ದತ್ತಾತ್ತೇಯ ಕುಡಕಿ ತಿವ್ರವಾಗಿ ಖಂಡಿಸಿದರು.ಪತ್ರಿಕಾ ಹೇಳಿಕೆ ನೀಡಿರುವ ಅವರು, ನ್ಯಾಯಾಧೀಶರಾಗಿ, ಲೋಕಾಯುಕ್ತರಾಗಿ ಸಂವಿಧಾನದ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿ ಸಂವಿಧಾನದ ವಿರೋಧಿಯಾಗಿ ಕೆಲಸ ಮಾಡುತ್ತಿರುವ ಹೆಗಡೆ ಹೇಳಿಕೆ ಸಂವಿಧಾನ ಮೂಲ ಆಶಯಗಳಿಗೇ ವಿರುದ್ಧವಾಗಿದೆ. ಭಾರತದ ನ್ಯಾಯಾಂಗ ವ್ಯವಸ್ಥೆ, ಮತ್ತು ಮೀಸಲಾತಿ ಸಂವಿಧಾನಕ್ಕೆ ವಿರುದ್ಧ ಎಂದು ಹೇಳುತ್ತಿರುವುದು ಅವರ ಅಜ್ಞಾನ ಎತ್ತಿ ತೋರಿಸುತ್ತಿದೆ ಎಂದು ಕುಡಕಿ ಆಕ್ರೋಶ ವ್ಯಕ್ತಪಡಿಸಿದರು.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನೀವು ನಿಮ್ಮ ಇಂದಿನ ದಿನವನ್ನು ಉತ್ತಮಗೊಳಿಸಲು ಕಳೆದ ದಿನಗಳಲ್ಲಿ ಹಣವನ್ನು ಹೂಡಿಕೆ ಮಾಡಿದ್ದರೆ, ಅದರ ಪ್ರಯೋಜನವನ್ನು ಇಂದು ನೀವು ಪಡೆಯಬಹುದು. ನಿಮ್ಮ ಪ್ರೀತಿಪಾತ್ರರ ಜೊತೆಗಿನ ನಿಮ್ಮ ಸಂಬಂಧದಲ್ಲಿ ಹುಳಿ ಹಿಂಡಬಹುದಾದ ಸಮಸ್ಯೆಗಳನ್ನು ಕೆದಕುವುದನ್ನು ತಪ್ಪಿಸುವುದು ಅತ್ಯುತ್ತಮ.

**ವೃಷಭ** ದ್ವೇಷ ಪ್ರೀತಿಗಿಂತ ಹೆಚ್ಚು ಶಕ್ತಿಶಾಲಿಯಾಗಿದ್ದು ನಿಮ್ಮ ದೇಹದ ಮೇಲೆ ಪ್ರಾಣಾಂತಿಕ ಪರಿಣಾಮ ಬೀರುವದರಿಂದ ನಿಮ್ಮ ದ್ವೇಷವನ್ನು ಸಾಯಿಸಲು ಒಂದು ಸಮರಸದ ಸ್ವಭಾವವನ್ನು ರೂಪಿಸಿಕೊಳ್ಳಿ. ದುಷ್ಟತೆಯು ಒಳಿತಿಗಿಂತ ಬೇಗ ವಿಜಯ ಸಾಧಿಸುತ್ತದೆಂದು ನೆನಪಿಡಿ.

**ಮಿಥುನ** ನಿಮ್ಮ ಮನಸ್ಸು ಒಳ್ಳೆಯ ವಿಷಯಗಳನ್ನು ಗ್ರಹಿಸುತ್ತದೆ. ಹಣಕಾಸಿನಲ್ಲಿ ಸುಧಾರಣೆ ನಿಶ್ಚಿತ. ಸ್ನೇಹಿತರು ಸಂತೋಷದ ಸಂಜೆಗಾಗಿ ನಿಮ್ಮನ್ನು ಅವರ ಸ್ಥಳಕ್ಕೆ ಆಮಂತ್ರಿಸುತ್ತಾರೆ. ನಿಮ್ಮ ಪ್ರಣಯದ ಸಂಬಂಧಕ್ಕೆ ಇಂದು ಹಾನಿಯಾಗುತ್ತದೆ. ಇಂದು ಇಡೀ ದಿನ ನೀವು ಖಾಲಿಯಾಗಿರಬಹುದು .

**ಕರ್ಕಾಟಕ** ಗಾಳಿಯಲ್ಲಿ ಮನೆ ಕಟ್ಟುವಲ್ಲಿ ನಿಮ್ಮ ಸಮಯ ವ್ಯರ್ಥ ಮಾಡಬೇಡಿ. ಬದಲಿಗೆ ಏನಾದರೂ ಅರ್ಥಪೂರ್ಣವಾದದ್ದನ್ನು ಮಾಡಲು ನಿಮ್ಮ ಶಕ್ತಿ ವ್ಯಯಿಸಿ. ಕುಟುಂಬದ ಯಾವುದೇ ಸದಸ್ಯರ ಕಾಯಿಲೆ ಬೀಳುವ ಕಾರಣದಿಂದಾಗಿ ನೀವು ಆರ್ಥಿಕ ತೊಂದರೆಗೊಳಗಾಗಬಹುದು.

**ಸಿಂಹ** ಎಲ್ಲರಿಗೂ ಸಹಾಯ ಮಾಡುವ ನಿಮ್ಮನ್ನು ದಣಿಸುತ್ತದೆ. ನಿಧಿಗಳ ಹಠಾತ್ ಒಳಹರಿವು ನಿಮ್ಮ ಪಾವತಿಗಳು ಮತ್ತು ತಕ್ಷಣದ ವೆಚ್ಚಗಳನ್ನು ನೋಡಿಕೊಳ್ಳುತ್ತದೆ. ಕುಟುಂಬದ ಸದಸ್ಯರು ಬಹಳ ಬೇಡಿಕೆಗಳನ್ನಿಡುತ್ತಾರೆ. ನೀವು ಸಂಜೆ ಸ್ನೇಹಿತರೊಂದಿಗೆ ಹೊರಗೆ ಹೋದರೆ ತತ್ಕ್ಷಣದ ಪ್ರಣಯ ನಿಮಗೆ ದೊರಕಬಹುದು.

**ಕನ್ಯಾ** ಇದು ನಿಮ್ಮ ಆರೋಗ್ಯದ ಬಗ್ಗೆ ಚಿಂತಿಸಬೇಕಾಗಿಲ್ಲ. ನಿಮ್ಮ ಸುತ್ತಲಿನ ಜನರು ನಿಮ್ಮ ಸ್ಥೈರ್ಯ ಮತ್ತು ಚೈತನ್ಯಗಳನ್ನು ಹೆಚ್ಚಿಸುತ್ತಾರೆ. ಬಾಕಿಯಿರುವ ವಿಷಯಗಳು ರಹಸ್ಯಮಯವಾಗುತ್ತವೆ ಮತ್ತು ವೆಚ್ಚಗಳು ನಿಮ್ಮ ಮನಸ್ಸನ್ನು ಆವರಿಸಿಕೊಳ್ಳುತ್ತವೆ. ನಿಮ್ಮ ಸಾಮಾಜಿಕ ಜೀವನವನ್ನು ನಿರ್ಲಕ್ಷಿಸಬೇಡಿ.

**ತುಲಾ** ಸರಿಯಾದ ವಿಶ್ರಾಂತಿ ತೆಗೆದುಕೊಳ್ಳಿ. ಆರ್ಥಿಕ ಭಾಗವು ಬಲಗೊಳ್ಳುವ ಪೂರ್ಣ ಸಾಧ್ಯತೆ ಇದೆ.ನೀವು ಯಾವುದೇ ವ್ಯಕ್ತಿಗೆ ಸಾಲ ನೀಡಿದ್ದರೆ, ಇಂದು ನೀವು ಆ ಹಣವನ್ನು ಮರಳಿ ಪಡೆಯುವ ನಿರೀಕ್ಷೆಯಿದೆ ನಿಮ್ಮ ಜ್ಞಾನದಾಹ ನಿಮಗೆ ಹೊಸ ಸ್ನೇಹಿತರನ್ನು ಪಡೆಯಲು ಸಹಾಯ ಮಾಡುತ್ತದೆ.

**ವೃಶ್ಚಿಕ** ದ್ವೇಷದ ಭಾವನೆ ದುಬಾರಿಯೆನಿಸಬಹುದು. ಇದು ನಿಮ್ಮ ಸಹನೆಯನ್ನು ಕುಂಠಿತಗೊಳಿಸುವುದಷ್ಟೇ ಅಲ್ಲದೇ ನಿಮ್ಮ ವಿವೇಚನಾ ಶಕ್ತಿಯನ್ನೂ ಕುಂಠಿತ ಗೊಳಿಸುತ್ತದೆ ಮತ್ತು ಸಂಬಂಧದಲ್ಲಿ ಶಾಶ್ವತ ಬಿರುಕನ್ನು ಸೃಷ್ಟಿಸುತ್ತದೆ. ಇಂದು ಮನೆಯಿಂದ ಹೊರಗೆ ಹಿರಿಯರ ಆಶೀರ್ವಾದವನ್ನು ತೆಗೆದುಕೊಂಡು ಹೋಗಿ.

**ಧನಸ್ಸು** ಮಕ್ಕಳ ಸಂಗದಲ್ಲಿ ಶಾಂತಿ ಪಡೆಯಿರಿ. ನಿಮ್ಮ ಸ್ವಂತದ್ದಷ್ಟೇ ಅಲ್ಲದೇ ಬೇರಯವರ ಮಕ್ಕಳ ಚಿಕಿತ್ಸಕ ಶಕ್ತಿಗಳೂ ನಿಮಗೆ ಸಾಂತ್ವನ ನೀಡಬಹುದು ಮತ್ತು ನಿಮ್ಮ ಆತಂಕವನ್ನು ಶಮನಗೊಳಿಸಬಹುದು. ರಿಯಲ್ ಎಸ್ಟೇಟ್ ನಲ್ಲಿ ಹೂಡಿಕೆ ಲಾಭದಾಯಕವಾಗಬಹುದು. ಪ್ರೀತಿಯಲ್ಲಿನ ಏಳುಬೀಳುಗಳನ್ನು ಎದುರಿಸುವ ಧೈರ್ಯ ಹೊಂದಿರಿ.

**ಮಕರ** ಒಂದು ಲಾಭಕರ ದಿನ ಮತ್ತು ನೀವು ಧೀರ್ಘಕಾಲದ ಅನಾರೋಗ್ಯಕ್ಕೆ ಪರಿಹಾರ ಹುಡುಕಲು ಸಾಧ್ಯವಾಗಬಹುದು. ನೀವು ನಿಮ್ಮ ಕೋಪವನ್ನು ನಿಯಂತ್ರಿಸಿ ಮತ್ತು ಕಚೇರಿಯಲ್ಲಿ ಎಲ್ಲರೊಂದಿಗೆ ಉತ್ತಮವಾಗಿ ವರ್ತಿಸಿ., ಆಗೇ ನೀವು ಮಾಡದಿದ್ದರೆ ನಿಮ್ಮ ಕೆಲಸ ಹೋಗಬಹುದು.

**ಕುಂಭ** ನಿಮ್ಮಲ್ಲಿ ಕೆಲವರು ಬಲವಂತವಾಗಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬೇಕಾಗಬಹುದು ಹಾಗೂ ಇದು ನಿಮ್ಮನ್ನು ಉದ್ವೇಗಭರಿತರನ್ನಾಗಿಯೂ ಹಾಗೂ ಗಾಬರಿಯಿರುವವರನ್ನಾಗಿಯೂ ಮಾಡಬಹುದು. ಇಂದು ನೀವು ನಿಮ್ಮ ಮಕ್ಕಳ ಕಾರಣದಿಂದ ಆರ್ಥಿಕ ಲಬಹವನ್ನು ಪಡೆಯುವ ಸಾಧ್ಯತೆ ಕಂಡುಬರುತ್ತಿದೆ.

**ಮೀನ** ದೈಹಿಕ ಲಾಭಕ್ಕಾಗಿ ವಿಶೇಷವಾಗಿ ಮಾನಸಿಕ ದೃಢತೆಗಾಗಿ ಧ್ಯಾನ ಮತ್ತು ಯೋಗ ಪ್ರಾರಂಭಿಸಿ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬೇಕು. ಸ್ನೇಹಿತರ ಸಂಗ ಆರಾಮ ಒದಗಿಸುತ್ತದೆ. ನೀವು ವಾಸ್ತವಾಂಶಗಳನ್ನು ಎದುರಿಸುತ್ತಿದ್ದ ಹಾಗೆ ಪ್ರೀತಿಪಾತ್ರರನ್ನು ಮರೆಬೇಕಾಗುತ್ತದೆ.

## ಸಮಯ ಪ್ರಜ್ಞೆಯಿಂದ ಪಾರು ಮಾಡಿದ 5ನೇ ತರಗತಿ ಬಾಲಕ

• **ಉದಯವಾಹಿನಿ, ಬಂಟ್ವಾಳ**



ಉದಯವಾಹಿನಿ ಚಿತ್ರ

ಶಾಲೆಯ ಬಿಸಿಯೂಟ (ಅಕ್ಷರ ದಾಸೋಹ) ಸಿಬ್ಬಂದಿಯೊಬ್ಬರು ಕರ್ತವ್ಯ ನಿರತರಾಗಿದ್ದಾಗ ಸಂಭವಿಸಬಹುದಾಗಿದ್ದ ದೊಡ್ಡ ಅವಘಡವನ್ನು 5ನೇ ತರಗತಿಯ ವಿದ್ಯಾರ್ಥಿಯೊಬ್ಬ ತನ್ನ ಸಮಯಪ್ರಜ್ಞೆಯಿಂದ ತಪ್ಪಿಸಿ, ಸಿಬ್ಬಂದಿಯನ್ನು ಪಾರು ಮಾಡಿದ ಶ್ಲಾಘನೀಯ ಘಟನೆ ಬಂಟ್ವಾಳ ತಾಲ್ಲೂಕಿನ ನರಿಕೊಂಬು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದಿದೆ.ನರಿಕೊಂಬು ಸರಕಾರಿ ಶಾಲೆಯ ಅಕ್ಷರ ದಾಸೋಹ ಸಿಬ್ಬಂದಿ ಕೆಲಸ ಮಾಡುತ್ತಿದ್ದ ವೇಳೆ, ಆಕಸ್ಮಿಕವಾಗಿ ಅವರ ಕೈಬೆರಳು ವಿದ್ಯುಚ್ಚಾಲಿತ ತುರಿಮಣೆಗೆ ಸಿಲುಕಿಕೊಂಡಿದೆ. ನೋವಿನಿಂದ ಸಿಬ್ಬಂದಿ ತಕ್ಷಣ ಕಿರುಚಿಕೊಂಡಿದ್ದಾರೆ. ಈ ವೇಳೆ ಶಾಲೆಯ ಅಂಗಳದಲ್ಲಿ ಆಟವಾಡುತ್ತಿದ್ದ ಐದನೇ ತರಗತಿ ಬಾಲಕ ಮನ್ವಿತ್ ತಕ್ಷಣವೇ ಸ್ಥಳಕ್ಕೆ ಧಾವಿಸಿದ್ದಾನೆ. ವಿಚಲಿತನಾಗದೆ ಧೈರ್ಯ ಹಾಗೂ ಸಮಯಪ್ರಜ್ಞೆ ಮೆರೆದ ಮನ್ವಿತ್, ತಡಮಾಡದೆ ತುರಿಮಣೆಯ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿ ಭಾರೀ ಅನಾಹುತವನ್ನು ತಪ್ಪಿಸಿದ್ದಾನೆ.

ಸ್ವಯಂ ನಿರ್ಧಾರದಿಂದ ತಕ್ಷಣ ಸ್ಪಂದಿಸಿ ಸಿಬ್ಬಂದಿಯ ಜೀವ ರಕ್ಷಿಸಿದ ಬಾಲಕ ಮನ್ವಿತ್‌ನ ಧೈರ್ಯ ಹಾಗೂ ಸಮಯಪ್ರಜ್ಞೆಗೆ ಶಾಲಾ ಶಿಕ್ಷಕ ವೃಂದ, ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ರವಿ ಅಂಚನ್ ಹಾಗೂ ಸದಸ್ಯರು ಅಭಿನಂದನೆ ಸಲ್ಲಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಶಾಲೆಗೆ ಭೇಟಿ ನೀಡಿದ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ನೋಣಯ್ಯ ನಾಯ್ಕ್ ಹಾಗೂ ಸಿಆರ್‌ಪಿ ಜ್ಯೋತಿ ಅವರು ಬಾಲಕನ ಸಾಹಸ ಮತ್ತು ಸಮಯಪ್ರಜ್ಞೆಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಯುವ ಪೀಳಿಗೆ ದೇಶ ರಕ್ಷಣೆಗೆ ಮುಂದಡಿ: ಕಾಮತ್

• **ಉದಯವಾಹಿನಿ, ಮಂಗಳೂರು:**

ಹಿರಿಯರ ತ್ಯಾಗ ಬಲಿದಾನದಿಂದ ದೇಶ ಸ್ವಾತಂತ್ರ್ಯಗೊಂಡು ನಾವಿಂದು ನೆಮ್ಮದಿಯ ಜೀವನ ನಡೆಸುತ್ತಿದ್ದೇವೆ. ಅವರ ತ್ಯಾಗ ನಾವು ಎಂದೂ ಮರೆಯಬಾರದು ಎಂದು ಮಂಗಳೂರು ದಕ್ಷಿಣ ಶಾಸಕ ವೇದವ್ಯಾಸ ಕಾಮತ್ ಹೇಳಿದರು.

ದೇಶ ಭಕ್ತ ಸಂಘಟನೆ ಮಂಗಳೂರು ವತಿಯಿಂದ ಮಂಗಳೂರಿನ ಕುದ್ಮುಲ್ ರಂಗರಾವ್ ಪುರಭವನದ ಮುಂಭಾಗದ ರಾಜಾಜಿ ಪಾರ್ಕ್ ಬಳಿಯಿಂದ ಪಿವಿಎಸ್ ಬಳಿಯ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ವೃತ್ತದವರೆಗೆ ಆಯೋಜಿಸಿದ 'ತಿರಂಗ ಯಾತ್ರೆಗೆ ಚಾಲನೆ ನೀಡಿ ಮಾತನಾಡಿದರು.

ದ.ಕ. ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಮಾತನಾಡಿ, ಈ ದೇಶ 80ನೇ ಸ್ವಾತಂತ್ರ್ಯೋತ್ಸವದ ಸಂಭ್ರಮದಲ್ಲಿದೆ. ನಮ್ಮ ಜವಾಬ್ದಾರಿಯೂ ಹೆಚ್ಚು ಇದೆ ಎಂದರು. ದೇಶದ ಮೂಲೆ ಮೂಲೆಗಳಲ್ಲಿ ತಿರಂಗ ರಾರಾಜಿಸಬೇಕು. ಪ್ರತೀ ವಿದ್ಯಾರ್ಥಿಯ ಕೈಯಲ್ಲಿ ತಿರಂಗ ಇರಬೇಕು. ಪ್ರತೀ ಹೃದಯ, ಮನೆ, ಹಳ್ಳಿಗಳಲ್ಲಿ ರಾಷ್ಟ್ರ ಭಕ್ತಿ ಜಾಗೃತವಾಗಬೇಕು ಎಂದರು. ಉಪನ್ಯಾಸ ನೀಡಿದ ಬಿಜೆಪಿ ಮುಖಂಡ, ವಾಗ್ಮಿ ವಿಕಾಸ್ ಪುತ್ತೂರು ಮಾತನಾಡಿ, ಇಂದು ಭಾರತ ವಿಶ್ವದಲ್ಲೇ ಮಾದರಿ ಪ್ರಜಾಪ್ರಭುತ್ವವಾಗಿ ಬೆಳೆದು ನಿಂತಿದೆ. ಅಂದಿನ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಯುವ ಸಮೂಹ ಸ್ವಾತಂತ್ರ್ಯಕ್ಕೆ ದೊಡ್ಡ ಅಡಿಪಾಯ ಹಾಕಿತ್ತು ಎಂದರು.

## ಆರೋಪಿಗಳ ಬಂಧನಕ್ಕೆ ಸಚಿವ ಖಂಡ್ರೆ ಶ್ಲಾಘನೆ


• **ಉದಯವಾಹಿನಿ, ಬೀದರ್:**

ನಗರದಲ್ಲಿ ತೀವ್ರ ಆತಂಕ ಮೂಡಿಸಿದ್ದ ಎಟಿಎಂ ಶೂಟೌಟ್ ಪ್ರಕರಣದ ಕುಖ್ಯಾತ ದರೋಡೆಕೋರರನ್ನು ಬಂಧಿಸುವಲ್ಲಿ ಯಶಸ್ವಿಯಾದ ಬೀದರ ಜಿಲ್ಲಾ ಪೊಲೀಸ್ ತಂಡಕ್ಕೆ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಈಶ್ವರ ಬಿ. ಖಂಡ್ರೆ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ಪ್ರಕಟಣೆ ಹೊರಡಿಸಿದ್ದು ಸಾರ್ವಜನಿಕರಲ್ಲಿ ಭೀತಿ ಹುಟ್ಟಿಸಿದ್ದ ಈ ಗಂಭೀರ ಪ್ರಕರಣವನ್ನು ಸವಾಲಾಗಿ ಸ್ವೀಕರಿಸಿ ಆರೋಪಿಗಳನ್ನು ಕಂಬಿ ಹಿಂದೆ ತಳ್ಳಿದ ಬೀದರ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಕಾರ್ಯ ಶ್ಲಾಘನೀಯ. ಈ ಬಂಧನವು ಅಪರಾಧ ಕೃತ್ಯಗಳಲ್ಲಿ ತೊಡಗುವವರಿಗೆ ಮತ್ತು ಕಾನೂನನ್ನು ಕೈಗೆತ್ತಿಕೊಳ್ಳುವವರಿಗೆ ಸೂಕ್ತ ಎಚ್ಚರಿಕೆಯ ಸಂದೇಶ ನೀಡಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

# ಮಹಾತ್ಮರನ್ನು ಸ್ಮರಿಸುವುದೇ ಮುಕ್ತಿಗೆ ದಾರಿ ಡಾ. ಬಸವಕುಮಾರ ಶ್ರೀ

• **ಉದಯವಾಹಿನಿ, ಚಿತ್ರದುರ್ಗ:**



ಉದಯವಾಹಿನಿ ಚಿತ್ರ

ಮಹಾತ್ಮರು ಹಾಗೂ ಪುಣ್ಯಪುರುಷರನ್ನು ಸ್ಮರಿಸುವುದರಿಂದ ಜೀವನದಲ್ಲಿ ಸಾರ್ಥಕತೆ ದೊರೆಯುತ್ತದೆ. ಮಹಾತ್ಮರನ್ನು ನೆನೆಯುವುದು ಮುಕ್ತಿಗೆ ದಾರಿ ಎಂದು ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ ಮತ್ತು ಎಸ್‌ಜೆಎಂ ವಿದ್ಯಾಪೀಠ ಆಡಳಿತ ಮಂಡಳಿಯ ಡಾ. ಬಸವಕುಮಾರ ಸ್ವಾಮೀಜಿ ಹೇಳಿದರು.

ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದ ಮೂಲಕರ್ತೃ ಮುರಿಗೆ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳ ಲೀಲಾವಿಶ್ರಾಂತಿ ಸನ್ನಿಧಾನದಲ್ಲಿ ಶ್ರಾವಣಮಾಸದ ಅಂಗವಾಗಿ ಆಯೋಜಿಸಿದ್ದ ವಚನಾಭಿಷೇಕ ಹಾಗೂ ಮಹಾಸ್ವಾಮಿಗಳ ಭಾವಚಿತ್ರಕ್ಕೆ ಪುಷ್ಪನಮನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಶೂನ್ಯಪೀಠ ಪರಂಪರೆಯ ಚಿತ್ರದುರ್ಗ ಬೃಹನ್ಮಠಕ್ಕೆ ಮುರಿಗೆ ಶಾಂತವೀರ ಮುರುಘರಾಜೇಂದ್ರ ಮಹಾಸ್ವಾಮಿಗಳು ನೆಲೆಸಿದ ನಂತರ ತನ್ನದೇ ಆದ ವಿಶಿಷ್ಟ ಪ್ರಭಾವ ದೊರೆಯಿತು. ಅವರು ಆಧ್ಯಾತ್ಮಿಕ ಕ್ಷೇತ್ರಕ್ಕೆ ಮಾತ್ರ ಸೀಮಿತರಾಗದೆ ಸಾಮಾಜಿಕ ಸಾಹಿತ್ಯ ಕ್ಷೇತ್ರಗಳಲ್ಲೂ ಮಹತ್ವದ ಕೊಡುಗೆ ನೀಡಿದರು. ಅವರ ಸಾಧನೆಗೆ ಅನೇಕ ಸಾಹಿತ್ಯ ಕೃತಿಗಳು ಸಾಕ್ಷಿಯಾಗಿವೆ ಎಂದರು.

ಮಹಾಸ್ವಾಮಿಗಳ ತಪಶ್ಶಕ್ತಿ, ಪ್ರಖರ ಪಾಂಡಿತ್ಯ ಹಾಗೂ ಶಿವಯೋಗದ ಬಲದಿಂದ ಮುಂದಾಗುವ ಸನ್ನಿವೇಶಗಳನ್ನು ಅರಿತು ತಿಳಿಸುವ ಸಾಮರ್ಥ್ಯ ಹೊಂದಿದ್ದರು. ಈ ನಾಡಿನ ರಾಜ ಪರಂಪರೆಯಲ್ಲಿ ಬಂದ ಭರಮಣ್ಣ ನಾಯಕರು ದನಗಾಹಿಯಿಂದ ರಾಜನಾದ ಘಟನೆಯೂ ಗುರುಗಳ ತಪಶ್ಶಕ್ತಿಗೆ ಸಾಕ್ಷಿಯಾಗಿದೆ ಎಂದು ಹೇಳಿದರು.

ಚಿತ್ರದುರ್ಗ ಬೃಹನ್ಮಠದ ಘನತೆಯನ್ನು ಅನೇಕ ಮಹಾತ್ಮರು ಹಾಗೂ ಗುರುಗಳು ತಮ್ಮ ಸಾಧನೆಯ ಮೂಲಕ ಎತ್ತಿಹಿಡಿದಿದ್ದಾರೆ.

ಶ್ರಾವಣಮಾಸದಲ್ಲಿ ಇಂತಹ ಪುಣ್ಯಪುರುಷರ ಸ್ಮರಣೆ ನಿರಂತರವಾಗಿ ನಡೆಯಲಿದ್ದು, ಸಂಜೆ 'ಪುಣ್ಯಪುರುಷರ ಚಿಂತನ ಮಾಲಿಕೆ'ಯಲ್ಲಿ ಜೀವನ ಸಾಧನೆಯ ಕುರಿತು ಉಪನ್ಯಾಸಗಳು ನಡೆಯಲಿವೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಡಾ. ಬಸವಕುಮಾರ ಸ್ವಾಮೀಜಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬಸವ ಮುರುಘೇಂದ್ರ ಶ್ರೀಗಳು, ವಚನಾಭಿಷೇಕ ನಡೆಸಿಕೊಟ್ಟ ಸೇವಾಕರ್ತರಾದ ಗುತ್ತಿನಾಡು ಜಿ.ಎಂ. ಪ್ರಕಾಶ್ ಕುಟುಂಬದವರು, ಜಾಗತಿಕ ಲಿಂಗಾಯತ ಮಹಾಸಭಾದ ಬಸವರಾಜ ಕಟ್ಟಿ, ಜೆ.ಎಸ್. ಮುರುಘೇಶ್, ಶ್ರೀ ಮಠದ ದಾಸೋಹ ಸಿಬ್ಬಂದಿ ಹಾಗೂ ಗುರುಕುಲ ಸಾಧಕರು ಉಪಸ್ಥಿತರಿದ್ದರು.

# ಮಹಿಳಾ, ಮಕ್ಕಳ ಕಲ್ಯಾಣ ಯೋಜನೆಗಳು ಕಾಗದಕ್ಕಷ್ಟೇ ಸೀಮಿತವಾಗದಿರಲಿ!

### ಮುಂದಿನ 15 ದಿನಗಳ ಒಳಗಾಗಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ಮತ್ತು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು

• **ಉದಯವಾಹಿನಿ, ಕಲಬುರಗಿ:**

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಯೋಜನೆಗಳು ಕೇವಲ ಕಾಗದಕ್ಕಷ್ಟೇ ಸೀಮಿತವಾಗದೆ ಅರ್ಹ ಫಲಾನುಭವಿಗಳಿಗೆ ನೇರವಾಗಿ ತಲುಪಬೇಕು. ಜಾಗೃತಿ ಕಾರ್ಯಕ್ರಮಗಳು ಸಭಾಂಗಣಕ್ಕೆ ಸೀಮಿತವಾಗಬಾರದು. ಇನ್ಮುಂದೆ ಆಯೋಜಿಸುವ ಪ್ರತಿಯೊಂದು ಜಾಗೃತಿ ಕಾರ್ಯಕ್ರಮದಲ್ಲೂ ಕನಿಷ್ಠ 100ಕ್ಕೂ ಹೆಚ್ಚು ಜನರು ಕಡ್ಡಾಯವಾಗಿ ಭಾಗವಹಿಸುವಂತೆ ಅಧಿಕಾರಿಗಳು ವೈಯಕ್ತಿಕ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಇಕ್ರಂ ಶರೀಫ್ ಹೇಳಿದರು.

> 1 : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
> 2 : ಕನಿಷ್ಠ 100ಕ್ಕೂ ಹೆಚ್ಚು ಜನರು
> 3 : ಪ್ರತಿ ಮೂರು ತಿಂಗಳಿಗೊಮ್ಮೆ

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಮ್ಮಿಕೊಂಡಿರುವ ವಿವಿಧ ಯೋಜನೆಗಳ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗ್ರಾಮ ಪಂಚಾಯಿತಿ ಶಾಲಾ-ಕಾಲೇಜು ಮಟ್ಟದಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ನಡೆಯುವ ಜಾಗೃತಿ ಕಾರ್ಯಕ್ರಮಗಳಲ್ಲಿ ಕೇವಲ ಕಾಗದದ ವರದಿ ಪ್ರದರ್ಶಿಸುವುದನ್ನು ತಕ್ಷಣವೇ ನಿಲ್ಲಿಸಬೇಕು.



ಉದಯವಾಹಿನಿ ಚಿತ್ರ

ಕ್ಷೇತ್ರ ಮಟ್ಟಕ್ಕೆ ತೆರಳಿ ಕೆಲಸ ಮಾಡುವ ಅಧಿಕಾರಿಗಳು ತಮ್ಮ ಕಾರ್ಯಕ್ರಮಗಳ ನೈಜತೆಯನ್ನು ಸಾಬೀತುಪಡಿಸಲು ಜಿಪಿಎಸ್ ಆಧಾರಿತ ಸಮಯ ದಿನಾಂಕ ನಮೂದಾಗಿರುವ ಛಾಯಾ ಚಿತ್ರಗಳೊಂದಿಗೆ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ಜತೆಗೆ ಅಧಿಕಾರಿಗಳ ದೈನಂದಿನ ಹಾಜರಾತಿಯನ್ನು 'ಕರ್ತವ್ಯ' ಆಪ್‌ನಲ್ಲಿ ನಿಖರವಾಗಿ ನಮೂದಿಸುವುದನ್ನು ಕಡ್ಡಾಯಗೊಳಿಸಲಾಗಿದೆ ಎಂದರು.ಜಿಲ್ಲೆಯ ಸಾಂತ್ವನ ಕೇಂದ್ರಗಳು ಹಾಗೂ 'ಶಕ್ತಿ ಸದನ'ಗಳ (ಸ್ವಾಧಾರ್ ಗೃಹ) ನಿರ್ವಹಣೆಯಲ್ಲಿ ಸಂಪೂರ್ಣ ಪಾರದರ್ಶಕತೆ ಕಾಯ್ದುಕೊಳ್ಳಲು ಮುಂದಿನ 15 ದಿನಗಳ ಒಳಗಾಗಿ ಆಧಾರ್ ಆಧಾರಿತ ಬಯೋಮೆಟ್ರಿಕ್ ಹಾಜರಾತಿ ಮತ್ತು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಸಿಸಿಟಿವಿ ಲೈವ್‌ಸ್ಟ್ರೀಮಿಂಗ್ ಮೇಲಾಧಿಕಾರಿಗಳ ಮೊಬೈಲ್‌ಗೆ ಸಂಪರ್ಕ ಕಲ್ಪಿಸದ ಕೇಂದ್ರಗಳಿಗೆ ಅನುದಾನ ತಡೆಹಿಡಿಯಲಾಗುವುದು ಎಂದು ಎಚ್ಚರಿಸಿದರು.

> ಇದಲ್ಲದೆ, ಜಿಲ್ಲೆಯ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳ ಶಾರೀರಿಕ ಬೆಳವಣಿಗೆ ಮತ್ತು ಅಪೌಷ್ಟಿಕತೆ ಅಳೆಯಲು ಬಳಸುವ ತೂಕದ ಯಂತ್ರಗಳು, 'ಸ್ಟೇಡಿಯೋಮೀಟರ್' ಹಾಗೂ 'ಇನ್ಫಾಂಟೋಮೀಟರ್' ಉಪಕರಣಗಳ ಸ್ಥಿತಿಗತಿಯನ್ನು ತಕ್ಷಣವೇ ಪರಿಶೀಲಿಸಿ, ಕೆಟ್ಟುಹೋಗಿರುವ ಉಪಕರಣಗಳ ಪಟ್ಟಿ ತಯಾರಿಸಿ ಹೊಸ ಉಪಕರಣಗಳ ಖರೀದಿಗಾಗಿ ವರದಿ ಸಲ್ಲಿಸಲು ಸೂಚಿಸಿದರು. -ಜಿಲ್ಲಾಧಿಕಾರಿ ಇಕ್ರಂ ಶರೀಫ್

ಮಹಿಳಾ ಸಹಾಯವಾಣಿ 181 ಹಾಗೂ ಮಕ್ಕಳ ಸಹಾಯವಾಣಿ 1098 ಕುರಿತು ಗ್ರಾಮೀಣ ಭಾಗದಲ್ಲಿ ವ್ಯಾಪಕ ಅರಿವು ಮೂಡಿಸಲು ತಿಳಿಸಿದ ಅವರು, ಗರ್ಭಿಣಿ ಮತ್ತು ಬಾಣಂತಿ ಮಹಿಳೆಯರ ಪೌಷ್ಟಿಕಾಂಶ ಹಾಗೂ ಆರೋಗ್ಯ ಸುಧಾರಣೆಗಾಗಿ ಕೇಂದ್ರ ಸರ್ಕಾರದ ಪ್ರಧಾನಮಂತ್ರಿ ಮಾತೃವಂದನಾ ಯೋಜನೆ ಜಾರಿಯಲ್ಲಿದೆ.

> ಇದೇ ವೇಳೆ, ಪ್ರಸ್ತುತ ಖಾಸಗಿ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ 'ಸ್ವಧಾರ ಗೃಹ'ವನ್ನು ತಕ್ಷಣವೇ ಸೂಕ್ತ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲು ಆದೇಶಿಸಲಾಯಿತು.
> ಇದರಿಂದ ಸರ್ಕಾರಿ ಹಣ ಉಳಿತಾಯವಾಗುವುದರ ಜತೆಗೆ ನಿವಾಸಿಗಳಿಗೆ ಉತ್ತಮ ಹಾಗೂ ಸುರಕ್ಷಿತ ವಾತಾವರಣ ಸಿಗಲಿದೆ.

> ಪ್ರತಿಯೊಂದು ಸಭೆಯಲ್ಲೂ ಕನಿಷ್ಠ 100 ಕ್ಕೂ ಹೆಚ್ಚು ಸಾರ್ವಜನಿಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ಸ್ಥಳೀಯ ಜನಪ್ರತಿನಿಧಿಗಳು ಕಡ್ಡಾಯವಾಗಿ ಭಾಗವಹಿಸುವುದನ್ನು ಸಂಬಂಧಪಟ್ಟ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿಯ ಇಲಾಖೆಯ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಖಾತರಿಪಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.
> -ಜಿಲ್ಲಾಧಿಕಾರಿ ಇಕ್ರಂ ಶರೀಫ್

ಈ ಯೋಜನೆಯಡಿ ಮೊದಲ ಮಗುವಿಗೆ 2 ಕಂತುಗಳಲ್ಲಿ ಒಟ್ಟು 5,000 ಹಾಗೂ ಎರಡನೇ ಮಗು ಹೆಣ್ಣಾಗಿದ್ದರೆ ಒಂದೇ ಕಂತಿನಲ್ಲಿ 6,000 ಧನಸಹಾಯ ನೀಡಲಾಗುತ್ತದೆ.ಈ ಹಣ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮೆಯಾಗುತ್ತದೆ. ಸರ್ಕಾರಿ ನೌಕರರು ಹಾಗೂ ಸಾರ್ವಜನಿಕ ಉದ್ದಿಮೆಗಳ ನೌಕರರನ್ನು ಹೊರತು ಪಡಿಸಿ, ಉಳಿದ ಅರ್ಹ ಮಹಿಳೆಯರು ಇದರ ಪ್ರಯೋಜನ ಪಡೆಯಬಹುದು. ಎಂದು ತಿಳಿಸಿದರು.

## 150 ಕೋಟಿ ರೂ. ಪ್ರೋತ್ಸಾಹ ಧನ ಬಿಡುಗಡೆ ಮಾಡದ ರಾಜ್ಯ ಸರ್ಕಾರ

• **ಉದಯವಾಹಿನಿ, ಹುಬ್ಬಳ್ಳಿ:**

ಭಾರತದ ಏಕೈಕ ಬಿಐಎಸ್ ಪ್ರಮಾಣೀಕೃತ ಧ್ವಜ ತಯಾರಿಕಾ ಘಟಕವಾದ ಹುಬ್ಬಳ್ಳಿಯ ಬೆಂಗೇರಿ ಖಾದಿ ಒಕ್ಕೂಟಕ್ಕೆ ಈ ಸೀಸನ್ ನಲ್ಲಿ ಎರಡು ಪಟ್ಟು ಹೊಡೆತ ಬಿದ್ದಿದೆ. ಕೇಂದ್ರದ ಧ್ವಜ ತಿದ್ದುಪಡಿ ನೀತಿಯಿಂದಾಗಿ ಕಳೆದ ಮೂರು ವರ್ಷಗಳಲ್ಲಿ ವ್ಯವಹಾರದಲ್ಲಿ ಕುಸಿತಕ್ಕೆ ಕಾರಣವಾಗಿದೆ. ಅದರ ಜೊತೆಗೆ ರಾಜ್ಯ ಸರ್ಕಾರ ನೇಕಾರರಿಗೆ ನೀಡಬೇಕಾದ ಬಾಕಿ ಇರುವ ಪ್ರೋತ್ಸಾಹ ಧನ ಈಗ 150 ಕೋಟಿ ರೂ. ಗಳನ್ನು ತಲುಪಿದೆ. ಖಾದಿ ಒಕ್ಕೂಟದ ಸದಸ್ಯರು ಈಗ ಬಾಕಿ ಇರುವ ಪ್ರೋತ್ಸಾಹ ಧನ ಬಿಡುಗಡೆಗಾಗಿ ರಾಜ್ಯ ಸರ್ಕಾರವನ್ನು ಸಂಪರ್ಕಿಸಲು ಯೋಜಿಸುತ್ತಿದ್ದಾರೆ.

ಬಾಕಿ ಇರುವ ಪ್ರೋತ್ಸಾಹ ಧನ ಮತ್ತು ಇತರ ಸಂಬಂಧಿತ ವಿಷಯಗಳ ಬಗ್ಗೆ ವಿವರಿಸಲು ನಾವು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಸಭೆ ನಡೆಸಲು ಬಯಸುತ್ತಿದ್ದೇವೆ. ರಾಜ್ಯದಲ್ಲಿ, ವಿಶೇಷವಾಗಿ ವಿಧಾನಸೌಧದ ಸುತ್ತಲೂ ನಕಲಿ ಖಾದಿ ಭಂಡಾರ್‌ಗಳಿವೆ ಎಂದು ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘದ (ಕೆಕೆಜಿಎಸ್‌ಎಸ್) ಕಾರ್ಯದರ್ಶಿ ಶಿವಾನಂದ್ ಮಠಪತಿ ಆರೋಪಿಸಿದರು.



ಉದಯವಾಹಿನಿ ಚಿತ್ರ

ಈ ಋತುವಿನಲ್ಲಿ ಅವರು 2 ಕೋಟಿ ಗುರಿಯಲ್ಲಿ 88 ಲಕ್ಷಕ್ಕೆ ಮಾತ್ರ ಧ್ವಜಗಳನ್ನು ಮಾರಾಟ ಮಾಡಲು ಸಾಧ್ಯವಾಯಿತು. ಖಾದಿಯೇತರ ತ್ರಿವರ್ಣ ಧ್ವಜಗಳನ್ನು ಬಳಸಲು ಕೇಂದ್ರವು ಧ್ವಜ ಸಂಹಿತೆಗಳಿಗೆ ತಿದ್ದುಪಡಿ ಮಾಡಿರುವುದರಿಂದ ಮಾರಾಟದಲ್ಲಿ ಕುಸಿತ ಉಂಟಾಗಿದೆ. ಖಾದಿ ಧ್ವಜಗಳು ಪಾಲಿಯೆಸ್ಟರ್ ಧ್ವಜಗಳಿಗಿಂತ ಭಾರವಾಗಿದ್ದು ದುಬಾರಿಯಾಗಿರುವುದರಿಂದ ಮಾರಾಟ ಕುಸಿಯಲು ಕಾರಣವಾಗಿದೆ ಎಂದಿದ್ದಾರೆ. ಖಾದಿ ಧ್ವಜಗಳು ಮತ್ತು ಇತರ ವಸ್ತುಗಳ ಬಳಕೆಯನ್ನು ಸರ್ಕಾರ ಪ್ರೋತ್ಸಾಹಿಸಬೇಕು. ರಾಜ್ಯದಲ್ಲಿ ನೂಲುವವರು ಮತ್ತು ನೇಕಾರರ ನೈತಿಕತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಬಾಕಿ ಇರುವ ಪ್ರೋತ್ಸಾಹ ಧನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಬೇಕು ಎಂದು ಮಠಪತಿ ಹೇಳಿದರು.

> **ಖಾದಿ ವಸ್ತುಗಳ ನಕಲು**
> ಮಾರುಕಟ್ಟೆಯಲ್ಲಿ ಖಾದಿ ವಸ್ತುಗಳ ನಕಲು ಮಾಡುವುದನ್ನು ತಡೆಯಲು ಸರ್ಕಾರ ಪ್ರತಿ ಜಿಲ್ಲೆಯಲ್ಲಿ ಖಾದಿ ಮಂಡಳಿ ಅಧಿಕಾರಿಗಳನ್ನು ನೇಮಿಸಿದೆ. ಸರ್ಕಾರ ಜನರು ಖಾದಿಯನ್ನು ಹೆಚ್ಚು ಬಳಸುವಂತೆ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದ್ದಾರೆ.

## ಹರ ಘರ ತಿರಂಗಾ ಯಾತ್ರೆಗೆ ಮಾಜಿ ಶಾಸಕ ಸುಭಾಷ ಗುತ್ತೇದಾರ ಚಾಲನೆ

• **ಉದಯವಾಹಿನಿ, ಆಳಂದ:**

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ದೇಶಭಕ್ತಿ ಹಾಗೂ ರಾಷ್ಟ್ರಾಭಿಮಾನವನ್ನು ಸಾರುವ ಉದ್ದೇಶದಿಂದ ಬಿಜೆಪಿ ಯುವ ಮೋರ್ಚಾ ವತಿಯಿಂದ ಪಟ್ಟಣದಲ್ಲಿ ಗುರುವಾರ ಭವ್ಯ ಹರ ಘರ ತಿರಂಗಾ ಯಾತ್ರೆ ಹಾಗೂ ಬೈಕ್ ರ‍್ಯಾಲಿ ನಡೆಯಿತು. ಬಿಜೆಪಿ ಯುವ ಮೋರ್ಚಾ ತಾಲ್ಲೂಕು ಅಧ್ಯಕ್ಷ ನಾಗರಾಜ್ ದೇನಕ್ ನೇತೃತ್ವದಲ್ಲಿ ನಡೆದ ರ‍್ಯಾಲಿಗೆ ಮಾಜಿ ಶಾಸಕ ಸುಭಾಷ ಗುತ್ತೇದಾರ ರಾಷ್ಟ್ರಧ್ವಜ ತೋರಿ ಚಾಲನೆ ನೀಡಿ ಶುಭ ಕೋರಿದರು. ಪಟ್ಟಣದ ಸಿದ್ಧಾರ್ಥ ಚೌಕ್‌ನಿಂದ ಆರಂಭಗೊಂಡ ರ‍್ಯಾಲಿಯು ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಬಸ್ ನಿಲ್ದಾಣದ ಹಳೆಯ ಚೆಕ್‌ಪೋಸ್ಟ್‌ನಲ್ಲಿರುವ ಸಂಗೊಳ್ಳಿ ರಾಯಣ್ಣನವರ ಪ್ರತಿಮೆವರೆಗೆ ಸಾಗಿತು.

ಯುವ ಮುಖಂಡರು, ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ಬೈಕ್‌ಗಳಲ್ಲಿ ರಾಷ್ಟ್ರಧ್ವಜ ಹಿಡಿದು ದೇಶಭಕ್ತಿಯ ಘೋಷಣೆಗಳೊಂದಿಗೆ ರ‍್ಯಾಲಿಯಲ್ಲಿ ಪಾಲ್ಗೊಂಡರು. ಪಟ್ಟಣದ ಪ್ರಮುಖ ವೃತ್ತ ಹಾಗೂ ರಸ್ತೆಗಳಲ್ಲಿ ಸಾಗಿದ ತಿರಂಗಾ ಯಾತ್ರೆ ಸಾರ್ವಜನಿಕರ ಗಮನ ಸೆಳೆಯಿತು.ಹಳೆಯ ಚೆಕ್‌ಪೋಸ್ಟ್‌ನಲ್ಲಿರುವ ಸಂಗೊಳ್ಳಿ ರಾಯಣ್ಣನವರ ಪ್ರತಿಮೆ ಬಳಿ ಜಿಪಂ ಮಾಜಿ ಉಪಾಧ್ಯಕ್ಷ ಹರ್ಷನಂದ ಗುತ್ತೇದಾರ ಅವರು ರಾಯಣ್ಣನವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.

## ''ನಮ್ಮ ಭೂಮಿ- ನಮ್ಮ ನೀರು -ನಮ್ಮ ಶಕ್ತಿ'' ಅಂತರ್ಜಲ ಸಂರಕ್ಷಣೆ: ಜಿಲ್ಲಾ ಮಟ್ಟದ ಕಲಾ ಚಿತ್ರ ಸ್ಪರ್ಧೆ

• **ಉದಯವಾಹಿನಿ, ಮಂಗಳೂರು**

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಇವರ ಸೂಚನೆಯಂತೆ ಜಿಲ್ಲಾ ಅಂತರ್ಜಲ ಕಛೇರಿ, ದ.ಕ. ಜಿಲ್ಲೆ ಇದರ ವತಿಯಿಂದ ''ನಮ್ಮ ಭೂಮಿ- ನಮ್ಮ ನೀರು -ನಮ್ಮ ಶಕ್ತಿ'' ವಿಷಯದ ಬಗ್ಗೆ ಅಂತರ್ಜಲ ಸಂರಕ್ಷಣೆಯ ಬಗ್ಗೆ ಅರಿವು ಮೂಡಿಸಲು ಶಾಲಾ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಕಲಾ ಚಿತ್ರ ಸ್ಪರ್ಧೆಯನ್ನು ನಗರದ ಕೊಡಿಯಾಲ್ ಬೈಲ್ ಸಂತ ಅಲೋಶಿಯಸ್ ಪ್ರೌಢಶಾಲೆಯಲ್ಲಿ ಆಯೋಜಿಸಲಾಯಿತು. ಸಂತ ಅಲೋಶಿಯಸ್ ಪ್ರೌಢಶಾಲೆ ಪ್ರಾಂಶುಪಾಲ ಫಾ। ಜಾನ್ಸನ್ ಪಿಂಟೋ ಉದ್ಘಾಟಿಸಿ, ಮಾತನಾಡಿ ನಮ್ಮ ಪರಿಸರದಲ್ಲಿ ಆಗುತ್ತಿರುವಂತಹ ಅತಿವೃಷ್ಟಿ ಅನಾವೃಷ್ಟಿ ಮತ್ತು ಅಂತರ್ಜಲದ ಕುಸಿತಕ್ಕೆ ನಮ್ಮ ಕೆಲವು ಕೃತ್ಯಗಳೇ ಕಾರಣವಾಗಿದೆ.

ಆದ್ದರಿಂದ ಅದನ್ನು ಸರಿಪಡಿಸುವುದು ನಮ್ಮ ಕರ್ತವ್ಯವಾಗಿದೆ ಎಂದು ಹೇಳಿದರು. ಅಂತರ್ಜಲ ಕಛೇರಿ ಹಿರಿಯ ಭೂ ವಿಜ್ಞಾನಿ ಶೇಕ್ ದಾವೂದ್ ಮಾತನಾಡಿ, ನಮ್ಮ ನೆಲ ಜಲವನ್ನು ಸಂರಕ್ಷಿಸಿ ಮುಂದಿನ ಜನಾಂಗಕ್ಕೆ ಉಳಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ತಮ್ಮ ಚಿತ್ರಕಲೆಯ ಮೂಲಕ ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡಬೇಕು ಎಂದು ಹೇಳಿದರು.



ಉದಯವಾಹಿನಿ ಚಿತ್ರ

ಶಿಕ್ಷಣಾಧಿಕಾರಿ ಮನೋರಮ ಆರ್. ಅಧ್ಯಕ್ಷತೆ ವಹಿಸಿ ಮಾತನಾಡಿ, ನೀರಿನ ಮಹತ್ವ ಹಿಂದಿನಿಂದಲೂ ನಮ್ಮ ಪೂರ್ವಜರು ಅರಿತಿರುವುದರಿಂದಲೇ ನದಿಗಳನ್ನು ದೇವತೆಗಳೆಂದು ಪರಿಗಣಿಸಿ, ಯಾವುದೇ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಸಂಕಲ್ಪಿಸುವಾಗ ಗಂಗೆ, ಯಮುನೆ ಇತ್ಯಾದಿ ನದಿಗಳ ಸ್ಮರಣೆ ಮಾಡುವ ಕ್ರಮ ಬೆಳೆದು ಬಂದಿದೆ. ನೀರಿಲ್ಲದೆ ಯಾರೂ ಬದುಕಲು ಸಾಧ್ಯವಿಲ್ಲ. ಆಹಾರ, ಆಮ್ಲಜನಕ ನೀರಿನಿಂದಲೇ ಸಾಧ್ಯವಾಗಿದೆ. ಅಂತಹ ಅಮೂಲ್ಯ ಸಂಪತ್ತನ್ನು ಉಳಿಸಲು ಜಾಗೃತಿ ಮೂಡಿಸುವ ಈ ಕಾರ್ಯಕ್ರಮ ಯಶಸ್ವಿಯಾಗಲಿ, ಉತ್ತಮ ಜಾಗೃತಿ ಮೂಡುವ ಕಲಾಕೃತಿ ಚಿತ್ರ ರೂಪದಲ್ಲಿ ಮೂಡಿಬರಲಿ ಎಂದು ಹಾರೈಸಿದರು.

> ವಿಷಯ ಪರಿವೀಕ್ಷಕ ಲಕ್ಷ್ಮೀನಾರಾಯಣ ಅವರು ಪ್ರಸ್ತಾವನೆಯಲ್ಲಿ ಎಲ್ ನೀನೋ ಪರಿಣಾಮದಿಂದ ಹವಾಮಾನದಲ್ಲಿ ಆಗುತ್ತಿರುವ ತೀವ್ರತರವಾದಂತ ಬದಲಾವಣೆ, ಅಂತರ್ಜಲದ ಕುಸಿತ ಹಾಗೂ ಇದರಿಂದ ಮುಂದಿನ ಜನಾಂಗಕ್ಕೆ ಆಗಬಹುದಾದ ದೀರ್ಘಕಾಲೀನ ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಿದರು.


# ಲಿಂಕ್ ಕ್ಲಿಕ್ ಮಾಡಿ 22 ಲಕ್ಷ ರೂ. ಹಣ ಕಳೆದುಕೊಂಡ ಹಾವೇರಿ ಮಹಿಳೆ!

### ಸಚಿವೆ ನಿರ್ಮಲಾ ಸೀತಾರಾಮನ್‌ರಿದ್ದ ಫೇಕ್ ವಿಡಿಯೋದಲ್ಲಿನ ಲಿಂಕ್ ಕ್ಲಿಕ್ ಮಾಡಿದ್ದ ಮಹಿಳೆ 22 ಲಕ್ಷ ಕಳೆದುಕೊಂಡಿದ್ದಾರೆ.

• **ಉದಯವಾಹಿನಿ, ಹಾವೇರಿ:**

ಇತ್ತೀಚಿನ ದಿನಗಳಲ್ಲಿ ರೀಲ್ಸ್ ಫೇಸ್ಬುಕ್ ಮತ್ತು ಇನ್ಸ್ಟಾಗ್ರಾಂ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಬರುವ ಎ ಐ ವಿಡಿಯೋ ಲಿಂಕ್ ಒತ್ತಿ ನಾಗರಿಕರು ಲಕ್ಷಾಂತರ ರೂಪಾಯಿ ಹಣ ಕಳೆದುಕೊಳ್ಳುತ್ತಿದ್ದಾರೆ. ಫೇಸ್‌ಬುಕ್‌ನಲ್ಲಿ ಬಂದಿರೋ ವಿಡಿಯೋವನ್ನು ನೋಡಿ, ಲಿಂಕ್ ಬಳಸಿ ಹಾವೇರಿಯಲ್ಲಿ ಮಹಿಳೆಯೊಬ್ಬರು 22 ಲಕ್ಷ ರೂಪಾಯಿ ಹಣ ಕಳೆದುಕೊಂಡಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾತನಾಡಿದ್ದರೆನ್ನಲಾದ ಎಐ ಬಳಸಿ ಮಾಡಲಾದ ಪೇಕ್ ವಿಡಿಯೋ ನಂಬಿ ಮಹಿಳೆ ಹಣ ಹಾಕಿ, ಲಕ್ಷಾಂತರ ರೂಪಾಯಿ ಹಣ ಕಳೆದುಕೊಂಡಿದ್ದಾರೆ. ಎಐ ಟೆಕ್ನಾಲಜಿ ಮೂಲಕ ಖ್ಯಾತನಾಮರ ವಿಡಿಯೋ ಎಡಿಟ್ ಮಾಡಿ ಪೇಕ್ ವಿಡಿಯೋ ಹಾಕಿ ಹಣ ಲೂಟಿ ಮಾಡಿದ್ದಾರೆ. ಮೊಬೈಲ್‌ನಲ್ಲಿ ಎ ಐ ಬಳಸಿಕೊಂಡು ಸುಳ್ಳು ವಿಡಿಯೋ ಹಾಕುವ ಮೂಲಕ ಹಣ ಕದಿಯುವ ಖದೀಮರಿದ್ದಾರೆ. ಹೊಸ ಹೊಸ ಟೆಕ್ನಾಲಜಿ ಬಂದಂತೆ ಸೈಬರ್ ವಂಚಕರು ಹೆಚ್ಚಾಗಿದ್ದಾರೆ. ಮೊದಲು ಬೇರೆ ಬೇರೆ ಲಿಂಕ್ ಬಳಸಿ ಮೋಸ ಮಾಡುತ್ತಿದ್ದರು. ಅದರಲ್ಲೂ ಈಗ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಾಗೂ ಪ್ರಧಾನಿ ನರೇಂದ್ರ ಮೋದಿ, ಹಾಗೂ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ ಸೇರಿದಂತೆ ಪ್ರಮುಖರ ಎಐ ವಿಡಿಯೋ ಬಳಕೆ ಮಾಡಿಕೊಂಡು ಹಣ ಲಪಟಾಯಿಸುತ್ತಿದ್ದಾರೆ.

> 1 : ಸೈಬರ್ ವಂಚಕರು ಹೆಚ್ಚಾಗಿದ್ದಾರೆ
> 2 : ಸೈಬರ್ ಕಳ್ಳರನ್ನು ಪತ್ತೆ ಮಾಡಿ
> 3 : ಬಡ ಜನರದು ಮುಗ್ಧ ಮನಸ್ಸು





ಉದಯವಾಹಿನಿ ಚಿತ್ರ



> ಈಗ ಹಾವೇರಿ ಸೈಬರ್ ಕ್ರೈಮ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಹೀಗಾಗಿ ಯಾವುದೇ ಲಿಂಕ್ ಬಂದರು ಒತ್ತಬೇಡಿ. ಮೊಬೈಲ್ ಕರೆಯಲ್ಲಿ ಅವರು ಹೇಳಿದಾಗ ಓಟಿಪಿ ಹಾಗೂ ಬ್ಯಾಂಕ್ ಮೂಲಕ ಹಣ ಹಾಕಿ ಮೋಸ ಹೋಗಬೇಡಿ ಎಂದು ಮನವಿ ಮಾಡಿದ್ದಾರೆ.
> - ಹಾವೇರಿ ಎಸ್ಪಿ ಯಶೋಧಾ ವಂಟಗೋಡಿ

ಈಗ ಸೈಬರ್ ವಂಚಕರು ಎಐ ತಂತ್ರಜ್ಞಾನ ಬಳಸಿಕೊಂಡು ಗಣ್ಯ ವ್ಯಕ್ತಿಗಳ ವಿಡಿಯೋ ಮಾಡಿ ಮೋಸದ ಜಾಲಗಳನ್ನು ಸೃಷ್ಟಿ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರ ಇಂತಹುಗಳ ಬಗ್ಗೆ ಕಠಿಣ ಕ್ರಮ ತೆಗೆದುಕೊಳ್ಳಬೇಕು. ಸಾರ್ವಜನಿಕರು ಗಣ್ಯರ ವಿಡಿಯೋ ನೋಡಿ ಹಣದ ಆಸೆಗೆ ಲಕ್ಷಾಂತರ ರೂಪಾಯಿ ಹಣ ಹಾಕಿ ಮೋಸ ಹೋಗುತ್ತಿದ್ದಾರೆ. ಕೇಂದ್ರ ಸರ್ಕಾರ ಫೇಕ್ ವಿಡಿಯೋ ಮತ್ತು ಸೈಬರ್ ಕಳ್ಳರನ್ನು ಪತ್ತೆ ಮಾಡಿ ಬಂಧನ ಮಾಡಬೇಕು. ಇಂತಹ ಆಪ್‌ಗಳ ನಿಷೇಧ ಮಾಡಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಈ ಕುರಿತಂತೆ ಮಾತನಾಡಿದ ಹಾವೇರಿಯ ರಮೇಶ್ ಕಡಕೋಳ್, ಇತ್ತಿಚೆಗೆ ಎಐ ತಂತ್ರಜ್ಞಾನ ಬಳಸಿಕೊಂಡು ಜನರಿಗೆ ಮೋಸ ಮಾಡುವುದು ದೊಡ್ಡ ಮತ್ತು ಹಗುರ ಕೆಲಸವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಯಾರದಾದರೂ ವಿಡಿಯೋ, ಆಡಿಯೋ ತೆಗೆದುಕೊಂಡು ಎಐಯಲ್ಲಿ ವಿಡಿಯೋ ಮಾಡಿದರೆ ಅದರಲ್ಲಿ ನಿಜ ಯಾವುದು ಸುಳ್ಳು ಯಾವುದು ಗೊತ್ತಾಗುವುದಿಲ್ಲ. ಹಣದ ಸಮಸ್ಯೆ ಇರುವ ಬಡ ಜನರದು ಮುಗ್ದ ಮನಸ್ಸು. ಇಂತಹ ಸಂದರ್ಭದಲ್ಲಿ ಅವರ ಹತ್ತಿರ ಇರುವ ಹಣವನ್ನು ಈ ರೀತಿ ವಂಚಕರು ಯಮಾರಿಸುತ್ತಾರೆ ಎಂದರು.

ನಿವೃತ್ತಿಯ ನಂತರ ಪಿಂಚಣಿಯಲ್ಲಿ ಹಣ ಪಡೆದು ಸುಖಮಯ ಜೀವನ ನಡೆಸುವ ಕನಸು ಕಂಡ ವಯೋವೃದ್ದರನ್ನು ಸಹ ಇಲ್ಲಿ ವಂಚಿಸಲಾಗಿದೆ. ಐದು ಸಾವಿರಕ್ಕೆ ಹತ್ತು ಸಾವಿರ ಸಿಗುತ್ತೆ ಅಂದ ತಕ್ಷಣ ಹಣ ಹಾಕಿ ಬಿಡುತ್ತಾರೆ. ನಿವೃತ್ತಿಯಿಂದ ಬಂದ ಹಣ ಅಷ್ಟೇ ಅಲ್ಲದೇ ಕೋಟ್ಯಂತರ ರೂಪಾಯಿ ಕಳೆದುಕೊಂಡವರು ಇದ್ದಾರೆ.

> 2 ಸಾವಿರ ರೂ. ಹೂಡಿಕೆ ಮಾಡಿದರೆ ನಿಮಗೆ ಡಬಲ್ ಹಣ, ತ್ರಿಬಲ್ ಹಣ ಬರುತ್ತೆ ಅಂತಾ ವಿಡಿಯೋಗಳು ಸಾಮಾಜಿಕ ಜಾಲತಾಣಗಳಲ್ಲಿ ಸಾಕಷ್ಟು ವೈರಲ್ ಆಗುತ್ತಿವೆ. ಇದನ್ನು ನೋಡಿದ ಹಾವೇರಿ ನಿವಾಸಿಯೊಬ್ಬರು ವಿಡಿಯೋ ಲಿಂಕ್ ಒತ್ತಿ ಬರೋಬ್ಬರಿ 22 ಲಕ್ಷಕ್ಕೂ ಅಧಿಕ ಹಣ ಕಳೆದುಕೊಂಡಿದ್ದಾರೆ.

> ಆರೋಪಿಗಳು ಎಐ ತಂತ್ರಜ್ಞಾನ ಬಳಸಿಕೊಂಡು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಅಂಬಾನಿ, ಅದಾನಿ ಸುಧಾಮೂರ್ತಿ ವಿಡಿಯೋ ಎಡಿಟ್ ಮಾಡಿ ಗ್ರೂಪ್‌ಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹಾಕುತ್ತಾರೆ. ಐದು ಸಾವಿರಕ್ಕೆ ಐವತ್ತು ಸಾವಿರ ಲಕ್ಷಕ್ಕೆ 10 ಲಕ್ಷ ಕೋಟಿ ಎಂದು ಆಮಿಷ ಒಡ್ಡುತ್ತಾರೆ.
> -ರಮೇಶ್ ಕಡಕೋಳ್